
ಡಿಸೆಂಬರ್ ೧೯೭೭ ಸಂಪುಟ :

ಬಸವಶಕ ೮೭೧ ಸಂಚಿಕೆ :

ಕಲ್ಯಾಣ ಕಿರಣ



ಬೆಲೆ ೧ ರೂ

ಕಲ್ಯಾಣ ಕಿರಣ

ಸಂಪುಟ : ೩ ಡಿಸೆಂಬರ್ : ೧೯೭೭
ಸಂಚಿಕೆ : ೮ ಬಸವ ಶಕೆ : ೮೭೧

ಈ ಸಂಚಿಕೆಯಲ್ಲಿ ಏನಿದೆ ?

ಮುಖಪುಟ : ಕನ್ನಡದ ರಸ ಋಷಿ ಕುವೆಂಪು

ಕಲ್ಯಾಣ ಕಿರಣ

ಬಸವ ಚರಣಕೆ — ನುಡಿ-ನೈವೇದ್ಯ

ಮುಕ್ತಿದಾಯಕ ಶರಣ ರಕ್ಷಕ ನಿತ್ಯಮೂರುತಿ ಬಸವನೇ
ಭಕ್ತಿಯಿಂದಲಿ ಚರಣಕಮಲಕೆ ನಿತ್ಯವಂದಿಪೆ ತಂದೆಯೇ ॥ಪ॥


ಅರಿವು ಇಲ್ಲದ ಮನುಜ ಜನ್ಮವು ಶಾಪವೆನ್ನುತ ನೊಂದೆನು
ಮರೆವ ಹರಿಯುವ ಗುರುವೆ ಎನುತಲಿ ನಿನ್ನ ಚರಣವ ಪಿಡಿದೆನು ॥
ನಿನ್ನ ಕರುಣೆಯು ಎನ್ನ ಬಾಳಿನ ರಕ್ಷೆ ಎನುತಲಿ ನಂಬಿಹೆ
ಬನ್ನ ತೊಡೆಯುವ ಬೆಳಗ ಬೀರುವ ಶಕ್ತಿ ಎನ್ನುತ ಕಾದಿಹೆ. ॥೧॥

ಮೋಹರಹಿತನೆ ಜ್ಞಾನಭರಿತನೆ ಪರಮಶಾಂತಿಯ ಧಾಮವೇ
ಕಾಹುದೆಮ್ಮನು ಕೈಯಬಿಡದೆ ಹರನ ಕರುಣೆಯ ಕಂದನೇ।
ಕಾಮಕ್ರೋಧದ ಕೊಳೆಯ ಕಳೆದು ಭಕ್ತಿಜಲದಲ್ಲಿ ಮೀಯಿಸು
ಜ್ಞಾನದುಡುಗೆಯ ಮನಕೆ ತೊಡಿಸಿ ಮೃಡನ ಪಾದಕೆ ಏರಿಸು; ॥೨॥

ನಿನ್ನ ಚಿನ್ಮಯ ಜ್ಞಾನವೆನಗೆ ಮಾರ್ಗದರ್ಶಕ ದೀಪ್ತಿಯು
ನಿನ್ನ ಮಮತೆಯ ಹೃದಯ ಮಂದಿರ ನನಗೆ ಶಾಂತಿಯ ಹಂದರ
ನಿನ್ನ ಪಾವನ ಚರಣಯುಗ್ಮವು ಭವವ ದಾಂಟಿಪ ದೋಣಿಯು
ಸನ್ನುತಾಂಗನೆ ನಿನ್ನ ನೆನಹಿದು ಬಾಳಿಗಮೃತ ಸೋನೆಯು. ॥೩॥

ನೀನು ಆಡಿಪ ಬೊಂಬೆ ನಾನು, ಮಿಡಿಸೆ ನುಡಿಯುವ ವೀಣೆಯು
ನೀನು ಊಡಿಸಿ ಉಣಿಸಿ ಸಲಹಲು ಎನ್ನ ಬಾಳೊಳು ಝೇಂಕೃತಿ ;
ಮಂತ್ರಪುರುಷನೆ ಶಾಂತಿಚಂದ್ರನೆ ದುರಿತತಿಮಿರಕೆ ಭಾನುವೆ ?
ಕೀರ್ತಿಸುವೆನನವರತ ನಿನ್ನನು ಸಚ್ಚಿದಾನಂದ ಕಂದನೇ. ॥೪॥

ನಿಮ್ಮ ಅನಿಸಿಕೆ



ಪೂಜ್ಯ ಮಾತಾಜಿಯವರಿಗೆ

ಶಿರಸಾಷ್ಟಾಂಗ ಪ್ರಣಾಮಗಳು.

ಕಲ್ಯಾಣ ಕಿರಣ (ಅಕ್ಟೋಬರ್ ಸಂಚಿಕೆ) ಓದಿದೆ. ತಮ್ಮ ಸಂಪಾದಕೀಯ ನಿಜಕ್ಕೂ ವೀರ್ಯವತ್ತಾಗಿದೆ, ವಿಚಾರ ಪೂರಿತವಾಗಿದೆ. ಎಂದಿಗೆ ಇದು ನಮ್ಮ ಶಾಸಕರ ತಲೆಯಲ್ಲಿ ನುಗ್ಗಿ ಕಾರ್ಯಗತ ವಾಗುತ್ತದೋ ಆ ಭಗವಂತನೇ ಬಲ್ಲ. ಇಡೀ ಭಾರತ ನಿರ್ವೀರ್ಯವಾಗಿದೆ. ಎಲ್ಲರೂ ಸ್ವಾರ್ಥರೂ, ಜಾತ್ಯಂಧರೂ ಆಗುತ್ತಿದ್ದಾರೆ.

ತಮ್ಮ ಪ್ರವಾಸದ ಪ್ರಬಂಧ ನಿಜಕ್ಕೂ ಮನೋಜ್ಞವಾಗಿದೆ. ಬರಿಯ ನಿರೂಪಣೆ ಯಲ್ಲದೆ ರಸವತ್ತಾಗಿ, ತಾತ್ತ್ವಿಕವಾಗಿ ಇದೆ. ಪ್ರವಾಸ ಸಾಹಿತ್ಯದಲ್ಲಿ ಅತ್ಯುತ್ತಮವಾಗಿ ನಿಲ್ಲಬಲ್ಲುದೆಂದು ನನಗೆ ಭರವಸೆ ಇದೆ. ಸಾಹಿತ್ಯದ ಎಲ್ಲಾ ಪ್ರಾಕಾರ ಗಳಲ್ಲಿಯೂ ಸಮಾನವಾಗಿ ಹರಿಯಬಲ್ಲ ತಮ್ಮ ಲೇಖನಿಯ ಸಾಮರ್ಥ್ಯಕ್ಕೆ ಮಾರು ಹೋಗಿದ್ದೇನೆ. ತಮ್ಮ ಲೇಖನಿಯು ಹೀಗೆಯೇ ಮುಂದುವರಿದು ನನ್ನಂಥ ವರಿಗೆ ದಾರಿದೀಪವಾಗಲೆಂದು ಮಹದಾಶಿಸುತ್ತೇನೆ.

ಪಿ. ಬಸವಣ್ಣ, ಅಡ್ವೊಕೇಟ್.
ಕೊಳ್ಳೇಗಾಲ.

ಬಸವ ಪ್ರಸಾದ (ವಿರೂಪಾಕ್ಷಪ್ಪ) ನ
ಶರಣಾರ್ಥಿ,

ಕಲ್ಯಾಣ ಕಿರಣ ವಿಧಾಯಕ ಧ್ಯೇಯ ವನ್ನಿರಿಸಿಕೊಂಡು ಸಾಗುವುದು ಸಂತಸದ ವಿಷಯ. ಶರಣ ತತ್ತ್ವವನ್ನು, ಶರಣ ಪ್ರೇಮಿಗಳನ್ನು, ದುರುದ್ದೇಶದಿಂದ, ವ್ಯವಸ್ಥಿತವಾಗಿ ತೊಂದರೆಗೆ ಸಿಲುಕಿಸುವ, ತೇಜೋವಧೆ ಮಾಡುವ ಅಸಹ್ಯ ಕಾರ್ಯ ನಡೆಯುವಾಗ ; ತತ್ತ್ವನಿಷ್ಠರೂ, ತ್ಯಾಗಿ ಗಳು, ಕಿಂಕರರು, ಸಮಾಜದ ಹಿತ ಬಯಸುವವರು, ಹಲವಾರು ಆದರ್ಶಗಳನ್ನು ಕಣ್ಣೆದುರಿಗಿರಿಸಿಕೊಂಡು ವೈರಾಗ್ಯ ಪಥ ತುಳಿಯುವ ಮುಮುಕ್ಷುಗಳಿಗೆ ಧೈರ್ಯ-ಸಾಂತ್ವನ ನೀಡುವಂಥ ತಾತ್ತ್ವಿಕ, ಪ್ರೌಢ ಮಟ್ಟದ ಪತ್ರಿಕೆಯ ಅವಶ್ಯಕತೆಯನ್ನು ಖಂಡಿತಾ ಪೂರೈಸುವುದು ಈ ಪತ್ರಿಕೆ ಎಂದು ನಂಬುವೆ.

ಬಸವ ತತ್ತ್ವ ಪ್ರಕಾಶನ ಮಂದಿರ,
ಬೇಲೂರು.

ಪೂಜ್ಯರಲ್ಲಿ ಪ್ರಣಾಮ,

ಕಲ್ಯಾಣಕಿರಣದ ಪುನರಾಗಮನ ಹರುಷದ ಸಂಗತಿ. ಸತ್ಕಾರ್ಯಗಳನ್ನು ಮಾಡುವವರನ್ನು ಕಂಡು ಇತರ ಚಿಲ್ಲರೇ ಜನಕ್ಕೆ

(ಪುಟ ೧೫ ನೋಡಿ)

ಕಲ್ಯಾಣ ಕಿರಣ
ಮಾಸಪತ್ರಿಕೆ
ಸಂಸ್ಕೃತಿ, ಸಾಹಿತ್ಯ, ನೀತಿ ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು:

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ.
ಬೆಂಗಳೂರು–೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ

ಮುದ್ರಣ : ಸೂಪರ್ ಪ್ರಿಂಟರ್ಸ್,
ಬೆಂಗಳೂರು–೫೬೦೦೫೩.

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು:
* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು ವಿಳಾಸ ಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.



ಸತ್ಯ ಮತ್ತು ಕಲ್ಯಾಣ

— ಮಾತೆ ಮಹಾದೇವಿ

ಈ ಬಾರಿಯ ಮಾತೃಹರಕೆ ಏನನ್ನು ಬರೆಯಬೇಕು, ಏಕೋ ತಲೆಯ ಬ್ಯಾಟರಿ ಮಂಕಾಗಿದೆ, ಲೇಖನಿಯ ಗಾಡಿಯೇ ಓಡುತ್ತಿಲ್ಲ ಎಂದು ಪರಿತಪಿಸುವಾಗಲೇ ಬ್ಯಾಟರಿಯನ್ನು ರೀಛಾರ್ಜು ಮಾಡುವಂತೆ ಪ್ರಶ್ನೆಯೊಂದು ಬಂದಿತು, ಪೋಸ್ಟ್ ಮುಖಾಂತರ. ಅದೇಂದರೆ, ಓರ್ವರು ಕಲ್ಯಾಣಕಿರಣದ ಮುದ್ರೆಯಲ್ಲಿರುವ "ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ ; ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ" ಎಂಬ ಉಕ್ತಿಯನ್ನು ಪ್ರಶ್ನಿಸಿ ಬರೆದಿದ್ದಾರೆ. ಮೊದಲನೆಯ ಸಾಲಿನ ಬಗ್ಗೆ ಯಾವ ತಕರಾರೂ ಎತ್ತಿಲ್ಲ; ಯಾರೇ ಆಗಲೀ ಎತ್ತುವುದೂ ಕಷ್ಟವೇ! ಸಂಪ್ರದಾಯದ ಕಪಿಮುಷ್ಟಿಯಲ್ಲಿ ಸಿಕ್ಕ ಬಹುಪಾಲು ಜನ, ಸತ್ಯದ ಸಹಾಯ ಪಡೆದು ಸಂಪ್ರದಾಯ-ಪ್ರವಾಹದಿಂದ ತಪ್ಪಿಸಿಕೊಂಡು ಹೊರಬರಲು ಹವಣಿಸುತ್ತಿವುದು ಈಗಿನ ಮನ್ವಂತರದ ಸ್ಪಷ್ಟ ಅನಿಸಿಕೆ.

ಇನ್ನು ಎರಡನೆಯದೇ ಭಾರೀ ಗೊಂದಲವನ್ನುಂಟು ಮಾಡಿದೆ, ಪ್ರಶ್ನೆಕಾರರ ತಲೆಯಲ್ಲಿ. ಅವರು ಅಷ್ಟಕ್ಕೂ ಬಿಡದೆ ನೂರು ಜನರನ್ನು ಸಂದರ್ಶಿಸಿ, ಅವರ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಬಹುಪಾಲು ಜನ ವಿರೋಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೆಲವರಂತೂ 'ಇದು ಸಮಾಜವನ್ನು ದಿಗ್ಭ್ರಮೆಗೊಳಿಸುವ ಹೇಳಿಕೆ, ಸುಳ್ಳಿಗೆ ನಾಂದಿ ಹಾಡುವುದು; ವಂಚಕರಿಗೆ ಪ್ರೋತ್ಸಾಹಿಸುವುದು' ಇತ್ಯಾದಿ ಎಲ್ಲೆಲ್ಲಿಯ ಕಹಿಯನ್ನೋ ಕಕ್ಕುವ ಕೆಲಸ ಸಹ ಮಾಡಿದ್ದಾರೆ. ಪೂರ್ವಾಗ್ರಹ ಪೀಡಿತ ಸಂಪ್ರದಾಯ ಬದ್ಧ ಬಣ್ಣದ ಸುಲೋಚನ ತೊಟ್ಟವರಂತೂ ವಿಚಿತ್ರ ಅಭಿಪ್ರಾಯಗಳನ್ನು ಆ ಉಕ್ತಿಯ ಬಗ್ಗೆ ಹೇಳಿದ್ದಾರೆ. ಈ ಬಗೆಯ ಸಂದರ್ಶನ–ಪ್ರಶ್ನೋತ್ತರ ಮಕ್ಕಳಾಟದಂತೆ ನನಗೆ

ಕಂಡಿತು. ಆದರೂ ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸುವುದು ಒಳಿತೆಂದು ಅನ್ನಿಸಿತು. ಅಂತೆಯೇ ಲೆಕ್ಕಣಿಕೆಯನ್ನು ಈ ಜಾಡಿನಲ್ಲಿ ಹರಿಯಬಿಟ್ಟೆ.

ಇನ್ನೊಬ್ಬರ ಅಭಿಪ್ರಾಯ, ಉಕ್ತಿಗಳನ್ನು ಆರಿಸಿಕೊಂಡು ಅಭಿಪ್ರಾಯ ಸಂಗ್ರಹಿಸ ಬಯಸುವವರು ಹೇಳಿದವರ ವಿಚಾರಗಳನ್ನು ಸರಿಯಾಗಿ ಪ್ರತಿನಿಧಿಸಬಲ್ಲರೇ, ಸಮರ್ಥಿಸಬಲ್ಲರೇ? ಸಂಶಯಿಸುವವರಿಗೆ ಸಮರ್ಪಕವಾಗಿ ಮನಗಾಣಿಸಬಲ್ಲರೇ? ಎಂಬುದು ಬಹು ಮುಖ್ಯ. ಇಲ್ಲವಾದರೆ "ಬಸವನೆಂದರೆ ಪಾಪ" ಎಂದು ನಿಲ್ಲಿಸಿ ಕಾವ್ಯ ಕರ್ತೃವಿಗೆ ಅಪಚಾರ ಮಾಡಿದಂತಾಗುತ್ತದೆ.

"ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ" ಇದು ಉಕ್ತಿಯ ಪೂರ್ವಾರ್ಧ. ಇಲ್ಲಿ ಸಂಪ್ರದಾಯ ಎಂದರೆ ವಾಚ್ಯಾರ್ಥ Tradition ಎಂದಾದರೂ, ಲಕ್ಷಾರ್ಥ Blind Tradition ಎಂದು ಅರ್ಥಮಾಡಬೇಕು. ಏಕೆಂದರೆ ಒಂದು ಅರ್ಥದಲ್ಲಿ Tradition ಎಂದರೆ ಮೂಢ ರೂಢಿ ಎಂದಾಗದೆ, ಪರಂಪರೆ ಎಂದಾಗುವುದು. ಶಬ್ದಗಳಲ್ಲಿರುವ, ಗ್ರಂಥಸ್ಥ ಸತ್ಯದ-ತತ್ತ್ವದ ಬೀಜಗಳು ಆಚರಣೆಗಿಳಿದಾಗ ಅದು ಪರಂಪರೆಯಾಗಿ ರೂಪುಗೊಳ್ಳುತ್ತದೆ. ಇಂಥ ಪರಂಪರೆಯಲ್ಲಿ ವಿವಿಧ ಬಗೆಗಳನ್ನು ಕಾಣಬಹುದು. ೧. ಸತ್ ಸಂಪ್ರದಾಯ ಮತ್ತು ೨. ಸತ್ತ ಸಂಪ್ರದಾಯ ಎಂದು ಸ್ಥೂಲವಾಗಿ ವಿಭಜಿಸಬಹುದು. ಸತ್ ಸಂಪ್ರದಾಯವೆಂದರೆ ಮೂಲ ತತ್ತ್ವಕ್ಕೆ ಭಿನ್ನವಾಗದಿರುವುದು. ಮೂಲದ ಜೀವಂತಿಕೆಯನ್ನು ಉಳಿಸಿಕೊಂಡಿರುವುದು. ಉದಾಹರಣೆಗೆ : ಅನೇಕ ವಿರಕ್ತ ಮಠಾಧಿಕಾರಿಗಳು ವಿದ್ಯಾಸಂಸ್ಥೆಗಳನ್ನು ರೂಪಿಸಿ, ಅಲ್ಲಿ ಎಲ್ಲ ಜಾತಿ ಮತ ಪಂಥದ ವಿದ್ಯಾರ್ಥಿಗಳನ್ನು ಇಂಬಿಟ್ಟುಕೊಂಡು, ದಾಸೋಹವನ್ನೇರ್ಪಡಿಸಿ ವಿದ್ಯಾದಾನ ಮಾಡುವುದು. ಅನೇಕ ಧರ್ಮ, ಸಮಾಜಗಳಲ್ಲಿ ಇಲ್ಲದ ಈ 'ದಾಸೋಹ' ತತ್ತ್ವ ಎಲ್ಲಿಂದ ಬಂತು? ಯಾರಿಂದ ಬಂತು? ವಿರಕ್ತರಲ್ಲಿ, ಬಸವಾಭಿಮಾನಿಗಳಲ್ಲಿ, ಬಸವ ತತ್ತ್ವ ನಿಷ್ಠರಲ್ಲಿ ಹೆಚ್ಚಾಗಿ ಏಕಿದೆ? ಎಂದು ನದಿಮೂಲವನ್ನರಸುತ್ತ ಹೋದರೆ, ಅದು ಬಸವಣ್ಣನೆಂಬ ತಲಕಾವೇರಿಯ ತೀರ್ಥಕುಂಡಕ್ಕೆ ಒಯ್ಯದಿರದು. ಅಂದರೆ ಬಹುಪಾಲು ಜನ ಬಸವ ತತ್ತ್ವದ ಆಚರಣೆಯಿಂದ ದೂರ ಸರಿದಿದ್ದರೂ ಈ 'ದಾಸೋಹ' ತತ್ತ್ವ ಇನ್ನೂ ಜೀವಂತವಾಗಿದೆ. ಇದು ಸತ್ ಸಂಪ್ರದಾಯ (True tradition).

ಎರಡನೆಯ ಸತ್ತ ಸಂಪ್ರದಾಯದ ಕ್ಷೇತ್ರ ವಿಸ್ತಾರವಾಗಿರುವ ಕಾರಣ, ಅದರಲ್ಲಿ ಮೂರು ಉಪವಿಭಾಗ ಮಾಡಬಹುದು : ೧. ವಿರುದ್ಧ ಸಂಪ್ರದಾಯ ೨. ವಿಕೃತ ಸಂಪ್ರದಾಯ ಮತ್ತು ೩. ಶಿಥಿಲ ಸಂಪ್ರದಾಯ. ಜಾತಿಗಳನ್ನು ವಿರೋಧಿಸಿದ ಬಸವ ಧರ್ಮದ ಸಮಾಜದಲ್ಲಿ ಜಾತಿಪ್ರಧಾನ ವ್ಯವಸ್ಥೆ ಮರಳಿರುವುದು ; ಬಹು ದೇವೋಪಾಸನೆ ವಿಡಂಬಿಸಿದ ಧರ್ಮದಲ್ಲಿ ಹೇರಳವಾದ ಬಹುದೇವೋಪಾಸನೆ, ಇವು ವಿರುದ್ಧ ಸಂಪ್ರದಾಯಕ್ಕೆ ಉದಾಹರಣೆ. ಗುಣಪ್ರಧಾನ ವ್ಯವಸ್ಥೆ ಮಾಡಿ. ಅರಿವುಳ್ಳವನನ್ನು ಗುರುವನ್ನಾಗಿ ಅನುಭಾವ ಉಳ್ಳವನನ್ನು ಜಂಗಮನನ್ನಾಗಿ ಗೌರವಿಸುವುದು ಬಿಟ್ಟು, ಜಾತಿ

ವಾಚಕವಾಗಿ ವಂಶ ಪಾರಂಪರ್ಯದ ಮೇಲೆ ಗೌರವಿಸುವುದು ವಿಕೃತ ಸಂಪ್ರದಾಯಕ್ಕೆ ಉದಾಹರಣೆ. ವೇಷಭೂಷಣಗಳಲ್ಲಿ ತ್ವರಿತ ಬದಲಾವಣೆ, ಸಿನಿಮೀಯತೆ, ಸದಾಚಾರ–ಸಂಸ್ಕೃತಿಗಳ ನಿರಾಕರಣೆ ಶಿಥಿಲ ಸಂಪ್ರದಾಯಕ್ಕೆ ಉದಾಹರಣೆ. ಈ ದೃಷ್ಟಿಯಿಂದ ಸತ್ಯದ ಆಚರಣೆ ಎಲ್ಲ ಕುರುಡು ಸಂಪ್ರದಾಯಕ್ಕಿಂತ ಶ್ರೇಷ್ಠ. ಅದರ ಆಚರಣೆಯಿಂದ ಲೋಕಕ್ಕೆ ಹಿತವಿದೆ.

ಉಕ್ತಿಯ ಉತ್ತರಾರ್ಧ, 'ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ.' ಇದರ ಅರ್ಥವೇನು? ಸತ್ಯವು ಒಂದು ತೀಕ್ಷ್ಣವಾದ ಅಲಗು ; ಅದನ್ನು ಬೀಸುವಲ್ಲಿಯೂ ಎಚ್ಚರ, ನಿತ್ಯಾನಿತ್ಯ ವಿವೇಕ ಅತ್ಯಾವಶ್ಯ. ಇಲ್ಲವಾದರೆ ನಾವು ಯೋಜಿಸುವ, ಬಯಸುವ ಹಿತ ಸತ್ಯದಿಂದ ಸಾಧ್ಯವಾಗದಿರಬಹುದು, ಅದನ್ನು ಎಚ್ಚರ ತಪ್ಪಿಬಳಸಿದಲ್ಲಿ ! ಈ ಉಕ್ತಿಯಲ್ಲಿ 'ಕಲ್ಯಾಣ' ಎಂಬ ಪದಕ್ಕೆ 'ಮದುವೆ' ಎಂಬ ಸಾಮಾನ್ಯ ಅರ್ಥವಿಟ್ಟಿಲ್ಲ. 'ನೂರು ಸುಳ್ಳು ಹೇಳಿ ಮದುವೆ ಮಾಡು' ಎಂಬ ಅರ್ಥರಹಿತ ಬುದ್ಧಿವಾದವಿಲ್ಲಿಲ್ಲ. ಅದು ಸವಕಲು ನಾಣ್ಯ. ಏಕೆಂದರೆ, ಹಿಂದಿನ ಕಾಲದಲ್ಲಿ ಹೇಗಾದರೂ ಸುಳ್ಳು ಹೇಳಿಯೋ, ಮೋಸಮಾಡಿಯೋ ಗಂಡ–ಹೆಂಡತಿ ಮಾಡಿಬಿಟ್ಟರೆ ತಪ್ಪಿಸಿಕೊಳ್ಳಲಾರದ ಬಾಂಧವ್ಯ ಒದಗುತ್ತಿತ್ತು. ಪಾರಾಗಲು ಈರ್ವರಿಗೂ ಅಸಾಧ್ಯ. ಹೊಂದಿಕೊಂಡು ಬಾಳುವುದಷ್ಟೇ ಮುಂದಿನ ಮಾರ್ಗವಾಗುತ್ತಿತ್ತು. ಈಗ ಆ ನಿಯತ್ತಾಗಲೀ, ಅಥವಾ ಒತ್ತಡವಾಗಲೀ ಇಲ್ಲ ; ಸತ್ಯವು ಬಯಲಿಗೆ ಬಂದನಂತರ ಸುಲಭವಾಗಿ ಒಬ್ಬರನ್ನೊಬ್ಬರು ತೊರೆಯಬಲ್ಲರು. ಅದರಿಂದ ಲಗ್ನಕ್ಕೆ ವ್ಯಯಿಸಿದ ಹಣ ಹಾಳು ; ಅದನ್ನೇ ಹೆಣ್ಣಿಗೆ ಸಹಾಯಧನವಾಗಿಟ್ಟರೆ ಅದೇ ಆಕೆಯನ್ನು ಸಂರಕ್ಷಿಸುವ ಕೆಲಸವನ್ನಾದರೂ ಮಾಡೀತು.

ಕಲ್ಯಾಣ ಎಂದರೆ 'ಹಿತ,' 'ಒಳ್ಳಿತು,' (Welfare) ಶಿವ (Divinity) ಎಂಬರ್ಥದಲ್ಲಿ ಈ ಮೇಲ್ಕಂಡ ಉಕ್ತಿಯಲ್ಲಿ ಬಳಸಲಾಗಿದೆ. ಸತ್ಯದಿಂದ ಒಳ್ಳೆಯದೇ ಆಗುತ್ತದೆ, ಸತ್ಯವೇ ಜಯಿಸುತ್ತದೆ ಜಯಿಸಲೇ ಬೇಕು. ಮಾವಿನ ಬೀಜ ಬಿತ್ತಿ ಬೇವನ್ನು ಹೇಗೆ ನಿರೀಕ್ಷಿಸುವುದಿಲ್ಲವೋ ಹಾಗೆ ಸತ್ಯದ ಬೀಜ ಬಿತ್ತಿದವನು ಅಕಲ್ಯಾಣದ ಫಲವನ್ನು ನಿರೀಕ್ಷಿಸಲಾರ ; ಅದು ಬರಲಾರದು. ಆದರೆ ಕೆಲವೊಮ್ಮೆ ಸತ್ಯವು ತಾತ್ಕಾಲಿಕ ಕೆಡುಕನ್ನು ಉಂಟು ಮಾಡುತ್ತಿದ್ದರೆ? ಅಂಥ ವಿಶೇಷ ಪ್ರಸಂಗದಲ್ಲಿ ಮಾರ್ಗದರ್ಶನಕ್ಕೆ ಇನ್ನೊಂದು ದಾರಿ ಬೇಕು, ಹಿಂದಿನ ಕಾಲದಲ್ಲಿ ಶತ್ರುಗಳು ಮುತ್ತಿಗೆ ಹಾಕಿದಾಗ ದುರ್ಗಗಳಿಂದ ಹೊರವಲಯಕ್ಕೆ ಪಾರಾಗಲು ರಹಸ್ಯ–ಸುರಕ್ಷಿತ ದಾರಿಗಳಿದ್ದಂತೆ. ಆದ್ದರಿಂದ 'ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ' ಎಂಬುದು Generalised statement ಸಾಮಾನ್ಯೀಕರಣ ಮಾಡುವ ಉಕ್ತಿಯಲ್ಲ; ಬಹಳ ಎಚ್ಚರಿಕೆಯಿಂದ ವಿಶೇಷ ಪ್ರಸಂಗಗಳಲ್ಲಿ ಪ್ರಯೋಗಿಸಬೇಕಾದ Exceptional statement. ವಿಶೇಷಾಸ್ತ್ರಗಳನ್ನು ಸಮರದಲ್ಲಿ ಬಳಸುವ ಸಮರ್ಥ ಯೋಧನಂತೆ ಮೈಯೆಲ್ಲ ಜಾಗ್ರತರಿರಬೇಕು, ಈ ಉಕ್ತಿಯನ್ನು ಆಚರಣೆಗೆ ತರುವಾಗ. ಇದಕ್ಕೆ ಕೆಲವು ಉದಾಹರಣೆ ಕೊಡೋಣ.

೧. ಕವಲು ದಾರಿಯ ಕೂಟದಲ್ಲಿ ಓರ್ವ ಕುಳಿತಿರುವನು. ಅಬಲೆಯಾದ ಮಹಿಳೆ ಓಡೋಡುತ್ತ ಬರುವಳು. ಈ ಸಜ್ಜನನನ್ನು ನೋಡಿ ತನ್ನನ್ನು ದುಷ್ಟನೋರ್ವ ಬೆನ್ನು ಹತ್ತಿರುವನೆಂದು, ಅವನಿಗೆ ದಾರಿತಪ್ಪಿಸಬೇಕೆಂದು ವಿನಂತಿಸಿ ಮುಂದೆ ಸಾಗುವಳು. ಆಗ ದುಷ್ಟಬಂದಾಗ ಈ ವ್ಯಕ್ತಿ ಸತ್ಯಹರಿಶ್ಚಂದ್ರನ ಮೊಮ್ಮಗ ತಾನೆಂದು ಅಬಲೆಯು ಹೋದ ದಾರಿ ತೋರಬೇಕೋ? ಅಥವಾ ವಿರುದ್ಧ ದಿಕ್ಕು ತೋರಿಸಿ ಆಕೆಯನ್ನು ಸಂರಕ್ಷಿಸಬೇಕೋ? ಇಂಥಲ್ಲಿ ಸತ್ಯಸಂಧತೆ, ಕಲ್ಯಾಣಗಳ ಮಧ್ಯೆ ಸ್ಪರ್ಧೆ ಏರ್ಪಡದಿರದೆ? ಇಲ್ಲಿ ಅವನು ಕೊಂಚ ಸುಳ್ಳು ಹೇಳಿ, ವ್ಯಕ್ತಿಗತ ಪಾಪಕ್ಕೆ ಬಲಿಯಾದರೂ ಚಿಂತೆಯಿಲ್ಲ, ಸಾಮೂಹಿಕ ಕಲ್ಯಾಣಕ್ಕೆ ದಾರಿತೋರಲಿಲ್ಲವೆ?

೨. ಓರ್ವ ವೈದ್ಯ; ಅವನ ಬಳಿಗೆ ರೋಗಿಯೊಬ್ಬಳು ಬಂದಿರುವಳು. ಭೀಕರ ಕಾಯಿಲೆಗೆ ತುತ್ತಾಗಿರುವಳು. ನೇರವಾಗಿ ಕಾಯಿಲೆ ಕುರಿತು ಹೇಳಿದರೆ ಮಾನಸಿಕ ಆಘಾತದಿಂದ ಎಂದೋ ಸಾಯಬೇಕಾದ ವ್ಯಕ್ತಿ ಇಂದೇ ಸಾಯುವಂತಾದರೆ; ಅದು ಸತ್ಯಸಂಧತೆಯೇ? ಒಬ್ಬ ವೈದ್ಯರು ಹೀಗೆ ಒರಟಾಗಿ ಹೇಳಿದ್ದರಿಂದ ಮಾನಸಿಕ ಭ್ರಾಂತಿಗೆ ಒಳಗಾಗಿ ಓರ್ವರು ತುಂಬಾ ಕಷ್ಟಪಟ್ಟುದು ಇನ್ನೂ ಚೆನ್ನಾಗಿ ಹಸಿರಾಗಿದೆ ನನ್ನ ಕಣ್ಣ ಮುಂದೆ. ಆಕೆಗೆ ಬಂದುದು ಬಡವರಿಗೆ ಬರಬಾರದ ಕ್ಷಯ; ಆದರೆ ಆ ರೀತಿ ವೈದ್ಯ ಹೇಳಬಹುದೆ? ಬೇರೊಬ್ಬ ವೈದ್ಯರನ್ನು ಕರೆಸಿ, ತಪಾಸಿಸಿದ ನಾಟಕ ಮಾಡಿ, ಆಕೆಗೆ ಕ್ಷಯವಿಲ್ಲವೆಂದು (ಪೂರ್ತಿ ಸುಳ್ಳು) ಹೇಳಿದಾಗ, ತಾನು ಸಾಯುತ್ತೇನೆಂದು ಚೀರಾಡುವುದನ್ನು ಆಕೆ ಬಿಟ್ಟಳು. ಆಶ್ಚರ್ಯವೆಂದರೆ, ಈ ವೈದ್ಯಕೊಟ್ಟ ಮೃದು ಮಾತಿನ ಸಾಂತ್ವನದ ಚಿಕಿತ್ಸೆಯಿಂದ ಬೇಗ ಗುಣಮುಖವಾಗಿ, ಸ್ಮಶಾನದ ಹೊಸ್ತಿಲನ್ನು ದಾಟಿದ್ದವಳು, ಮರಳಿ, ಮತ್ತೆ ಆ ಗೃಹಿಣಿ ಎರಡು ಮಕ್ಕಳ ತಾಯಿಯಾದಳೆಂದರೆ, ಇಲ್ಲಿ ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ ಎಂಬುಕ್ತಿ ಸ್ಪಷ್ಟವಾಗದಿರದು.


೩. ಎರಡನೆಯ ಸ್ವಾತಂತ್ರ್ಯ ಚಳುವಳಿ (ತುರ್ತು ಪರಿಸ್ಥಿತಿಯ ಕಾಲದಲ್ಲಿ) ನಡೆದಾಗ ತಮ್ಮ ನಾಯಕರ ಇರವನ್ನು ತೋರಿಸಿರೆಂದು ಕೊಡಬಾರದ ಹಿಂಸೆ ಕೊಟ್ಟರೂ, ಕೆಲವು ಕಾರ್ಯಕರ್ತರು ಸತ್ಯ ಹರಿಶ್ಚಂದ್ರರ ಮಕ್ಕಳು ಆಗ ಹೋಗದೆ, ತಾವು ಹೊಡೆಸಿಕೊಂಡರೂ ತಮ್ಮ ನಾಯಕರ ಸುಳಿವು ಕೊಡದುದು, ಯಾವುದರ ದ್ಯೋತಕ ?

೪. ಇದಕ್ಕಿಂತ ಇನ್ನೊಂದು ಮಾರ್ಮಿಕ ಪ್ರಸಂಗ. ಓರ್ವ ಗೃಹಿಣಿ, ಹಲವು ಬಾರಿ ಗರ್ಭ ಧರಿಸಿದರೂ. ಒಂದನ್ನೂ ಪಡೆಯದೆ ಸೋತಳು. ಒಮ್ಮೆ, ಅದೂ ಬಹಳ ವರ್ಷಗಳ ನಂತರ, ದಿನ ಪೂರ್ತಿ ತುಂಬಿದುವು, ನರ್ಸಿಂಗ್ ಹೋಮಿಗೆ ಸೇರಿಸಿದರು. ದುರ್ದೈವವೆಂದರೆ ಅದು ಹುಸಿಗರ್ಭಧಾರಣೆ (Pseudo Pregnancy). ಪರೀಕ್ಷಿಸಿದ ವೈದ್ಯಳು ಬೆಚ್ಚಿದಳು. ಕಾತುರದಿಂದ ಮಗುವಿನ ಬರವಿಗೆ ಕಾಯುವ ತಾಯಿ-ತಂದೆ, ಅಜ್ಜಿ-ಅಜ್ಜ. ಸತ್ಯವನ್ನಾಡಿದರೆ ಗೃಹಿಣಿಯ ಮಾನಸಿಕ ಪಲ್ಲಟ, ಆಘಾತ; ಹಿರಿಯರ ಕ್ರೂರ ತಿರಸ್ಕಾರ. ಗೃಹಿಣಿಯ ಸಾವು– ಬದುಕಿನ ಪ್ರಶ್ನೆ; ತತ್ತರಿಸಿದಳು ವೈದ್ಯೆ.

ಮನಸ್ಸನ್ನು ಗಟ್ಟಿಗೊಳಿಸಿಕೊಂಡಳು. ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಮನೆಯವರನ್ನು ಹೊರಕಳಿಸಿ, ಸಜ್ಜು ಮಾಡಿದಳು. ಗೃಹಿಣಿಯ ಪ್ರಜ್ಞೆ ತಪ್ಪಿಸಿದಳು. ಯಶಸ್ವೀ ಶಸ್ತ್ರ ಚಿಕಿತ್ಸಾನಂತರ, ತಾಯಿ ಮಗ್ಗುಲಲ್ಲಿ ಕಂದಮ್ಮ ! ಮನೆಯವರು ಕುಣಿದಾಡಿದರು, ತಾಯಿ ಸಂತೃಪ್ತಿಯ ಉಸಿರಾಡಿದಳು, ತಂದೆ ಊರಗಲ ಮುಖಮಾಡಿ ನಕ್ಕ. ಆದರೆ ಇಷ್ಟೆಲ್ಲರ ಮಾನಸಿಕ ಸಂತಸಕ್ಕೆ ಕಾರಣ ಆ ವೈದ್ಯೆ ಹೂಡಿದ ಮಹಾಸುಳ್ಳು, ಹೆತ್ತು ಸತ್ತು ಹೋದ ತಾಯಿಯೊಬ್ಬಳ ಅನಾಥ ಮಗುವನ್ನು ಮಗುವಿಲ್ಲದ ತಾಯಿ ಮಗ್ಗುಲಲ್ಲಿ ಮಲಗಿಸಿದ್ದು. ತಾಯಿಯಿಲ್ಲದ ಮಗುವಿಗೆ ತಾಯಿಯನ್ನು, ಮಗುವಿಲ್ಲದ ತಾಯಿಗೆ ಮಗುವನ್ನು ಕೊಟ್ಟುದು ಸುಳ್ಳಿನ ಮೂಲಕ. ಅದು ಆಕೆಯ ಮಗುವಲ್ಲವೆಂದು ಸತ್ಯವನ್ನಾಡಲೂ ಇಲ್ಲ, ತನ್ನದಲ್ಲವೆಂಬ ಜಿಗುಪ್ಸೆ ಏಕೆ ಹುಟ್ಟಬೇಕೆಂದು! ಇದು ಎಂಥಾ ವಿಲಕ್ಷಣ ಪ್ರಸಂಗ! ಅಂತೆಯೇ ಸತ್ಯವೆಂಬ ಎರಡೂ ಕಡೆ ಚೂಪಿರುವ ಕತ್ತಿಯನ್ನು ಬೀಸುವಾಗ ಎಚ್ಚರ ಬಹಳವಿರಬೇಕು.

"ಸತ್ಯದಿಂದ ಒಳ್ಳಿತೇ ಆಗುವುದು" ಎಂಬ ಬಗ್ಗೆ ಸಂದೇಹವಿಲ್ಲ. ಆದರೂ.... ಇದಕ್ಕೆ ಹೊರತಾದ ಒಂದು ಉದಾಹರಣೆ. ಓರ್ವ ರಾಜ, ಬಹು ಗುಣವಂತ, ಪ್ರಜಾ ಲೋಲ, ಸತ್ಯಸಂಧ, ಅವನ ಬಳಿ ಓರ್ವ ಮಂತ್ರಿ; ಬುದ್ಧಿವಂತ, ಅಷ್ಟೊಂದು ಪ್ರಾಮಾಣಿಕನಲ್ಲದಿದ್ದರೂ. ಆಸ್ಥಾನಕ್ಕೆ ಒಂದು ದಿನ ಓರ್ವನು ರಾಜಕುಮಾರನ ವೇಷದಲ್ಲಿ ಬಂದಾಗ ರಾಜ ಸತ್ಕರಿಸಿದ. ಆದರೆ ಮಂತ್ರಿ 'ಅವನು ನಿಜ ರಾಜಕುಮಾರನಲ್ಲವೆಂದು, ಮೋಸಗಾರ' ನೆಂದು ಉಸುರಿದಾಗ, ತನ್ನ ಊಹೆ ಸುಳ್ಳಾದರೆ ಹತ್ತು ವರ್ಷ ವನವಾಸ ಹೋಗುವುದಾಗಿ ಪಣತೊಟ್ಟ. ಪರೀಕ್ಷಿಸಿದಾಗ ಸೋತ ಸತ್ಯಸಂಧನಾದ ಅವನು ತಾನು ಆಡಿದ ಮಾತಿನ ಪರಿಪಾಲನೆಗಾಗಿ ಯಾರು ಬೇಡವೆಂದರೂ ಕೇಳದೆ ಕಾಡಿಗೆ ನಡೆದ. ಆದರೆ ಇತ್ತ ಮಂತ್ರಿ ಗದ್ದುಗೆ ಏರಿದ; ಅಧಿಕಾರದ ರುಚಿಕಂಡ, ರಾಜನ ಹೆಂಡತಿ ಮಕ್ಕಳನ್ನು ಕೊಲ್ಲಿಸಿದ, ಜನಾಭಿಮಾನಿಯಾದ ರಾಜನಿಗೆ ನಿಷ್ಠಾವಂತರಾಗಿದ್ದ ಪ್ರಜೆಗಳು, ಪ್ರಮುಖರು, ಸೇನಾಧಿಪತಿಗಳನ್ನು ಕೊಲ್ಲಿಸಿದ. ಹತ್ತುವರ್ಷಗಳಲ್ಲಿ ಸ್ಥಾನಭದ್ರ ಪಡಿಸಿಕೊಳ್ಳುವ ಗುರಿಯೊಂದನ್ನೇ ಇಟ್ಟುಕೊಂಡ. ಆ ಸತ್ಯಸಂಧ ಮರಳುವ ಅವಧಿ ಬರುತ್ತಿದ್ದಂತೆಯೇ ಅವನನ್ನು ಒಳಗೆ ಬಿಡದಂತೆ ಸೈನ್ಯವನ್ನು ಆಯಕಟ್ಟಿನಲ್ಲಿ ನೆಲೆನಿಲ್ಲಿಸಿದ. ರಾಜನು ಗುಪ್ತ ವೇಷದಿಂದ ಒಳಹೊಕ್ಕಾಗ ತನ್ನ ಮುದ್ದಿನ ನಾಡು ಮಸಣವಾಗಿತ್ತು, ಸರ್ವಾಧಿಕಾರಿಯ ಕೈಯಲ್ಲಿ ಸಿಕ್ಕು ವಿಲಿವಿಲಿ ಒದ್ದಾಡಿ, ಕೊರಕೊರ ಎನ್ನುತ್ತಿತ್ತು. ಮತ್ತೆ ಜನ ಸಾಮಾನ್ಯರ ಪ್ರೇಮಗಳಿಸಿ, ಹೋರಾಡಿ ರಾಜ್ಯಾಧಿಕಾರ ವಹಿಸಿಕೊಳ್ಳಬೇಕಾದರೆ ಆಕಾಶ–ಭೂಮಿಯನ್ನು ಏಕ ಮಾಡಬೇಕಾಯಿತು. ಆಗ ಅನ್ನಿಸಿತು, "ತಾನು ಸತ್ಯ ಸಂಧತೆಗಾಗಿ ದುಡುಕಿ ಹೋದುದಕ್ಕಿಂತ ಮಾತಿಗೆ ತಪ್ಪಿದ್ದರೂ ಚಿಂತೆಯಿಲ್ಲ, ಅಲ್ಲೇ ಇದ್ದಿದ್ದರೆ ನಾಡಿಗೆ ಲೇಸಾಗುತ್ತಿತ್ತು" ಎಂದು ಹೀಗೆ ಕವಲುದಾರಿ ಎದುರಾದಾಗ ನಿತ್ಯಾನಿತ್ಯ-ವಿವೇಕ ಜ್ಞಾನದಿಂದ ವರ್ತಿಸಿ, ಹೆಚ್ಚಿನ ಜನರ ಹಿತರಕ್ಷಣೆಯನ್ನು ಮಾಡುವುದು ಈ ಉಕ್ತಿಯ ಉದ್ದೇಶವೇ ವಿನಾ, ಸುಳ್ಳಿನ ಹಂದರ ಕಟ್ಟುವುದಲ್ಲ.

★ ★



—ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಅವತಾರ

ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯಲ್ಲ ನಾನು ತಂದೆ
ಇನ್ನು ಹುಟ್ಟಲಾರೆನು, ಹೊಂದಲಾರೆನು.
ಜನನ ಮರಣವೆಂಬೆರಡಕ್ಕೆ ಹೊರಗಾದೆನಯ್ಯಾ
ನೀವು ಹೇಳಿದ ಮಣಿಹವ ಮಾಡಿದೆ,
ಇನ್ನು ಕೂಡಿಕೊಳ್ಳಾ ಕೂಡಲಸಂಗಮದೇವಾ. (ಬ.ಪ. 1373)

ಜೀವನ್ಮುಕ್ತ, ಮುಕ್ತಿದಾಯಕ ವಿಶ್ವಗುರು ಬಸವಣ್ಣನವರು ತಮ್ಮ ಜೀವನದ ಕೊನೆಯ ಗಳಿಗೆಯಲ್ಲಿ ಹೇಳಿದ ವಚನವಿದು. ತಾವು ಜನನ ಮರಣದ ಭವದುಃಖದಲ್ಲಿ ಹುಟ್ಟಿ ಬಂದವರಲ್ಲ; ಶಿವನಿಂದ ಮಣಿಹ ಹೊತ್ತು ಮರ್ತ್ಯದ ಮಾನವರನ್ನು ಉದ್ಧರಿಸಲಿಕ್ಕೆ ಅವತರಿಸಿದವರು; ಭವವನ್ನು ಗೆದ್ದು ಅಭವನನ್ನು ಕೂಡಿದ ಮಹಂತರು ಎಂಬ ಭಾವ ಈ ವಚನದಲ್ಲಿ ಕಾಣಬರುತ್ತಿದೆ.

ಅವತಾರವೆಂದರೇನು ? ಬಸವಣ್ಣನವರು ಅವತಾರಿಕರೆ ? ಎಂಬುದನ್ನು ವಿವೇಚಿಸುವಾ. ಅವತರಿಸು ಎಂದರೆ to descend, ಇಳಿದು ಬಾ, ಅವತಾರಿಕ ಅಂದರೆ ಇಳಿದು ಬಂದವರು. ದೇವನೇ ಇಳಿದು ಬರುವನೆಂದು ವೈಷ್ಣವರು ದೇವಾವತಾರ (Epiphany)ವನ್ನು ಎತ್ತಿಹಿಡಿಯುತ್ತಾರೆ. ಗೀತೆಯ ಸುಪ್ರಸಿದ್ಧ ಶ್ಲೋಕದಲ್ಲಿ– "ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।..........ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥" ಎನ್ನುವಲ್ಲಿ ಯುಗ ಯುಗಗಳಲ್ಲಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಗಾಗಿ ದೇವರೇ ಅವತಾರ ತಾಳುತ್ತಾನೆ ಎಂಬ ಕಲ್ಪನೆ ಇದೆ.

ಕ್ರಿಶ್ಚನ್‌ರಲ್ಲಿ ದೇವನು ತನ್ನ ಮಗ (Son of God)ನನ್ನು ಜಗದುದ್ಧಾರಕ್ಕಾಗಿ ಕಳಿಸಿ ಕೊಡುತ್ತಾನೆ ಎಂಬ ದೇವಾಂಶಾವತಾರ (Theophany)ವನ್ನು ಎತ್ತಿ ಹಿಡಿಯುತ್ತಾರೆ. ಮಹಮ್ಮದೀಯರು ದೇವರು ತನ್ನ ದೂತನನ್ನು ಜಗದುದ್ಧಾರಕ್ಕಾಗಿ ಕಳುಹಿಸುತ್ತಾನೆ ಎಂದು ನಂಬುತ್ತಾರೆ. ಬಸವ ಧರ್ಮದ ಶರಣರು ದೇವಾಂಶಾವತಾರವನ್ನು ಒಪ್ಪುತ್ತಾರೆಂಬುದು ಅವರ ವಚನಗಳಿಂದ ತಿಳಿದುಬರುತ್ತದೆ. ಬಸವಣ್ಣನು ದೇವರ ಮಗನೆಂದೇ ಅವನಿಗೆ ಸಂಗನ ಬಸವ ಎಂಬ ಹೆಸರು ರೂಢಿಯಲ್ಲಿದೆ.

'ಬಸವಣ್ಣನವರು ಕಾರಣಿಕರು, ಜಗದುದ್ಧಾರಕ್ಕಾಗಿ ಅವತರಿಸಿದ ಮಹಾಗುರು' ಎಂಬುದನ್ನು ಮಡಿವಾಳ ಮಾಚಿದೇವರು ಹೀಗೆ ಹೇಳುತ್ತಾರೆ:

ಮಾರಾರಿಯ ಬೆಸನದಿಂದ ಬಸವಣ್ಣ ಧಾರುಣಿಗೆ ಅವತರಿಸಿ
ಸಾರಾಯ ಸದ್ಭಕ್ತಿಯ ತೋರಿದನು ಶಿವಶರಣರೆಲ್ಲರಿಗೆ.

ದೇವನ ಆಣತಿಯನ್ನು ಹೊತ್ತುಕೊಂಡು ಶಿವಶರಣರಿಗೆ ಶಿವಭಕ್ತಿಯ ಮಾರ್ಗವನ್ನು ತೋರಲು ಮರ್ತ್ಯಕ್ಕೆ ಅವತರಿಸಿದ್ದನೆಂದು ಈ ವಚನದಲ್ಲಿ ಸ್ಪಷ್ಟವಾದ ಉಲ್ಲೇಖವಿದೆ.

"ಸಂಗಮನಾಥನು ಕಾರುಣ್ಯಮಂ (Grace) ನೀಡಿ, ಸಾಮರ್ಥ್ಯಮಂ (Divine Power) ಹೇರಿ" ಬಸವಣ್ಣನನ್ನು ಮರ್ತ್ಯಕ್ಕೆ ಕಳುಹಿಸಿದ್ದಾನೆಂದು ಹರಿಹರ ಮಹಾಕವಿ ಬರೆಯುತ್ತಾನೆ. ಈ ಮಾತು ಶ್ರೀ ಅರವಿಂದರು ಹೇಳುವ ಅವತಾರದ ಕಲ್ಪನೆಗೆ ಹೋಲುತ್ತದೆ: "An Avatar roughly speaking is one who is conscious of the presence and power of the Divine."

ಬಸವಣ್ಣನವರು ಅವತಾರಿಕರು, ಕಾರಣಿಕರು, ಯುಗಪುರುಷರು ಎಂಬುದನ್ನು ಶರಣರ ನುಡಿಗಳಲ್ಲಿಯೇ ಕಾಣಬಹುದು :

೧. ಜಗದ್ ಹಿತಾರ್ಥಕ್ಕಾಗಿ ಮರ್ತ್ಯಕ್ಕವತರಿಸಿದ ನಮ್ಮ ಬಸವಣ್ಣನು.

—ಅಕ್ಕಮಹಾದೇವಿ.

೨. ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಒಬ್ಬ ಶಿವಶರಣನ.
ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ
....
ನಮ್ಮ ಗುಹೇಶ್ವರನ ಶರಣ ಸಂಗನ ಬಸವಣ್ಣನ ದಾಸೋಹದ
ಘನವ ಏನೆಂದೆನಬಹುದು ನೋಡಾ ಸಿದ್ಧರಾಮಯ್ಯಾ.

—ಪ್ರಭುದೇವ.

೩. ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂತರೆ
ಭಕ್ತಿಯ ಬೆಳಗು ದೆಸೆದೆಸೆಗೆಲ್ಲಾ ಪಸರಿಸಿತಯ್ಯಾ.

—ಅಕ್ಕನಾಗಮ್ಮ.

೪. ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ
ಸಾಮರ್ಥ್ಯಮಂ ಬಿತ್ತಿ, ಪ್ರತ್ಯಕ್ಷಂಗಳಂ ಬೆಳೆದು
ಗಣಪರ್ವಗಳ ಸುಫಲಂ ಮಾಡಲೆಂದು ಬಂದ
ಕಾರಣಿಕ ಬಸವ, ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತ್ತು

—ಹರಿಹರ.

೫. ಸಂಗಸಹಿತ ಬಸವಲೇಸು, ಬಸವಸಹಿತ ಸಂಗಲೇಸು.

—ಚನ್ನಬಸವಣ್ಣ.

೬. ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡಯ್ಯಾ
ಆತನ ಪ್ರಾಣ ನಿಮ್ಮಲ್ಲಿಪ್ಪುದು
ನಿಮ್ಮ ತಮ ಭೇದವನಾರು ಬಲ್ಲರು ಹೇಳಯ್ಯಾ,
ಕಪಿಲಸಿದ್ಧ ಮಲ್ಲಿನಾಥಯ್ಯಾ, ನಿಮ್ಮ ಶರಣ ಬಸವಣ್ಣನ ಅನುವ
ನೀವೇ ಬಲ್ಲಿರಿ.

—ಸಿದ್ಧರಾಮ.

ಹೀಗೆ ಬಸವಣ್ಣನು ಪರಮಾತ್ಮನ ಕರುಣೆಯ ಕಂದ (Blessed son of God) ಎಂಬ ವಿಷಯವನ್ನು, ಬಸವಣ್ಣ ಅವತಾರಿಕ ಎಂಬುದನ್ನು ಹಲವಾರು ಶರಣರ ಉಕ್ತಿಗಳಲ್ಲಿ ಕಾಣಬಹುದು.

ಗುರುಗಳನ್ನು ಸಾಧಕ ಗುರು, ಸಿದ್ಧಗುರು, ಅವತಾರಿಕ ಗುರು ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಅವತಾರಿಕ ಗುರು ಮಾತ್ರ ಮಾನವ ಕುಲಕೋಟಿಯನ್ನು ಉದ್ಧರಿಸುವ ತ್ರಿಕಾಲಿಕ ನಿತ್ಯವಾದ ಸತ್ಯಗಳನ್ನು ಬೋಧಿಸುತ್ತಾನೆ. ಅವನ ಸಂದೇಶ ವಿಶ್ವಸಂದೇಶ. ಅವನ ಧರ್ಮ ವಿಶ್ವಧರ್ಮ. ಅಂಥ ವಿಶ್ವಗುರು ಬಸವಣ್ಣನೆಂಬುದು ಅಭ್ಯಸಿಸಿದಾಗ ತಿಳಿದುಬರುತ್ತದೆ.

ಮಹಾತ್ಮರಿಗೂ ಅವತಾರಿಕರಿಗೂ ಸ್ವಲ್ಪ ವ್ಯತ್ಯಾಸವಿದೆ. ಮಹಾತ್ಮರಲ್ಲಿ ಏಕಮುಖ ಬೆಳವಣಿಗೆಯನ್ನು ಕಂಡರೆ ಅವತಾರಿಕರಲ್ಲಿ ಸರ್ವತೋಮುಖವಾದ ಬೆಳವಣಿಗೆಯನ್ನು ಕಾಣಬಹುದು. ಮಹಾತ್ಮನು ದೇವರನ್ನು ಹಿಡಿದಿರುತ್ತಾನೆ; ಅವತಾರಿಕನನ್ನೇ ದೇವರು ಹಿಡಿದಿರುತ್ತಾನೆ, ತನ್ನ ಕೃಪಾ ಹಸ್ತದಲ್ಲಿ. ಮಹಾತ್ಮ ಮಲ್ಲಿಗೆಯ ಹೂವಿನಂತೆ; ಅವತಾರಿಕ ಮರುಗದಾ ಗಿಡದಂತೆ ಹುಟ್ಟುತ್ತಲೇ ಪರಿಮಳ. ಮಹಾತ್ಮನು ಸ್ವಾತ್ಮ ಸುಧಾರಕ; ಅವತಾರಿಕ ಸಮಾಜ ಸುಧಾರಕ. ಮಹಾತ್ಮ ಸಿದ್ಧಪುರುಷ; ಅವತಾರಿಕ ಮಂತ್ರಪುರುಷ. ಮಹಾತ್ಮನು ನೀರಿನ ಚಿಲುಮೆ; ಅವತಾರಿಕ ಗಂಗಾ ಪ್ರವಾಹ.

ಬಸವಣ್ಣನವರು ೭೭೦ ಜನ ಮಹಾತ್ಮರನ್ನು ತನ್ನ ಅನುಭವ ಮಂಟಪದ ತರಬೇತಿ ಕೇಂದ್ರದಲ್ಲಿ ರೂಪಿಸಿದ; ಜಗದುದ್ಧಾರಕ್ಕಾಗಿ ಆ ಶರಣರನ್ನು ನಾಡಿನಲ್ಲೆಲ್ಲಾ ಕಳುಹಿಸಿಕೊಟ್ಟ. ಶರಣರ ರೂಹಾರಿ ಬಸವಣ್ಣನು ಸಂಗನ ಆಣತಿಯಂತೆ ಈ ಸೃಷ್ಟಿಯಲ್ಲಿ ಅವತರಿಸಿದ ಕಾರಣಿಕನೆಂದು ಬೇರೆ ಹೇಳಬೇಕಾಗಿಲ್ಲ. ★★

ಸಮಸ್ಯೆ! ಸಮಾಧಾನ!

—ಸುಧೀಂದ್ರ ಕುಮಾರ್, ಹರಿಹರ.

★ ಅಕ್ಟೋಬರ್ ತಿಂಗಳ ಕಲ್ಯಾಣ ಕಿರಣದಲ್ಲಿ ಸಮಸ್ಯೆ–ಸಮಾಧಾನ ಓದಿ ಬಹಳ ಸಂತೋಷವಾಯಿತು. ದಯಮಾಡಿ ಉತ್ತರಿಸುವವರು ಯಾರೆಂದು ತಿಳಿಸುವಿರಾ?

* ಜಲಾಶಯದಿಂದ ನೀರನ್ನು ಪಂಪ್ ಮಾಡುವವರು ಯಾರಾದರೇನು, ನಿಮಗೆ ಬೇಕಾದುದು ನೀರಷ್ಟೆ! ಉತ್ತರಿಸುವವರು ಯಾರಾದರೇನು, ನಿಮಗೆ ಬೇಕಾದುದು ಉತ್ತರವಷ್ಟೆ!

—ಭಾಸ್ಕರರಾವ್, ಮಂಗಳೂರು.

★ ನಾನೋರ್ವ ಹಿಂದು; ನನ್ನ ಕೆಲವು ಕ್ರೈಸ್ತ ಗೆಳೆಯರು ಮತಾಂತರಗೊಳ್ಳಬೇಕೆಂದು ನನ್ನನ್ನು ಒತ್ತಾಯಿಸುತ್ತಿದ್ದಾರೆ. ಏನು ಮಾಡಲಿ?

* ನಿಮ್ಮ ಮನೆಯಲ್ಲಿ ಅನ್ನವಿಲ್ಲದಿದ್ದರೆ ನೀವು ನೆರೆಮನೆಗೆ ಕೈಯೊಡ್ಡಬಹುದಿತ್ತು. ಅಮೃತಾನ್ನ ಮನೆಯಲ್ಲಿರುವಾಗ ನೀವು ವಿದೇಶೀ ಧರ್ಮದ ಸಪ್ಪೆಯೂಟಕ್ಕೆ ಕೈಚಾಚಬೇಕೇಕೆ?

—ಸುರೇಶ ಪಾಟೀಲ, ಗುಲಬರ್ಗಾ.

★ ಪ್ರಗತಿಪರ ವಿಚಾರಗಳನ್ನು ಸ್ವಾಗತಿಸದೆ, ಕಟುನಿಂದೆ ಮಾಡುವ ಲಿಂಗಾಯತ ಸಮಾಜದಲ್ಲಿ ಹುಟ್ಟಿದ (ನಿಮ್ಮಂತಹ)ವರು, ಅದನ್ನು ತೊರೆಯದೆ, ಒಣ ಅಭಿಮಾನದಿಂದ ಮತ್ತೂ ಆ ಧರ್ಮದ ಪ್ರಸಾರಕ್ಕಾಗಿ ಏಕೆ ದುಡಿಯಬೇಕು?

* ಅರಿಯದ ಅಜ್ಞಾನಿ ಮುಗ್ಧ ಮಗು ತಾಯಿಯನ್ನು ಒದೆದರೆ ತಾಯಿ ಮಗುವಿನ ಸಂರಕ್ಷಣೆ ಬಿಡುವಳೆ? ಬುದ್ಧಿ ಬಲಿತ ಮೇಲೆ ತಾಯಿಯ ತ್ಯಾಗ ಮಗುವಿಗೆ ಅರ್ಥವಾಗದಿರದು. ಅಂಥ ತಾಯಿಯ ಸಹನೆ ಸಮಾಜ ಸುಧಾರಕರಿಗೆ, ಕ್ರಾಂತಿ ಮನೋಭಾವದವರಿಗೆ ಅನಿವಾರ್ಯ ಆವಶ್ಯಕತೆ.

—ಸಿದ್ಧಲಿಂಗಶೆಟ್ಟಿ, ತಿಪಟೂರು.

★ ಹಣದ ಬಲದಿಂದ ಬರುವ ಕೀರ್ತಿ ದೊಡ್ಡದೋ? ಪ್ರತಿಭೆಯಿಂದ ಬರುವುದು ದೊಡ್ಡದೋ?

* ಅಧಿಕಾರ, ಹಣದ ಬಲದ ಮೇಲೆ ಬಂದ ಕೀರ್ತಿ ಅಲ್ಪಕಾಲಿಕ, ಸತ್ತನಂತರ ಉಳಿಯದು. ಪ್ರತಿಭೆ–ಸ್ವಯಂಗಳಿಕೆಯಿಂದ ಬಂದುದು ಶಾಶ್ವತ; ಜೀವಿತಾನಂತರವೂ ಉಳಿಯುವುದು.

—ಸಿದ್ಧಮರಿಯಪ್ಪ, ಒಂಡೂರು.

★ ಧರ್ಮ ಪ್ರಚಾರ, ಸಮಾಜ ಸೇವೆ ಮಾಡಲೆಂದು ಭಕ್ತರು ದಾನವಾಗಿತ್ತ ಹಣವನ್ನು ಅನೇಕ ಧರ್ಮಾಧಿಕಾರಿಗಳು ಕೋರ್ಟ್ ವ್ಯವಹಾರಕ್ಕೆ, ಬೇರೆಯವರ ಅಪಪ್ರಚಾರಕ್ಕೆ, ಮಿಥ್ಯಾರೋಪಣೆಯ ಕಾರ್ಯಕ್ಕೆ, ಎತ್ತಿ ಕಟ್ಟುವ ಅನಿಷ್ಟ ಕಾರ್ಯಕ್ಕೆ ಬಳಸುವರಲ್ಲಾ ಇದು ಸರಿಯೆ?

* ಅವರದು ಸರಿಯೋ ತಪ್ಪೋ! ಅಪಾತ್ರ ದಾನಮಾಡಿದ ತಪ್ಪಂತೂ ನಿಮ್ಮದು.

—ಕುಮಾರಿ ಶೋಭಾ ಓಂಕಾರ ಸ್ವಾಮಿ, ಬೆಂಗಳೂರು.

★ ಹಿಂದು ಒಂದು ಧರ್ಮವಾದರೆ, ಲಿಂಗಾಯತವು ಒಂದು ಜಾತಿಯೆ?

* ಹಿಂದು–ಇದು ವಿಶಿಷ್ಟ ಧರ್ಮವಲ್ಲ, ಜನಾಂಗ ವಾಚಕ ಪದ. ಹಿಂದು ಎಂಬ ಜನಾಂಗವನ್ನು ಒಂದು ತೋಟಕ್ಕೆ ಹೋಲಿಸಿದರೆ, ಅಲ್ಲಿ ಬರುವ ವಿವಿಧ ಧರ್ಮಗಳು ವಿವಿಧ ಗಿಡಗಳಂತೆ. ಆದ್ದರಿಂದ 'ಹಿಂದು'ವು ಒಂದು ಸಮಾಜ, ಲಿಂಗಾಯತವು ಅದರಲ್ಲಿರುವ ಒಂದು ಸ್ವತಂತ್ರ ಧರ್ಮ.

—ಗುರುದೇವಿ ಹೂಗಾರ, ಗದಗ.

★ ಅಕ್ಕಮಹಾದೇವಿಯ ಆದರ್ಶದಿಂದ ಸ್ಫೂರ್ತಿಗೊಂಡು ನಿಷ್ಠಾವಂತಳಾಗಿ ನಾನು ವೈರಾಗ್ಯದ ಹಾದಿ ಹಿಡಿದಿರುವೆ. ನನ್ನ ಹೆತ್ತವರದೇನೂ ಆತಂಕವಿಲ್ಲ. ಸುತ್ತಲಿನವರು ಮಾತ್ರ ಆಡಬಾರದ ನಿಂದೆಯ ಮಾತನ್ನಾಡುವರು. ಏನು ಮಾಡಲಿ?

* ಆನೆಯ ಮೇಲೆ ಹೋಹರನ್ನು ಕಂಡು ಬೊಗುಳದಿಹ ಶ್ವಾನಗಳು ಎಂದಿಲ್ಲ ತಾಯಿ? ಹಿಂದೂ ಇದ್ದವು, ಇಂದು ಇವೆ, ಮುಂದೂ ಇರುವವು. ನಿನ್ನ ಗಮನವೆಲ್ಲ ಗುರಿಯ ಕಡೆಗಿರಲಿ, ಶರಣರ ಬದುಕುಗಳು ದಾರಿದೀಪಗಳಾಗಲಿ.

—ಶಿವಪ್ರಕಾಶ, ಚನ್ನಪಟ್ಟಣ.

★ ಆರ್.ಎಸ್.ಎಸ್. ಪ್ರಭಾವಕ್ಕೊಳಗಾದ ಲಿಂಗಾಯತ ತರುಣನೊಬ್ಬ ವೈದಿಕ ಧರ್ಮದ ಅಭಿಮಾನದ ಸೆಳವಿನಲ್ಲಿ ಸಿಕ್ಕಿರುವ. ಇದಕ್ಕೆ ನಿಮ್ಮ ಅಭಿಪ್ರಾಯ?

* ಆಂಗ್ಲ ಮಾಧ್ಯಮದ ಕಾನ್ವೆಂಟಿನಲ್ಲಿ ಓದಿದ ಕನ್ನಡ ಬಾಲಕ ಆಂಗ್ಲ ಭಾಷೆಯ ಪ್ರಭಾವಕ್ಕೆ ಒಳಗಾಗುವುದು ಸ್ವಾಭಾವಿಕ. ಏನೇ ಆದರೂ ಅನಕ್ಷರಸ್ಥನಾದ, ಬೀದಿ ಬೀದಿ ತಿರುಗುವ ಉಂಡಾಡಿ ಗುಂಡನಿಗಿಂತ ಇವನು ಲೇಸು! ಹಾಗೆ, ಬಹುಪಾಲು ಯುವಕರಂತೆ ಸಿನಿಮಾಮಯ ಪ್ರಪಂಚದ ದಾಸರಾಗಿ, ವಿಷಯಾ

ಸಕ್ತರಾಗಿ, ಗೊತ್ತುಗುರಿಯಿಲ್ಲದೆ ತಿರುಗುವ ಯುವಕರಿಗಿಂತ, ಯಾವ ಧರ್ಮಾಭಿಮಾನಿಯಾದರೇನು ರಾಷ್ಟ್ರಾಭಿಮಾನ, ದೈವೀಶ್ರದ್ಧೆ ಬೆಳೆಸಿಕೊಂಡವ ಮಾನ್ಯ.

—ದಯೆಮಾಡಿ ಹೆಸರುಬೇಡ, ಊರೂ ಬೇಡ.

★ ನಮ್ಮೊರ್ವ (ಜಾತಿಯ) ಗುರುಗಳು ಅನ್ಯರ ಬಗ್ಗೆ ಬರುವ ನಿಂದೆಯ ಲೇಖನಗಳು, ಪತ್ರಿಕೆಗಳನ್ನು ಖರೀದಿಸಿ ನಮ್ಮ ತಂದೆಯವರಿಗೆ ಕಳಿಸುವರು. ವಿಚಾರವಾದಿಯಾದ ನನಗೆ ಇದನ್ನು ಕಂಡು ಬೇಸರವಾಗಿದೆ. ನಿಮ್ಮ ಸಲಹೆ ಏನು ?

* ಧಾರ್ಮಿಕ ಮೌಲ್ಯಗಳು, ಬಸವ ತತ್ತ್ವದ ಪ್ರಸಾರಕ್ಕೆ ವ್ಯಯವಾಗಬೇಕಾದ ಪವಿತ್ರ ಹಣವನ್ನು, ಇಂಥ ವಿಧ್ವಂಸಕ ಕಾರ್ಯಕ್ಕೆ ಬಳಸದೆ, ಅದೇ ಹಣದಲ್ಲಿ ಸರ್ಕಾರದವರು ಮುದ್ರಿಸಿರುವ ಕಡಿಮೆಬೆಲೆಯ ಬಸವಣ್ಣನವರ ವಚನಗಳ ಪ್ರತಿ ಕೊಂಡು ಹಂಚಲು ಆ ಗುರುಗಳನ್ನು ಪ್ರಾರ್ಥಿಸುವಿರಾ ?

—ಓರ್ವ ಸಾಧಕ, ಬಿಂಡಿಗನವಿಲೆ.

★ ವೈರಾಗ್ಯ ಪಥವನ್ನು ಹಿಡಿಯಲೆಂದು ನಾನು–ನನ್ನೊರ್ವ ಮಿತ್ರ ಹೊರಟೆವು. ಅವನು ಕೈಲಾಗದೆ ವಿವಾಹವಾದ. ಈಗ ನನ್ನನ್ನೂ ಆ ಮಾರ್ಗಕ್ಕೆ ಎಳೆದುಕೊಳ್ಳಲು ಯತ್ನಿಸುತ್ತಿರುವ. ಆದರೆ ನನಗೆ ವೈರಾಗ್ಯದ ಪಥದಲ್ಲಿ ಹೃತ್ಪೂರ್ವಕ ಶ್ರದ್ಧೆ ಇದೆ; ಗುರಿಮುಟ್ಟಬಲ್ಲೆನೆಂಬ ವಿಶ್ವಾಸವಿದೆ. ಅವನು ಅಸಾಧ್ಯ ಎನ್ನುತ್ತಿರುವನು. ನಿಮ್ಮ ಸಲಹೆ ಏನು ?

* ಗುಬ್ಬಿ ತಾನು ಎತ್ತರಕ್ಕೆ ಹಾರಲಾರದಾದರೆ ಪಾರಿವಾಳಕ್ಕೂ ಹಾರಲಸಾಧ್ಯವೆಂದು ಬೋಧಿಸುವುದೇಕೆ ? ನೀವು ಯಾರ ಸಲಹೆಗೂ ಈಡಾಗದಿರಿ. ನಿಮ್ಮಲ್ಲಿ ದೃಢತೆ ಇದ್ದರೆ, ನಿಮ್ಮ ಅಂತರಾತ್ಮನ ಸಲಹೆಯೊಂದೇ ಸಾಕು. ತರಕಾರಿ ಕೇಳಿ ಯಾರೂ ಸಂಭಾರ ಅರೆಯರು.

—ನೀಲಕಂಠಸ್ವಾಮಿ, ತುಮಕೂರು ಜಿಲ್ಲೆ.

★ ಕೆಲವರು ಸಾಧಕ ಜೀವಿಗಳನ್ನು, ಸ್ವಾಮಿಗಳನ್ನು, ಮಠಾಧಿಪತಿಗಳನ್ನು ಸದಾ ನಿಂದಿಸುವರಲ್ಲ ; ಏಕೆ ?

* ತಾನು–ತನ್ನದು ಎಂಬ ರಕ್ತಸಂಬಂಧದ ಸಂಕೋಲೆ ಕಿತ್ತೊಗೆದು, ಸಮಾಜದ ಮಕ್ಕಳೆಲ್ಲ ನನ್ನವರು ಎಂಬ ವಿಶಾಲ ಭಾವನೆಯಿಂದ ಶಾಲೆ–ಕಾಲೇಜು ತೆರೆದು, ಹಗಲಿರುಳು ದುಡಿದು ವಿದ್ಯಾರ್ಥಿಗಳಿಗೆ ಪ್ರಸಾದ ವ್ಯವಸ್ಥೆ ಮಾಡಿ, ವಿದ್ಯಾಪ್ರಸಾರ ಮಾಡುವುದೇ ಸ್ವಾಮಿಗಳ ಅಪರಾಧವಾಗಿರಬಹುದು (!) ಇಂಥಾ ನಿಂದಕರಿಗೆ. ಅನ್ಯರ ನಿಂದೆಯಲ್ಲೇ ಕಾಲ ಕಳೆಯುವ ಇವರು ಸಮಾಜಕ್ಕೆ ತಾವೇನು ಕೊಡುಗೆ ಸಲ್ಲಿಸಿದ್ದೇವೆ ಎಂದು ಪ್ರಶ್ನೆ ಹಾಕಿಕೊಂಡರೆ ಎಷ್ಟೋ ಉಪಕಾರವಾದೀತು.

—ಜಿ. ಬಿ. ಪಟ್ಟಣಶೆಟ್ಟಿ, ಬೆಳಗಾಂವಿ.

★ ಕೆಲವರು ಕೀಳುಮಟ್ಟದ ನಿಂದೆ ಮಾಡುವುದರಲ್ಲಿ ಒಂದು ಬಗೆಯ ಹೊಲಸು ತೃಪ್ತಿ ಪಡುವರಲ್ಲಾ ಏಕೆ ?

* ಅದು ಹತಾಶ ಮನೋಭಾವನೆಯ ಪ್ರತೀಕ. ಸಾಮಾನ್ಯವಾಗಿ ವಿಧ್ವಂಸಕ ಕಾರ್ಯದಲ್ಲಿ ನಿರತರಾಗುವವರು ಮನೋರೋಗಿ (Neurotics)ಗಳೆಂದು ಮನೋವಿಜ್ಞಾನದ ಅಭಿಪ್ರಾಯ.

—ನಿಂಗಣ್ಣ. ಎಸ್. ಪಾಟೀಲ, ಬೆಳಗಾವಿ.

★ ಪ್ರತಿಭಾವಂತರನ್ನು ಕಂಡು ಕೆಲವರು ಮತ್ಸರಿಸುವುದೇಕೆ ?

* ಮತ್ಸರವು ಮೆಚ್ಚುಗೆಯ ಇನ್ನೊಂದು ಅಭಿವ್ಯಕ್ತಿ. ಸಾಮಾನ್ಯವಾಗಿ ತಾನು ಸಾಧಿಸಲಾಗದೆ ಸೋತಾಗ, ಅದೇ ದಿಶೆಯಲ್ಲಿ ಪ್ರಯತ್ನಿಸಿ ಇನ್ನೊರ್ವ ಜಯಶಾಲಿಯಾದಾಗ ಕರುಬಿ, ತನ್ನ ಸೋಲನ್ನು ಮತ್ಸರದ ರೂಪದಲ್ಲಿ ವ್ಯಕ್ತಪಡಿಸುವುದು ಮನುಷ್ಯ ಸ್ವಭಾವ.

(ಅನಿಸಿಕೆ–ಎರಡನೇ ಪುಟದಿಂದ)

ಅಸೂಯೆಯಾಗುವುದು ಸ್ವಾಭಾವಿಕ. ಆದರೇನಂತೆ, ಧರ್ಮದಿಂದ ನಡೆವವರಿಗೆ ಧರ್ಮವೇ ಶ್ರೀರಕ್ಷೆ. ಮೊನ್ನೆ ತಾನೆ ಬೆಂಗಳೂರಲ್ಲಿ ತಮ್ಮ ಸನ್ನಿಧಿಯಲ್ಲಿ ನಡೆದ ವಿಚಾರಗೋಷ್ಠಿ ಕಾರ್ಯಕ್ರಮ ಕಂಡು ಮತ್ಸರಿಸಿದವರಿಗೇನೂ ಕೊರತೆಯಿಲ್ಲ. ಇಂಥ ಕಾರ್ಯ ಮಾಡಲಿಕ್ಕೆ ಆಗದವರು ಏನೇ ನಿಂದೆಗೈದರೂ, ತಮ್ಮ ಪ್ರತಿಷ್ಠೆ ತಾವೇ ಕಳೆದುಕೊಳ್ಳುವುದರ ಹೊರತು ಮತ್ತೇನಾಗದು. ಸತ್ಯಪಥದಲ್ಲಿ ಉನ್ನತ ಗುರಿಯತ್ತ ಸಾಗುವವರು ಧೈರ್ಯದಿಂದ ಮುಂದುವರೆಯಬೇಕೆಂಬುವ ಸ್ಥೈರ್ಯವನ್ನು ತಮ್ಮಿಂದ ನಾವು ಪಡೆಯುತ್ತಿರುವೆವು.

ಜಿ. ಬಿ. ಪಟ್ಟಣಶೆಟ್ಟಿ,
ಹಿಂದವಾಡಿ, ಬೆಳಗಾಂ.

ಕಲ್ಯಾಣಕಿರಣ ನಮ್ಮನ್ನು ದಂಗಾಗಿಸಿದೆ ಎಂಥ ಪ್ರೌಢ ಸಂಪಾದಕೀಯ, ತಾತ್ತ್ವಿಕ ಸಮಸ್ಯೆ-ಸಮಾಧಾನ, ಹೃದಯ ತಣಿಸುವ ವಚನ ನವನೀತ! ಪ್ರವಾಸ ಕಥೆ ಅತ್ಯಂತ ಮನೋಜ್ಞ, ಪತ್ರಿಕೆಯ ಜೀವಾಳ. ಪೂಜ್ಯ ಲಿಂಗಾನಂದ ಶ್ರೀಗಳ ಪರಿಚಯ ಮನಸ್ಸನ್ನು ಸೆರೆ ಹಿಡಿವ ಲೇಖನ. ಇನ್ನು, ಗೋ.ರು.ಚ.ಅವರ ಲೆಕ್ಕಣಿಕೆಯಿಂದ ಪ್ರವಹಿಸಿದ ಕೆ.ಆರ್. ಲಿಂಗಪ್ಪನವರ ಪರಿಚಯ ಮಂತ್ರ ಮುಗ್ಧರನ್ನಾಗಿಸಿದೆ. ಅಂತೆಯೇ ಅನಂತ ಕಾಲ ಈ ನಮ್ಮ ನೆಚ್ಚಿನ ಪತ್ರಿಕೆ ಬಾಳಿ ಬೆಳಗಲೆಂಬ ಹಾರೈಕೆ ನಮ್ಮದು.

ಸಂಗಪ್ಪ ಸಜ್ಜನ್, ಜವಳಗೇರಿ.

ಮಾತು ಜ್ಯೋತಿರ್ಲಿಂಗ

(ಸಂಗ್ರಹ : **ಎಂ. ಗಂಗಮ್ಮ**)

ನಾಶವು ಸಮೀಪಿಸಿರುವವನು ವಿನಾಶಕಾರಿ ಘೋರಕೃತ್ಯಗಳನ್ನು ಶುಭಕಾರ್ಯಗಳೆಂದು ಭ್ರಮಿಸುತ್ತಾನೆ. ಸಜ್ಜನರ ತೇಜೋವಧೆ ಮಾಡಲೆಳಸಿ, ತನ್ನ ಆಯುಷ್ಯ. ಕೀರ್ತಿ ಹೆಚ್ಚುತ್ತಿರುವಂತೆ ಭಾವಿಸುವನು. ಆದರೆ ಸಾತ್ವಿಕರನ್ನು ಹಿಂಸಿಸುವುದರಿಂದ ತನ್ನ ಸಿರಿಸಂಪತ್ತು ಮತ್ತು ಆಯುಷ್ಯಗಳು ನಾಶವಾಗುವವೆಂದು ಅವನಿಗೆ ತಿಳಿಯದು.

—ಭಾಗವತ.

ದುಷ್ಟರ ಕಾರ್ಯಗಳು ವಿರೋಧಕ್ಕಿಂತ, ಪ್ರತಿಭಟನೆಗಿಂತ ಉದಾಸೀನ ಮಾಡಿಬಿಡುವುದರಿಂದ ಬೇಗ ಸಾಯುತ್ತವೆ. **—ಅನುಭವ ವಾಣಿ.**

ಕೆಲವೊಮ್ಮೆ ಪ್ರತಿಭಾವಂತರ ಬುದ್ಧಿವಂತಿಕೆ ವ್ಯರ್ಥವಾಗುವುದುಂಟು. ಮಳೆಯ ನೀರು ಚರಂಡಿಯಲ್ಲಿ ಹರಿದಾಗ ಕೊಚ್ಚೆಗುಂಡಿಯನ್ನು ಸೇರಿ ತ್ಯಾಜ್ಯವಾಗುವಂತೆ, ಬುದ್ಧಿವಂತನ ಪ್ರತಿಭೆ ವಿಧ್ವಂಸಕ ಮಾರ್ಗದಲ್ಲಿ ಹರಿದಾಗ ಅದು ತಿರಸ್ಕರಿಸಲ್ಪಡುವುದು.

—ಜಗದ್ಗುರು ಮಾತೆ ಮಹಾದೇವಿ.

ಪಾಪದಿಂದ ದೂರಸರಿಸುತ್ತಾನೆ, ಒಳ್ಳೆಯದಾರಿಗೆ ಹಚ್ಚುತ್ತಾನೆ, ಗುಪ್ತ ಸಂಗತಿಗಳನ್ನು ರಕ್ಷಿಸುತ್ತಾನೆ, ಗುಣಗಳನ್ನು ಪ್ರಕಾಶಕ್ಕೆ ತರುತ್ತಾನೆ, ಸಂಕಟಕ್ಕೆ ಈಡಾದವನನ್ನು ಕೈಬಿಡುವುದಿಲ್ಲ, ಆವಶ್ಯಕತೆಯಲ್ಲಿ ಕೊಡುತ್ತಾನೆ. ಇದು ಸನ್ಮಿತ್ರನ ಲಕ್ಷಣವೆಂದು ತಿಳಿದವರು ಹೇಳುತ್ತಾರೆ. **--ಸುಭಾಷಿತ.**

ನಿನ್ನ ಶತ್ರುಗಳಿಗೆ ಅನಾವಶ್ಯಕ ಮಹತ್ವ ಕೊಡುವುದರಿಂದ ನೀನೇ ಹಾಳಾಗುತ್ತೀಯ. ಈ ಲೋಕದಲ್ಲಿ ಸಾವಿರ ಸ್ನೇಹಿತರಿದ್ದರೂ ಅವರಾರೂ ಕಾಣರು, ಒಬ್ಬ ಶತ್ರುವಿದ್ದರೆ ಅವನ ಕೈವಾಡ ಎಲ್ಲೆಲ್ಲಿಯೂ ಕಾಣಬರುವುದು. **—ಎಮರ್ಸನ್.**

ಬಲವು ಆಳುವಾಗ, ನ್ಯಾಯವು ದಾಸ್ಯದಲ್ಲಿರುತ್ತದೆ. **—ಜರ್ಮನ್‌ಗಾದೆ.**

ಸುತ್ತಿಗೆಯ ಬಡಿತವಲ್ಲ, ನೀರಿನ ಅಲೆಯ ಮಂಜುಳ ನಾಟ್ಯ, ಒರಟು ಕಲ್ಲುಗಳನ್ನು ಗುಂಡು ಮಾಡಬಲ್ಲುದು. **—ರವೀಂದ್ರನಾಥ ಟಾಗೋರ್.**

ಒಬ್ಬನು ರಾಜನೇ ಇರಲಿ, ಜನಸಾಮಾನ್ಯನೇ ಇರಲಿ, ಮನೆಯಲ್ಲಿ ಅವನ ಸ್ಥಾನವು ಭದ್ರವಿದ್ದರೆ ಮಾತ್ರ ಅವನು ಅದೃಷ್ಟವಂತ ಆಗಬಹುದು. **—ಗಯೆಟೆ.**

ಧರ್ಮಕ್ಕಾಗಿ ಸಾಯುವವರು ಸಿಗಬಹುದು. ಧರ್ಮಕ್ಕಾಗಿ ಬದುಕುವವರು ಸಿಗುವುದು ಬಹಳ ದುರ್ಲಭ. **—ಲೂಯಿಸ್ ಬೋರ್ಜನ್.**

ಒಬ್ಬ ವ್ಯಕ್ತಿ ಒಂದು ವಿಶಿಷ್ಟ ತತ್ತ್ವಕ್ಕಾಗಿ ಸತ್ತ ಮಾತ್ರಕ್ಕೆ ಅದು ಸತ್ಯವೆಂದೇನೂ ಸಿದ್ಧವಾಗದು.

—ಆಸ್ಕರ್ ವೈಲ್ಡ್.

ಸಂಪ್ರದಾಯ ಮತ್ತು ಯುವಜನಾಂಗ

—ಗಣಾಚಾರಿ

(ನವಂಬರ ಕಲ್ಯಾಣ ಕಿರಣದಲ್ಲಿ ಪ್ರಕಟವಾದ ಗೋ. ರು. ಚ. ಅವರ ದೊಡ್ಡಮರ ಕವನದಿಂದ ಸ್ಫೂರ್ತಿಗೊಂಡು ಬರೆದ ಲೇಖನವಿದು.)

ಒಂದು ಕಡೆ ಪರಂಪರಾಗತವಾಗಿ ಹರಿದು ಬಂದ ರೂಢಿಗಳನ್ನು ಸಮರ್ಥಿಸಿಕೊಳ್ಳಲು ಬೃಹತ್ತಾಗಿ ನಿರ್ಮಾಣವಾಗುತ್ತಿರುವ ಶಾಸ್ತ್ರೀಯ ಧಾರ್ಮಿಕ ಸಾಹಿತ್ಯ ; ಇನ್ನೊಂದೆಡೆ ಧರ್ಮ, ದೇವರು, ಆಚರಣೆಗಳನ್ನು ಕಂಡು ಮುಸಿ ಮುಸಿ ನಗುತ್ತ, ವಿಡಂಬಿಸಿ ಬರೆಯುತ್ತ ಹಗುರವಾಗಿ ನಿನ್ನೆಯನ್ನೇ ಅಲ್ಲಗಳೆಯುವ ನವಜನಾಂಗದ ಸಾಹಿತ್ಯ. ಒಂದು ಕಡೆ ಧಾರ್ಮಿಕ ಶ್ರದ್ಧೆಗಳನ್ನು ಹೇಗೋ ಉಳಿಸಿಕೊಂಡು ನೀರ ಕಂಡಲ್ಲಿ ಮುಳುಗುತ್ತ, ಮರವ ಕಂಡಲ್ಲಿ ಸುತ್ತುತ್ತ, ಗುಡಿಯ ಕಂಡಲ್ಲಿ ಮುಡಿಯ ಕೊಡುತ್ತ, ಧರ್ಮವನ್ನು ರಕ್ಷಿಸಿಕೊಳ್ಳುತ್ತಿದ್ದೇವೆಂಬ ಸಮಾಧಾನ ಪಡೆಯುತ್ತ ಬಾಳುವ ಜನಾಂಗ. ಇಂಥವನ್ನು ಕಂಡು ಬೇಸರಿಸಿ, ಜಿಗುಪ್ಸೆಗೊಂಡು ಸಾತ್ವಿಕಾಚರಣೆಗಳಾದ ಪ್ರಾರ್ಥನೆ, ಧ್ಯಾನ, ಸಾಧನೆಗಳನ್ನು ಸಹ ತಿರಸ್ಕರಿಸಿ, ತಾವೇ ಕ್ರಾಂತಿಕಾರಿಗಳೆಂದು ಬೆನ್ನು ತಟ್ಟಿಕೊಳ್ಳುವ ಕಿರಿಯ ಜನಾಂಗ. ದಿನದಿನಕ್ಕೂ ಈ ಜನಾಂಗ-ಕಂದರ *(Generation gap)* ಹಿರಿದಾಗುತ್ತಿದೆ. ಈ ಕಂದರವನ್ನು ಮುಚ್ಚುವುದು ಹೇಗೆ ? ಪರಸ್ಪರರಲ್ಲಿ ತಿಳುವಳಿಕೆ ಮೂಡಿಸಿ ಹತ್ತಿರ ತರುವುದು ಸಾಧ್ಯವೆ ?

ಸಾಧ್ಯ ; ವಿಚಾರ ಪರಿವರ್ತನೆಯಿಂದ ಮಾತ್ರ ಸಾಧ್ಯ. ಮೊಟ್ಟಮೊದಲು ಹಿರಿಯರನ್ನು ಗಮನಿಸೋಣ. ವಿಶಿಷ್ಟ ಪರಿಸರದಲ್ಲಿ ಹುಟ್ಟಿ, ಒಂದೇ ವಿಚಾರದ ಜಾಡಿನಲ್ಲಿ ಬಂದ ಅವರು ಹೊಸತೆಂದರೆ ದಿಗಿಲು ಪಡುವರು. ಚಳಿಯನ್ನು ಎದುರಿಸಲಾರದ ಮೈ ಹಳೆಯ ಕವುದಿಯಲ್ಲೇ ಮುದುರಿಮುದುರಿ ಮಲಗುವಂತೆ, ಹಳೆಯರು ತಮ್ಮ ಪರಂಪರಾನುಗತ ರೂಢಿಗಳ ಕೌದಿಯನ್ನು ಬಿಟ್ಟು ಹೊರಬರಲಾರರು. ಈ

ಮನೋಭಾವನೆಯನ್ನು ಅತ್ಯಂತ ಸರಳ ಸುಂದರ ವೈಚಾರಿಕ ಭಾಷೆಯಲ್ಲಿ ಗೋ.ರು.ಚ.ರವರು 'ದೊಡ್ಡಮರ' ಎಂಬ ತಮ್ಮ ಒಂದು ಕವನದಲ್ಲಿ ಚಿತ್ರಿಸಿರುವರು. ಭಾರತೀಯ ಸಮಾಜದಲ್ಲಿ ಕೆಲವು ರೂಢಿಗಳು ಬಂದುಬಿಟ್ಟಿವೆ. ಎಂದಿನಿಂದಲೋ ಬಂದ ದೊಡ್ಡಮರದಂತೆ. ಅದು ಎಂದು ಹುಟ್ಟಿತು, ಏಕೆ ಹುಟ್ಟಿತು? ನಾವರಿಯೆವು ; ನಮ್ಮ ಅಜ್ಜಿಯೂ ಅರಿಯರು. ಈಗ ಅದು ನಿಷ್ಪ್ರಯೋಜಕವಾಗಿ ನಿಂತುಬಿಟ್ಟು, ಗಾಳಿ ಬೀಸಿದಾಗ ಜೀಕು ಜೀಕು ಮಾಡಿ ನಿದ್ದೆಗೆಡಿಸುವುದು ಬಿಟ್ಟರೆ ಇನ್ನೇನೂ ಸಾರ್ಥಕ್ಯ ಸಾಧಿಸದು. ಆದರೂ ಆ ಸಂಪ್ರದಾಯಿ ವೃಕ್ಷದ ಮೇಲೆ ಹಿರಿಯರದು ವ್ಯಾಮೋಹ. ಇಂದು ವಿಚಾರವಂತರೆಂದು ಭುಜ ಚಪ್ಪರಿಸಿಕೊಳ್ಳುವ ಜನರೇನಾದರೂ ಅಜ್ಜಿಯನ್ನು ಪರಿವರ್ತಿಸಿ, ಸತ್ಯದೆಡೆಗೆ ಕರೆತಂದಾರೆ ? ಇಲ್ಲ ; ಅಜ್ಜಿಗೆ ಬೇಕಾದ ವಸ್ತು (ಉಪಯುಕ್ತವಾದುದೆಂದಲ್ಲ!) ವೆಂದು, ಆಕೆಯ ಮನಸ್ಸಿಗೆ ನೋವುಂಟು ಮಾಡುವುದೇಕೆಂದು, ಆಕೆಗಾಗಿ ಮನೆ ಮಂದಿ ಎಲ್ಲಾ ಪ್ರೀತಿಸುವರು. ಇದೊಂದು ದಾಸ್ಯ. ಏಕೆ ? ಎಂಬ ಪ್ರಶ್ನೆ ಕೇಳಿಕೊಳ್ಳುವ ಎದೆಗಾರಿಕೆ ಎಷ್ಟು ಜನಕ್ಕೆ ?

ಆ ಗಿಡ ಒಂದು ಕಾಲಕ್ಕೆ ಎಲೆ, ಹೂ, ಹಣ್ಣು ಎಲ್ಲಾ ಕೊಟ್ಟಿರಬಹುದು ? ಆಚರಣೆಗೆ ತರುವ ಕಾಲಕ್ಕೆ ಈ ರೂಢಿ ಸ್ವಲ್ಪ ಉಪಯುಕ್ತವಾಗಿದ್ದಿರಬೇಕು. ಆದರೆ ಈಗ ? ಕಾಲನ ಗಾಳಿ ಬೀಸಿದೆ ; ವೈಜ್ಞಾನಿಕ ಮೌಲ್ಯ–ವಿಚಾರದ ಪ್ರೌಢಿಮೆಯ ಗಾಳಿ ಹಾಯ್ದಿದೆ. ರೂಢಿಯ ಎಲೆಯುದುರಿವೆ ; ಯಾವ ಸತ್ಯವೂ ಉಳಿದಿಲ್ಲ. ಇಂದು ಆ ಸಂಪ್ರದಾಯದ ಮರ ನೂತನ ಸಮಾಜಕ್ಕೆ ನಾಸ್ತಿಕವಾದ ಅಥವಾ ವೈಚಾರಿಕವಾದದ ಮಳೆಯನ್ನು ತಡೆದು ರಕ್ಷಣೆ ನೀಡುವ ಸಾಮರ್ಥ್ಯವನ್ನು ಹೊಂದಿಲ್ಲ ; ಅಧ್ಯಾತ್ಮ ಸಕ್ತಿಯ ನೆಳಲು ಬಯಸಿ ಬರುವ ಮುಮುಕ್ಷುಗಳ ಅಭೀಪ್ಸೆಯನ್ನೂ ತಣಿಸದು. ಇದನ್ನು ಸಂಪ್ರದಾಯವಾದಿಗಳೇನೂ ಅರಿಯರೆ ? ತಮ್ಮ ಕಣ್ಣೆದುರೇ ಕಿರಿಯರು ಆ ಗೊಡ್ಡು ಮರವನ್ನು ಕಡಿದು ಬಿಸುಟುವ ರೋಷ ವ್ಯಕ್ತಪಡಿಸುವುದನ್ನು ಅರಿಯರೇ ? ಆದರೂ ಕಪಿಮುಷ್ಟಿ ; ಸಂಪ್ರದಾಯ-ಪ್ರೇಮದ ಜಾಡ್ಯದಿಂದ ಹೊರಬರಲಾರದ ದೌರ್ಬಲ್ಯ. ಹುಡುಕಿದರೂ ಇಷ್ಟು ಸತ್ವಕಾಣದ, ಮತ್ತೆ ಪುಷ್ಟಿಗೊಂಡು ಜನಪ್ರೇಮ ಗಳಿಸಿಕೊಳ್ಳದ ಈ ಮೂಢ ರೂಢಿಯ ಬಗ್ಗೆ ಮೋಹಾಂಧತೆ. ಇಂಥ ಪ್ರಸಂಗದಲ್ಲಿ ದೊಡ್ಡ ಮಳೆ ಗಾಳಿಗೆ ಈ ಒಣಮರ ಬುಡ ಸಮೇತ ಕತ್ತರಿಸಿ ಮನೆಯ ಮೇಲೆರಗಿ, ಛಾವಣಿಯನ್ನೂ, ಅದನ್ನು ಆಶ್ರಯಿಸಿಕೊಂಡಿರುವವರನ್ನೂ 'ಜಕಂ' ಮಾಡುವ ಮುನ್ನ ಕಡಿದು ತೊಲೆ ಕಂಭ ಮಾಡಿ ಬಳಸೋಣ, ಎಂದು ಪ್ರಗತಿಗಾಮಿಗಳು ಮುಂದೆ ಬಂದರೆ ಅವರಿಗೆ ಒಪ್ಪಿಗೆ ನೀಡದ ಹಠ ಅಜ್ಜಿಯದು.

ಎಷ್ಟು ಚೆನ್ನಾಗಿದೆ ಈ ದೊಡ್ಡ ಮರದ ಕಥೆ ! ನಾವು ಕಟ್ಟಲಿರುವ ಭವಿಷ್ಯದ ಮನೆಗೆ ನಮ್ಮ ಸಂಪ್ರದಾಯ *(Tradition)* ಒದಗಿಸುವ ಕಟ್ಟಿಗೆಯಿಂದ ತೊಲೆ

ಕಂಭ ಮಾಡೋಣ; ನೂತನ ಮನೆಯ ಕಟ್ಟೋಣ ಎಂದರೆ, ರೂಢಿವಾದಿಗಳು ಒಪ್ಪುವುದೇ ಇಲ್ಲ. ಇದರಿಂದ ಬೇಸತ್ತ ಕಿರಿಯರು ಮರವನ್ನು ತ್ಯಜಿಸುವ ಜೊತೆಗೆ, ಮನೆಯನ್ನು, ಮನೆಯ ಅಜ್ಜಿಯನ್ನು ಧಿಃಕರಿಸಿ ಹೊರಟುಬಿಟ್ಟಿರುವರು ! ಅಜ್ಜಿಯ ಹೃದಯ ಪರಿವರ್ತನೆಯಾದರೆ ಎಷ್ಟು ಜನರ ತೊಂದರೆಗೆ ಪರಿಹಾರವಿದೆ.

ಇಲ್ಲಿಯ ತನಕ ದೃಷ್ಟಾಂತದ ವಿವರಣೆಯೇ ಆಯಿತು. ದ್ರಾಷ್ಟಾಂತವೇನು ? ಭಾರತೀಯ ಸಮಾಜದಿಂದ ಅಂಥವುಗಳು ನೂರನ್ನು ಹೆಕ್ಕಿ ತೆಗೆಯಬಹುದು. ಇಂದಿನ ಲಿಂಗಾಯತ ಸಮಾಜದ ಗುರು – ಲಿಂಗ – ಜಂಗಮದ ಕಲ್ಪನೆಯನ್ನು ವಿಶ್ಲೇಷಣೆ ಮಾಡುವಾ. ಅಷ್ಟಾವರಣದಲ್ಲಿ ಬರುವ ಈ ತ್ರಿವಿಧ ಪೂಜ್ಯವಸ್ತುಗಳ ಕಲ್ಪನೆ ತಾತ್ವಿಕ ಮತ್ತು ಪ್ರೌಢವಾಗಿದೆ. ಹಾಗೆ ಇದ್ದಿರಬೇಕೆಂದೇ ಬಸವ ಧರ್ಮ ಅಸಂಖ್ಯಾತರನ್ನು ಆಕರ್ಷಿಸಿತು. ಕಾಲಾನಂತರದಲ್ಲಿ ಇವುಗಳ ಅಧ್ಯಾತ್ಮಿಕ ಸತ್ವದ ಹಸಿಯಾರಿ' ಗುಣೈಕ ಮಾಪನದ ಎಲೆಗಳುದುರಿ, ಬೋಳು ಮರವಾಗಿ ಇಂದು 'ಜೀಕ್ ಜೀಕ್' ಸದ್ದು ಮಾಡುತ್ತಾ ವಿಚಾರ ಶೀಲರನ್ನು, ಮುಮುಕ್ಷುಗಳನ್ನು ಆಕರ್ಷಿಸದಂತೆ ನಿಂತಿದೆ.

ಮೂಲಾರ್ಥ ಏನಿರಬಹುದು ? ಇಂದು ಗುರುವೆಂದರೆ ದೀಕ್ಷೆ ಮಾಡಿದ ವ್ಯಕ್ತಿ, ಲಿಂಗವೆಂದರೆ ಇಷ್ಟಲಿಂಗ, ಜಂಗಮವೆಂದರೆ ಲಿಂಗಾಯತ ಸಮಾಜದ ಒಂದು ವರ್ಗ, ಹೀಗೆ ಅರ್ಥೈಸಲಾಗುತ್ತಿದೆ. ಹಾಗಾದರೆ ಧರ್ಮಗುರು, ಮಂತ್ರ ಪುರುಷ ಬಸವಣ್ಣನವರಿಗೆ ಸ್ಥಾನವೇ ಇಲ್ಲವೆ ? ಶರಣರು ತಮ್ಮ ಸಂವಿಧಾನವನ್ನು ರೂಪಿಸುವಾಗ ಗುರು-ಲಿಂಗ-ಜಂಗಮದಲ್ಲಿ ಗುರುವೆಂದು ಯಾರನ್ನು ಉದ್ದೇಶಿಸಿ ಕರೆದರು?

ಹರ ತನ್ನ ರೂಪವ ತೋರಬೇಕೆಂದು
ಶ್ರೀಗುರು ರೂಪಾಗಿ ಮರ್ತ್ಯಕ್ಕೆ ಬಂದು,
ಮನಸ್ಥಲಕ್ಕೆ ಮಂತ್ರವಾದ, ತನುಸ್ಥಲಕ್ಕೆ ಪ್ರಸಾದವಾದ
ಕರಸ್ಥಲಕ್ಕೆ ಲಿಂಗವಾದ, ಪ್ರಾಣಸ್ಥಲಕ್ಕೆ ಜಂಗಮವಾದ ;
ಇಂತೀ ಚತುರ್ವಿಧ ಸ್ಥಲದಲ್ಲಿ ಸಾಹಿತ್ಯವಾದನಯ್ಯಾ,
ಕೂಡಲ ಚನ್ನಸಂಗಯ್ಯನಲ್ಲಿ ಬಸವಣ್ಣನು. —ಚನ್ನಬಸವಣ್ಣ

ಪಂಚವಿಧವೇ ಪಂಚಬ್ರಹ್ಮವೆಂದು ಅರುಹಿದ
ಮಹಾಮಹಿಮ ಸಂಗನ ಬಸವಣ್ಣನು
ಎನಗೆಯೂ ಗುರು, ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣಾ, ಗುಹೇಶ್ವರಾ. —ಪ್ರಭುದೇವ

ಇಲ್ಲಿ ಗುರುವೆಂದರೆ ಮೊದಲ ಅರ್ಥ ಧರ್ಮಗುರು ಬಸವಣ್ಣ. ಈ ಅರ್ಥದಲ್ಲಿ ಗುರುವಿಗೆ ತನುವನ್ನು, ಲಿಂಗಕ್ಕೆ ಮನವನ್ನು, ಜಂಗಮಕ್ಕೆ ಧನವನ್ನೂ ಅರ್ಪಿಸ

ಬೇಕು ಎಂಬುದು ಅರ್ಥಗರ್ಭಿತವಾಗಿ ತೋರುತ್ತದೆ. ಧರ್ಮಗುರು ಬಸವಣ್ಣನಿಗೆ ತನುವನ್ನು ಅರ್ಪಿಸುವುದೆಂದರೆ ಈ ಶರೀರವನ್ನು ಅವರ ತತ್ತ್ವ ಪ್ರಸಾರಕ್ಕೆ, ಅವರು ಬೋಧಿಸಿದ ಮಾನವೀಯ ಮೌಲ್ಯಗಳ ಪ್ರಸರಣಕ್ಕೆ, ಅವರು ಸಂಕಲ್ಪಿಸಿದ್ದ ಆದರ್ಶ ಸಮಾಜ ರಚನೆಗೆ ಮುಡಿಪಿಟ್ಟು ದುಡಿಸಬೇಕು.

ಗುರು–ಈ ತತ್ತ್ವದಲ್ಲಿ ಎರಡನೆ ಸ್ಥಾನ ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಾ ಗುರು ಎಂಬ ಮಾರ್ಗದರ್ಶಕ ಗುರುಗಳಿಗೆ. 'ಆ ಈಶ ಈಯದಿದ್ದರೆ ಮಾನೀಶನೇನು ಕೊಡಬಲ್ಲ? ' ಎಂಬುಕ್ತಿಯಂತೆ ಬಸವಣ್ಣನೆಂಬ ಮಹಾಗುರು ಇಷ್ಟಲಿಂಗವನ್ನು ರಚಿಸದಿದ್ದರೆ, ಸಕಲರೂ ಧರಿಸಿ ಪೂಜಿಸುವ ಅವಕಾಶ ಕೊಡದಿದ್ದರೆ, ಎಲ್ಲರಿಗೂ ದೀಕ್ಷೆ ಪಡೆಯುವ ಸ್ವಾತಂತ್ರ್ಯ ನೀಡಿರದಿದ್ದರೆ ವ್ಯಕ್ತಿಗತ ಗುರು ಹೇಗೆ ಕೊಡಬಲ್ಲವನಾದಾನು ? ಮಹಾಗುರು ಬಸವಣ್ಣನ ತತ್ತ್ವಗಳನ್ನು ಅಳವಡಿಸಿಕೊಂಡು, ಆ ತಂದೆಯ ಕಾರುಣ್ಯ ಅವಧರಿಸಿಕೊಂಡಾಗ ವ್ಯಕ್ತಿಗುರುವಿಗೆ ಇನ್ನೊಬ್ಬರಿಗೆ ಅನುಗ್ರಹ ನೀಡುವ ಸಾಮರ್ಥ್ಯ ಬಂದೀತು. ಬಸವ ಜ್ಯೋತಿಯ ಸೋಂಕಿನಿಂದ ಈಗಿನ 'ವ್ಯಕ್ತಿ' ಗುರುವಾಗಿ, ತಾನೂ ಕಿಡಿಯಾಗಿ ಇನ್ನೊಂದು ಮುಮುಕ್ಷು ಹೃದಯಕ್ಕೆ ಬೆಳಕು ಹಚ್ಚಬಲ್ಲನು. ಆದ್ದರಿಂದ ಗುರು-ಲಿಂಗ-ಜಂಗಮದಲ್ಲಿ ಬರುವ ಗುರು ತತ್ತ್ವವು ಬಸವಣ್ಣನವರಿಗೇ ಸಂಬಂಧಿಸಿದ್ದೆಂಬುದರಲ್ಲಿ ಸಂಶಯವಿಲ್ಲ.

ನಮ್ಮಲ್ಲಿನ ಈ ಮಹಾಗೊಂದಲವನ್ನು, ಅನ್ಯಧರ್ಮಗಳ ಸಹಾಯದಿಂದ ಪರಿಹರಿಸಲು ಈಗ ಯತ್ನಿಸೋಣ. ಬೌದ್ಧ ಧರ್ಮ ಹೇಳುತ್ತದೆ:

೧. ಬುದ್ಧಂ ಶರಣಂ ಗಚ್ಛಾಮಿ (ಧರ್ಮ ಗುರುವಿಗೆ ಶರಣಾಗುತ್ತೇನೆ.)
೨. ಧಮ್ಮಂ ಶರಣಂ ಗಚ್ಛಾಮಿ (ಧರ್ಮಕ್ಕೆ ಶರಣಾಗುತ್ತೇನೆ.)
೩. ಸಂಘಂ ಶರಣಂ ಗಚ್ಛಾಮಿ (ಸಂಘಕ್ಕೆ ಶರಣಾಗುತ್ತೇನೆ.)

ಇದನ್ನೇ ಕ್ರೈಸ್ತ ಧರ್ಮದಲ್ಲಿ ನೋಡಿದಾಗ, ಆ ಧರ್ಮದ ಅನುಯಾಯಿತ್ವ ಪೂರ್ಣಗೊಳ್ಳುವುದು– ಗುರುವಿನೆಡೆಗೆ ದೇವನೆಡೆಗೆ ತಿರುಗಿದಾಗ, ಮತ್ತು Holy Fellowship ಸೇರಿದಾಗ. ಕ್ರೈಸ್ತ ಧರ್ಮದ ಈ ತತ್ತ್ವ ಮತ್ತು ಬೌದ್ಧ ಧರ್ಮದ ಮೂರು ಸೂತ್ರಗಳನ್ನು ಹೋಲಿಸಿದಾಗ ಅತ್ಯಂತ ಸ್ಪಷ್ಟವಾಗುತ್ತದೆ ಗುರುಬಸವಣ್ಣನಿಗೆ ಶರಣು ಎಂಬುದು ಮೊದಲ ತತ್ತ್ವ. ಇಂಥಾ ಗುರುವಿಗೆ ಶರಣಾದಾಗ ದೊರೆಯುವುದು ಶರಣರ ಸಂಗ, ಜಂಗಮ ಕೂಟ. 'ಜಂಗಮ'ವನ್ನು ಬೌದ್ಧಧರ್ಮದ ಸಂಘಕ್ಕೆ, ಕ್ರೈಸ್ತರ Holy Fellowshipಗೆ ಹೋಲಿಸಿದರೆ ಎಷ್ಟು ಅರ್ಥಗರ್ಭಿತವಾಗುವುದು! ಜಂಗಮವೆಂದರೆ ಮಹಾತ್ಮರು, ಯೋಗಿಗಳು, ನಿರಾಭಾರಿಗಳು, ಧರ್ಮಬೋಧಕರು, ನಿಸ್ವಾರ್ಥ ಸಮಾಜ ಸೇವಕರು ಎಂದು ವ್ಯಕ್ತಿವಾಚಕವಾಗಿ, ಜಂಗಮವೆಂದರೆ ಸಮಾಜ, ಮಾನವ ಕುಲಕೋಟಿ ಎಂದು ಸಮೂಹ ವಾಚಕವಾಗಿ ಬಳಸಿದರೆ ಕ್ರಾಂತಿ ವಿನೂತನ

ಧರ್ಮದಿಂದ ಸಾಧ್ಯವಾಗುವುದು. ಆಗ ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ. ಎಂಬ ತ್ರಿವಿಧ ದಾಸೋಹಕ್ಕೆ ತುಂಬಾ ಮಹತ್ವದ ಹಿನ್ನೆಲೆ ಸಿಗುವುದು. ಅದನ್ನು ಬಿಟ್ಟು ಜಾತಿವಾಚಕವಾಗಿ ಬಳಸಿ, ವ್ಯಕ್ತಿಯಲ್ಲಿ ಜ್ಞಾನ, ತಪಸ್ಸುಗಳಿರಲಿ ಬಿಡಲಿ ಜಾತಿ ನೋಡಿ ಪಾದಪೂಜೆ ಮಾಡಿದರೆ "ತಾನೇ ಉರಿಯದ ದೀವಿಗೆ ಇನ್ನೊಂದು ದೀಪವನ್ನೇನು ಹಚ್ಚೀತು" ?!

ನಾವು ಸಣ್ಣವರಿದ್ದಾಗ, ಬಿನ್ನಹ ತೀರಿಸಲು ಬರುವವರಿಗೆ ನಮಸ್ಕರಿಸಲು, ಪಾದ ತೀರ್ಥ ಸೇವಿಸಲು ಅಜ್ಜಿ ಹೇಳಿದಾಗ ಮಕ್ಕಳು ಎಲ್ಲರೂ ವಿರೋಧಿಸುತ್ತಿದ್ದೆವು. 'ಅವರಿಗೆ ಚರ್ಮರೋಗ ; ಬೀಡಿ ಸೇದ್ತಾರೆ. ನಾವು ಪಾದ ತೊಳೆಯೋಲ್ಲ'. ಅಜ್ಜಿ ಬಯ್ಯುತ್ತ ಅವಿವೇಕಿಗಳೆಂದು ಹೊಡೆಯುತ್ತ ಕರೆದೊಯ್ಯುತ್ತಿತ್ತು. "ಹಾಗೆಲ್ಲ ಅನ್ನಬಾರದು, ಅವರು ಜಂಗಮರು" ಎಂದು ಹೇಳುತ್ತಿತ್ತು. ಅರ್ಥವಾಗುತ್ತಿರಲಿಲ್ಲ, ಸುಮ್ಮನೇ ಕೇಳುತ್ತಾ ಅಜ್ಜಿಯ ಮನನೋಯಿಸಲಾರದೆ ಚಿಕ್ಕ ಮಕ್ಕಳಾದ ನಾವು ಬಾಗುತ್ತಿದ್ದೆವು. ಹಿರಿಯ ಹುಡುಗರು ಅಯ್ಯನವರನ್ನು ಅಷ್ಟು ದೂರದಲ್ಲಿ ಕಾಣುತ್ತಲೇ ಮೆಲ್ಲನೆ ಜಾರಿಕೊಳ್ಳುತ್ತಿದ್ದರು.

ಹೀಗೆ ಒತ್ತಾಯದಿಂದ ಅರ್ಥರಹಿತ ಆಚರಣೆ ಹೇರಹೋದಾಗ ತರುಣ ವಯಸ್ಕರು ಉದಾಸೀನ ಮಾಡುವರು ; ಇಲ್ಲವೇ ತಿರಸ್ಕರಿಸುವರು. ಅಥವಾ ಪ್ರತಿಭಟಿಸುವರು. ಅಂದಾಗ ನಮಗೆ ಏಕೆ ಬೇಕು 'ಜೀಕು ಜೀಕು' ಸದ್ದಿನ ನಿಷ್ಪ್ರಯೋಜಕ ಈ ಮರ? ಹಾಗಾದರೆ ಪಾದೋದಕ-ಪ್ರಸಾದ-ಅನುಗ್ರಹಕ್ಕೆ ಅರ್ಥವೇ ಇಲ್ಲವೆ ? ಹಿರಿಯರು ಕೇಳಬಹುದು. ಅರ್ಥವುಂಟೇ ಇಲ್ಲವೇ ಈಗ ಚರ್ಚೆಗೆ ಇಳಿಯುವುದಿಲ್ಲ. ನನ್ನ ಲೇಖನ ಸ್ಥಳ ಮುಗಿಯುತ್ತ ಬಂದಿದೆ. ಅರ್ಥ ಉಂಟೆಂದೇ ನಂಬೋಣ. ಆದರೆ ಸ್ವಲ್ಪ ವಿವೇಕಕ್ಕೂ ಸಾರಥ್ಯ ನೀಡೋಣ. ಜಾತಿಯಿಂದ ದೊಡ್ಡವನೆಂದು ಅಳೆಯದೆ, ಓರ್ವನು ಯಾವುದೇ ಜಾತಿ, ಅಂತಸ್ತಿನವನಿರಲಿ, ಅವನು ತಪೋನಿಧಿ, ಜ್ಞಾನಿ, ಸದ್ಗುಣಿ, ತ್ಯಾಗಿ, ಅನುಗ್ರಹಿಸಬಲ್ಲ ಸಮರ್ಥನು ಆಗಿದ್ದರೆ, ಅವನ ಕೃಪೆ–ತಪಸ್ಸುಗಳು ಸ್ವೀಕರಿಸುವವನನ್ನು ಉದ್ಧರಿಸಬಲ್ಲುವೆಂಬ ನಂಬುಗೆ ಇದ್ದರೆ ಆಗ ಪಡೆಯಲಿ. ಹೇಗಾದರೂ ಅಮವಾಸ್ಯೆ, ಹಬ್ಬಗಳಲ್ಲಿ ಪಾದೋದಕ ಬೇಕೆಂದು ಅರ್ಹತೆ ಇಲ್ಲದವನ ಪಾದವನ್ನು ತೊಳೆದು ಕುಡಿದು 'ಹಸಿದು ಎಕ್ಕೆಯ ಕಾಯನ್ನು ತಿನ್ನುವಂಥ, ನೀರಡಿಸಿ ವಿಷವ ಈಂಟುವಂಥ' ದಡ್ಡತನ ಮಾಡಬಹುದೆ ?

ಬೇಡವೆಂದರೆ ಹಿರಿಯರ ಉಗ್ರ ಪ್ರತಿಭಟನೆ, ಬೇಕೆಂದರೆ ಕಿರಿಯರ ತಿರಸ್ಕಾರ– ಇವನ್ನು ಎದುರಿಸಬೇಕಾಗುತ್ತದೆ ನಿಜವಾದ ತತ್ತ್ವ ಮತ್ತು ಸತ್ಯ. ಆದ್ದರಿಂದ ನೂತನ ಪರಂಪರೆಗೆ ಹೊಂದಿಕೊಳ್ಳುವ ಚಿಂತನಶೀಲತೆಯನ್ನು ಸಂಪ್ರದಾಯವಾದಿಗಳು, ಹಳೆಯ ಮೂಢ ರೂಢಿಗಳಲ್ಲಿ ಅಲ್ಪಸ್ವಲ್ಪ ಉಳಿದು, ಇಣುಕಿ ನೋಡುವ ಸತ್ಯವನ್ನು ಕಾಣ್ವ ಸೌಜನ್ಯವನ್ನು ವಿಚಾರಶೀಲ ತರುಣರು, ಅಳವಡಿಸಿಕೊಂಡು ಧರ್ಮ-ನೀತಿಗಳ ನೆಲೆಗಟ್ಟಿನ ಮೇಲೆ ಸಮಾಜ-ರಾಷ್ಟ್ರಗಳನ್ನು ನಿರ್ಮಿಸುವ ದೆಸೆಯಲ್ಲಿ ಸಾಗುವಂತಾಗಬೇಕು. ★

ಅನುಕರಣೀಯ ಆದರ್ಶ ದೈವೀಜ್ಞಾನ ಶಾಲೆ

ಪ್ರಭುದೇವ ದಿವ್ಯಜ್ಞಾನ ಮಹಾವಿದ್ಯಾಲಯ

ಬಸವರಾಜ ತಂಬಾಕೆ, ಬಿ.ಎ. ಬಿ.ಎಡ್.
ಜೀವವಿಮಾ ವಿಸ್ತರಣಾಧಿಕಾರಿಗಳು.

ಕರ್ನಾಟಕ ರಾಜ್ಯದ ಹಿಂದಿನ ರಾಜ್ಯಪಾಲರಾದ ಮೋಹನ್‌ಲಾಲ ಸುಖಾಡಿಯಾ ಅವರು ಒಮ್ಮೆ ಬಸವ ತತ್ತ್ವ ಗೋಷ್ಠಿಯ ಸಮಾರಂಭದಲ್ಲಿ ಮಾತಾಡುತ್ತ, ಕರ್ನಾಟಕದ ವೀರಶೈವ ಮಠಗಳು ನಡೆಸುತ್ತಿರುವ ಪ್ರಸಾದನಿಲಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ, "ಬಸವೇಶ್ವರರ ದಾಸೋಹ ತತ್ತ್ವ ಮಾತ್ರ ಅನೇಕ ಮಠಗಳಲ್ಲಿ ಇಂದೂ ಜೀವಂತವಿದ್ದುದು ಕಂಡು ಬರುತ್ತಿದೆ. ಅದರಂತೆ ಅವರ ಸಾಮಾಜಿಕ, ಆರ್ಥಿಕ, ಧಾರ್ಮಿಕ ತತ್ತ್ವಗಳನ್ನೂ ಈ ಸಮಾಜವು ಅನುಸರಿಸುತ್ತ ಬಂದಿದ್ದರೆ ಇಂದು ದೇಶದ ಚಿತ್ರವೇ ಬೇರೆಯಾಗುತ್ತಿತ್ತು. ಈ ಆಪತ್ಕಾಲದ ಪೋಷಣೆಯ ಅವಶ್ಯಕತೆಯೇ ಬರುತ್ತಿರಲಿಲ್ಲ.'' ಎಂದು ಹೇಳಿದ್ದರು.

ಇಂದು ಅನೇಕ ಮಠಗಳು, ಸಂಸ್ಥೆಗಳು ಅನೇಕರಿಗೆ ಹೊಟ್ಟೆಗೆ ಅನ್ನವನ್ನು ಇತ್ತು 'ಉಪ-ಜೀವನ' (ಶಾಲಾ ಶಿಕ್ಷಣ) ದ ವಿದ್ಯೆಯನ್ನೇ ಕೊಡುತ್ತಿವೆಯಲ್ಲದೆ, ಅದರ ಜತೆ 'ಜೀವನ ವಿದ್ಯೆ' (ಧರ್ಮ ತತ್ತ್ವಬೋಧೆ) ಯ ಬಗ್ಗೆ ಚಿಂತಿಸುತ್ತಿಲ್ಲ. ಅಂತೆಯೇ ವೀರಶೈವ ಮಠಗಳಲ್ಲಿ ೧೦-೧೨ ವರುಷ ಉಳಿದು ಕಲಿತ ಪಂಡಿತರಿಗೂ, ಶಿಕ್ಷಣ ಪಡೆದು ಹೊರಬಂದ ವಿದ್ಯಾರ್ಥಿಗಳಿಗೂ ತಮ್ಮ-ಧರ್ಮ-ತತ್ತ್ವಗಳ ಬಗೆಗೆ ಸರಿಯಾದ ಪರಿಚಯ ಆಗುತ್ತಿಲ್ಲ.

ಇಷ್ಟೇ ಅಲ್ಲ, ಮಠಾಧಿಪತಿಗಳಾಗುವ ಅನೇಕ ವಟುಗಳಿಗೆ ತಮ್ಮ ಧರ್ಮ-ತತ್ತ್ವಗಳ ಬಗ್ಗೆ ಸರಿಯಾದ ತರಬೇತಿ ಕೊಡುವ ಕೇಂದ್ರಗಳು ಇಲ್ಲವೆಂದರೆ ತಪ್ಪಾಗಲಿಕ್ಕಿಲ್ಲ ನಮ್ಮ ಬಹುಪಾಲು ಮಠಾಧಿಕಾರಿಗಳು,— ಕಾಶಿಯಲ್ಲೊ ಅಥವಾ ಸಂಸ್ಕೃತ ಕಾಲೇಜಿನಲ್ಲೋ ಓದಿದವರಾಗಿರುತ್ತಾರೆ. ಅವರಿಗೆ ಅಲ್ಲೆಲ್ಲೂ ಲಿಂಗಾಯತ ಧರ್ಮ (ಬಸವ ಧರ್ಮ) ದ ಬಗೆಗೆ ಪರಿಚಯ ಕೂಡ ಆಗಿರುವುದಿಲ್ಲ. ಹೀಗೆ ತಮ್ಮ ಧರ್ಮದ ಪರಿಜ್ಞಾನ-ಇಲ್ಲದವರೊಬ್ಬರನ್ನು ಆ ಧರ್ಮದ ಮಠಾಧಿಕಾರಿಗಳಾಗಿ ನೇಮಿಸುವದೆಂದರೆ, ಒಬ್ಬ ಸಾಹಿತಿಯನ್ನೊ, ಇಂಜಿನಿಯರನನ್ನೊ ನಮ್ಮವನೆಂದು ನಮ್ಮೂರ ಆಸ್ಪತ್ರೆಗೆ ವೈದ್ಯರಿಲ್ಲವೆಂದು ಅವರನ್ನೇ ವೈದ್ಯರೆಂದು ನೇಮಿಸಿ ಕೊಳ್ಳುವಷ್ಟೇ ಬುದ್ಧಿವಂತಿಕೆ

ಯಾಗುವುದಿಲ್ಲವೇ ? ಇದರಿಂದ ರೋಗಿಗಳ ರೋಗವೂ ವಾಸಿಯಾಗದು, ಸಂಸ್ಥೆಯೂ ಬದುಕದು. ಇದೇ ಗತಿ ಇಂದು ಈ ಸಮಾಜಕ್ಕೂ ಮಠಗಳಿಗೂ ಒದಗಿದೆ.

ಈ ಕೊರತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಇದೇ ಜೂನ್ ತಿಂಗಳಿನಿಂದ ಬೆಂಗಳೂರು (ಬಸವ ಮಂಟಪ) ದಲ್ಲಿ 'ಪ್ರಭುದೇವ ದಿವ್ಯಜ್ಞಾನ ಮಹಾವಿದ್ಯಾಲಯ (Prabhudeva College of Divinity) ವನ್ನು ಆರಂಭಿಸಲಾಗಿದೆ. ಮತ್ತು ಒಂದು ವರ್ಷದ ಡಿಪ್ಲೋಮಾ ತರಬೇತಿಯನ್ನು ಪ್ರಾರಂಭಿಸಿ ೧೫ ವಿದ್ಯಾರ್ಥಿಗಳಿಗೆ ತರಗತಿಗೆ ಪ್ರವೇಶ ನೀಡಲಾಗಿದೆ. ಅವರೆಲ್ಲರಿಗೂ ಉಚಿತ ಪ್ರಸಾದ, ವಸತಿ, ಶಿಕ್ಷಣ ಮತ್ತು ವಾಚನಾಲಯ ಸೌಲಭ್ಯವನ್ನು ಒದಗಿಸಲಾಗಿದೆ. ಇಲ್ಲಿ ತರಬೇತಿ ಶಿಕ್ಷಣಾನಂತರ ಸನ್ಯಾಸವನ್ನು ಸ್ವೀಕರಿಸಲೇಬೇಕೆಂಬ ನಿಯಮವಿಲ್ಲ. ತಮ್ಮ ಆಸಕ್ತಿ-ಸಾಮರ್ಥ್ಯಕ್ಕನುಸರಿಸಿ ಸನ್ಯಾಸಿಗಳೂ ಆಗಬಹುದು; ಇಲ್ಲವೇ ಗೃಹಸ್ತರಾಗಿ ಧರ್ಮಬೋಧಕರಾಗಬಹುದು. ಪ್ರವೇಶ ಪಡೆಯಲಿಚ್ಛಿಸುವವರು ವಿಶಿಷ್ಟ ಜಾತಿಯವರಾಗಿರಬೇಕು ಎನ್ನುವ ಕಡ್ಡಾಯವಿಲ್ಲ. ತರಬೇತಿ ಮುಗಿದ ಬಳಿಕ ಅವರು ಇಚ್ಛಿಸಿದರೆ ಉದ್ಯೋಗದ ಭರವಸೆಯೂ (ಶಿಕ್ಷಕ, ಬೋಧಕ, ಪ್ರಚಾರಕ) ಇದೆ. ಕನಿಷ್ಟ ವಿದ್ಯಾರ್ಹತೆ ಮೆಟ್ರಿಕ್ಯುಲೇಶನ್, ಪದವೀಧರರಿಗೆ ಪ್ರಾಶಸ್ತ್ಯ ನೀಡಲಾಗುವುದು. ನನ್ನ ಅಲ್ಪ ಪ್ರೇರಣೆಯಿಂದ ಈ ತರಬೇತಿಗೆ ಸೇರಿದ ಒಬ್ಬ ವಿದ್ಯಾರ್ಥಿಯು ಶಾಲೆಯಲ್ಲಿ ಪಡೆದ ತನ್ನ ಮೂರು ತಿಂಗಳ ಶಿಕ್ಷಣದ ನಂತರ ತನ್ನ ಅನುಭವಗಳನ್ನು ನನಗೆ ಬರೆದು ತಿಳಿಸಿದ್ದಾರೆ. ಆ ಪತ್ರವು ಈ ರೀತಿ ಇದೆ:—

ಬೆಂಗಳೂರು
೧-೯-೭೭

ಪೂಜ್ಯ ಶರಣರಾದ ಶ್ರೀ ಬಸವ ರಾಜ ತಂಬಾಕೆ ಅವರಿಗೆ,

ನಿಮ್ಮ ಶಿಶು ಶಿವಲಿಂಗದೇವರು ಮಾಡುವ ಭಕ್ತಿಯ ಪ್ರಣಾಮಗಳು. ವಿಶ್ವಗುರು ಬಸವಣ್ಣನವರ ಕಾರುಣ್ಯದಿಂದ ನಮ್ಮ ಅಭ್ಯಾಸ ಅತ್ಯಂತ ಭರದಿಂದ ಸಾಗಿದೆ. ನಿಜವಾಗಿಯೂ ನನ್ನ ಜೀವನದಲ್ಲಿಯೇ ಇಂತಹ ಆನಂದಾನುಭೂತಿ ಕಂಡಿಲ್ಲ. ಇನ್ನೂ ದಿನಗಳು ಹೆಚ್ಚಾದಂತೆಲ್ಲ ಆನಂದ ಹೆಚ್ಚಾಗುತ್ತಾ ನಡೆದಿದೆ, ನಾನು ಹೃತ್ಪೂರ್ವಕವಾಗಿ ತಿಳಿಸುತ್ತಿರುವೆ, ಆ ಆನಂದವನ್ನು ವರ್ಣಿಸಲು ಶಬ್ದಗಳೇ ಸಿಗುತ್ತಿಲ್ಲ. ಬರೆಯಲು ಹೊರಟರೆ, ಲೇಖನಿ ಮುಂದೋಡುತ್ತಿಲ್ಲ. ನಾನಿಲ್ಲಿ ಒಂದು ನಿಮಿಷವನ್ನೂ ವ್ಯರ್ಥವಾಗಿ ಅನ್ಯ ವಿಷಯ ಚಿಂತೆ ಮಾಡುತ್ತಿಲ್ಲ. ಕೇವಲ ಜ್ಞಾನ, ಅಭ್ಯಾಸ, ಧ್ಯಾನ ಇವುಗಳ ಬಗ್ಗೆ ಮಾತ್ರ ಚಿಂತನೆ ಗೈಯುತ್ತಿರುವೆ. ಅನೇಕರಿಂದ ಓಲೆಗಳು ಬಂದರೂ ಅವುಗಳಿಗೆ ಉತ್ತರ ಕೂಡ ಬರೆಯುತ್ತಿಲ್ಲ. 'ಅದರ ಬದಲಾಗಿ ಅಭ್ಯಾಸ ಮಾಡಿದರೆ ಒಳ್ಳೆಯದು' ಎಂದು ಬಗೆದು ಅಭ್ಯಾಸದ ಕಡೆಗೆ ಗಮನ ಕೊಟ್ಟಿರುವೆ.

ಇದೊಂದು ಸುವರ್ಣಾವಕಾಶ, ಜ್ಞಾನಾಮೃತವನ್ನು ಸವಿಯಲು ಅವಕಾಶ ಸಿಕ್ಕಿದೆ. ಈ ಜ್ಞಾನಾಮೃತವನ್ನು ಹೆಚ್ಚು ಈಂಟಿ ಬಾಳನ್ನು ಪುನೀತಗೊಳಿಸಲು ಪ್ರಯತ್ನಿಸುವೆ. ಇಂತಹ ಜ್ಞಾನ ಸುಧೆಯನ್ನು ಸವಿಯಲು ನನಗೆ ಅವಕಾಶ ಕಲ್ಪಿಸಿಕೊಟ್ಟವರು ತಾವು. ಹೊಸ ಹೊಸ ತತ್ತ್ವಗಳು ದಿನ ದಿನಕ್ಕೆ ಹೆಚ್ಚು ಗೊತ್ತಾದಂತೆಲ್ಲಾ ತಮ್ಮ ನೆನಪು ಚಿತ್ತ ಪರದೆಯ ಮೇಲೆ ಅನೇಕ ಬಾರಿ ಹಾಯ್ದು ಹೋಗುತ್ತದೆ. ಈ ತಮ್ಮ ಉಪಕಾರವನ್ನು ಜೀವನ ಪರ್ಯಂತ ಮರೆಯಲಾರೆ ಎನ್ನಿಸುತ್ತದೆ. ನಿಮ್ಮೀ ಉಪಕಾರವನ್ನು ತೀರಿಸುವ ಮಾರ್ಗವನ್ನು ಈ ರೀತಿಯಾಗಿ ನಾನು ನಿರ್ಧರಿಸಿರುವೆ. ಮಹಾರಾಷ್ಟ್ರ, ಆಂಧ್ರ ಮತ್ತು ಕನ್ನಡ ನಾಡು—ಈ ಮೂರು ಪ್ರಾಂತಗಳಲ್ಲಿ ಬಸವ ಧರ್ಮದ ಬಾವುಟ ಹಾರಿಸಿದಾಗ ಈ ಜ್ಞಾನಾರ್ಜನೆಯ ಉಪಕಾರ ತೀರೀತು ಎಂದು ಭಾವಿಸಿರುವೆ. ಇರಲಿ.

ನಾನು ಇಲ್ಲಿಗೆ ಬರುವುದಕ್ಕೆ ಪೂರ್ವದಲ್ಲಿ ಜ್ಞಾನವು ಸಾಗರದಂತೆ ಇದೆಯೆಂದು ಮಾತ್ರ ಗೊತ್ತಿತ್ತು. ಆದರೆ ಅದೆಷ್ಟು ಆಳ ಮತ್ತು ವಿಶಾಲವಿದೆ ಎನ್ನುವುದು ಗೊತ್ತಿರಲಿಲ್ಲ. ಅದು ಈಗ ಗೊತ್ತಾಗುತ್ತಲಿದೆ. ತನುವಿಗೆ ಅನ್ನ, ಬುದ್ಧಿಗೆ ಜ್ಞಾನ, ಬಾವಕ್ಕೆ ಭಕ್ತಿ ಈ ಮೂರು ಯಥೇಚ್ಛವಾಗಿ ಸಿಗುತ್ತಲಿವೆ. ಈ ರೀತಿಯಾಗಿ ನಾನು ಜ್ಞಾನವನ್ನು ಪಡೆದುಕೊಳ್ಳಬೇಕೆಂಬ ಹಂಬಲ ಬಹುದಿನಗಳಿಂದ, ಬಿ. ಎ. ನಲ್ಲಿ ಅಭ್ಯಾಸ ಮಾಡುತ್ತಿರುವಾಗಿನಿಂದ ಇತ್ತು. ಒಮ್ಮೊಮ್ಮೆ, ಬಂದು ಟ್ರಂಕಿನಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಒಂದು ಗವಿಯಲ್ಲಿ ಕುಳಿತು ಐದಾರು ತಿಂಗಳು ಅಭ್ಯಾಸ ಮಾಡಿ ಹೊರಬರಬೇಕೆಂದು ಅದೆಷ್ಟು ಸಲ ಮನಸ್ಸಿನಲ್ಲಿ ಯೋಚಿಸಿದ್ದೆ; ಈಗ ಕೇವಲ ಜ್ಞಾನಗವಿಯಷ್ಟೆ ಅಲ್ಲದೇ ಗವಿಯ ಜೊತೆಗೆ ಈ ಜ್ಞಾನಗಹ್ವರದಲ್ಲಿ ಇಬ್ಬರು ಜ್ಞಾನಗುರುಗಳೂ ಸಿಕ್ಕಿದ್ದಾರೆ............ತಮ್ಮ ಆಶೀರ್ವಾದದ ಓಲೆಗಾಗಿ ಹಂಬಲಿಸುತ್ತಿರುವೆ.

ಇತೀ ಶರಣು ಶರಣಾರ್ಥಿ

ಶಿವಲಿಂಗದೇವರು, ಬಿ.ಎ.

ಮೇಲಿನ ಪತ್ರವನ್ನು ಕಂಡಾಗ, 'ಇಂಥಹ ತರಬೇತಿ ಹೊಂದಿದವರೇ ಮಠಾಧಿಕಾರಿಗಳಾದರೆ ಸಮಾಜದ ಪ್ರಸ್ತುತ ಸ್ಥಿತಿ ಬದಲಾಗುವ ಸಾಧ್ಯತೆ ಇಲ್ಲವೆ ? ಎನಿಸದಿರದು. ವೀರಶೈವ ಮಠಾಧಿಕಾರಿಗಳಿಗೆ ಧಾರ್ಮಿಕ ತರಬೇತಿ ಒದಗಿಸುವ ಏಕೈಕ ಸಂಸ್ಥೆ ಎಂದು ಹೇಳಿಕೊಳ್ಳುವಂತಹುದು ಶಿವಯೋಗಮಂದಿರ. ಅದು ಪ್ರಾರಂಭವಾದಾಗ ಇರಿಸಿಕೊಂಡಿದ್ದ ತನ್ನ ಧ್ಯೇಯ, ಧೋರಣೆಗಳನ್ನು ಕಳೆದುಕೊಂಡಿಲ್ಲವೆ ? ಅಲ್ಲಿ ದೊರೆಯುವ,

(೨೬ನೇ ಪುಟ ನೋಡಿರಿ)

ಗೀತಾಮೃತ

—ವಿಶ್ವಧರ್ಮಿ

ಧರ್ಮಕ್ಷೇತ್ರೇ ಕುರುಕ್ಷೇತ್ರೆ ಸಮವೇತಾ ಯುಯುತ್ಸವಃ
ಮಾಮತಾಃ ಪಾಂಡವಶ್ಚೈವ ಕಿಂ ಕುರ್ವತ ಸಂಜಯ ॥

ಯುದ್ಧವನ್ನು ಮಾಡಬೇಕೆಂದು ಸೇರಿರುವ ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನಮ್ಮವರು ಮತ್ತು ಪಾಂಡವರು ಏನನ್ನು ಮಾಡಿದರು ಸಂಜಯಾ ?

ದೇಶ ಕಾಲಗಳಿಗೆ ಸೀಮಿತವಾಗಿ ಘಟನೆಗಳು ನಡೆಯುವುದು ಬಹು ಸ್ವಾಭಾವಿಕ ಅಂಥ ಘಟನೆಗಳನ್ನು ದೇಶಕಾಲಾತೀತವಾಗಿ ನೋಡಿದರೆ ಅಥವಾ ತಾತ್ತ್ವೀಕರಣ (philosophise) ಮಾಡಿ ನೋಡಿದರೆ ಜೀವನ ಸಿದ್ಧಾಂತವು ಸ್ಫುಟವಾಗದಿರದು. ಅದು ಕುರುಕ್ಷೇತ್ರ, ಧರ್ಮಕ್ಷೇತ್ರವಾಗಬೇಕಾದುದು ಕರ್ಮಕ್ಷೇತ್ರವಾಗಲು, ರಣರಂಗವಾಗಲು ತವಕಿಸುತ್ತದೆ. ಅಲ್ಲುಂಟು ಎರಡು ಬಣ; ಪಾಂಡವರು ಮತ್ತು ಕೌರವರು. ಪಾಂಡವರ ಸೂತ್ರಧಾರ ಶ್ರೀ ಕೃಷ್ಣ; ಕೌರವರಿಗುಂಟು ಅತುಳಬಲ. ಈ ಎಲ್ಲ ಚಟುವಟಿಕೆಗಳನ್ನು ನೋಡುವ ಸಾಮರ್ಥ್ಯವುಳ್ಳ ಸಂಜಯನೋರ್ವನುಂಟು.

ಈ ಬಗೆಯ ಯುದ್ಧ ಅಂದಷ್ಟೇ ನಡೆಯಿತೆ? ಇಂದಿಲ್ಲವೇ ? ನಿಮ್ಮಲ್ಲಿ-ನಮ್ಮಲ್ಲಿ ಯಾರಲ್ಲಿ ಇಲ್ಲ ? ವ್ಯಕ್ತಿಗತವಾಗಿ ನೋಡಿದಾಗ ಶರೀರವೇ ಕುರುಕ್ಷೇತ್ರ ಇದು ಭಕ್ತಿ ಜ್ಞಾನ ಚಿಂತನ ಮಂಥನ ಮುಂತಾದ ದೈವೀ ಚಟುವಟಿಕೆ ನಡೆಯಬಲ್ಲ ಧರ್ಮಕ್ಷೇತ್ರವೂ ಆಗಬಲ್ಲುದು; ನಿಂದೆ–ದ್ವೇಷ, ಕಪಟತನ, ಅರಿಷಡ್ವರ್ಗದಾಸ್ಯ ಮುಂತಾದ ಹೀನ ಚಟುವಟಿಕೆ ನಡೆಯಬಲ್ಲ ಕರ್ಮಕ್ಷೇತ್ರವೂ ಆಗಲು ಸಾಧ್ಯ; ಇಂಥ ಶರೀರವೆಂಬ ಕುರುಕ್ಷೇತ್ರದಲ್ಲುಂಟು ಸದ್ಗುಣವೆಂಬ ಪಾಂಡವ ಸಮೂಹ, ದುರ್ಗುಣವೆಂಬ ಕೌರವ ಸಮುದಾಯ. ಸದುಗುಣದ ಸಾರಥ್ಯ ವಿವೇಕವೆಂಬ ಶ್ರೀ ಕೃಷ್ಣನ ಶೈಲಿ, ದುರ್ಗುಣಗಣಕ್ಕೊ ಅತುಳ ಬಲವಿದೆ-ಅರಿಷಡ್ವರ್ಗ, ಅಷ್ಟಮದ ಸಪ್ತವ್ಯಸನ ಇತ್ಯಾದಿಗಳದು. ದುರ್ಗುಣಗಣವನ್ನು ನನ್ನದೆನ್ನುವ ಮೋಹಾಂಧ ಧೃತರಾಷ್ಟನುಂಟು, ಅದೇ ಅಹಂಕಾರ, ಈ ಎಲ್ಲ ಚಟುವಟಿಕೆಗಳನ್ನು ನೋಡುವ, ನ್ಯಾಯದ ತಕ್ಕಡಿ ಹಿಡಿದು ತೂಗುವ ಸರ್ವಜ್ಞನೊಬ್ಬನಿದ್ದಾನೆ–ಅವನೇ ಮಹಾನ್ಯಾಯಾಧೀಶ ಪರಮಾತ್ಮ!

ಇದೇ ತತ್ತ್ವವನ್ನು ತಾತ್ತ್ವೀಕರಿಸಿ, ಲೋಕವ್ಯಾಪಕ ಮಾಡಿದರೆ ಹೇಗೆ ? ಈ ಪ್ರಪಂಚವೇ ಕುರುಕ್ಷೇತ್ರ, ಇಲ್ಲಿ ಒಳಿತನ್ನು ಮಾಡಿ ಸ್ವರ್ಗವನ್ನೂ ಸ್ಥಾಪಿಸಬಹುದು; ಕೆಟ್ಟುದನ್ನು ಮಾಡಿ ನರಕವನ್ನು ನಿರ್ಮಿಸಬಹುದು. ಇಲ್ಲುಂಟು ಎರಡು ಬಣ ಸಜ್ಜನರು ದುರ್ಜನರು, ಮಹಾತ್ಮರು-ನಿಂದಕರು. ತ್ಯಾಗಿಗಳು-ಸ್ವಾರ್ಥಿಗಳು; ಸತ್ಯಾನ್ವೇಷಿಗಳು-ಸಂಪ್ರದಾಯ ಪ್ರಿಯರು; ಸಂಪ್ರದಾಯ ಪ್ರಿಯರಿಗೆ ಸಮಯ ಸಾಧಕರಿಗೆ ಇರಬಹುದು (ತಾತ್ಕಾಲಿಕ) ಅತುಳ ಬಲ, ಮಹಾತ್ಮರು, ಸಜ್ಜನರು, ತ್ಯಾಗಿಗಳಿಗೆ ಕೇವಲ ಧರ್ಮ ಶಾಸ್ತ್ರದ, ಶರಣರ ಸಾರಥ್ಯ, ರೂಢಿ-ಸಂಪ್ರದಾಯವನ್ನೇ 'ನನ್ನದು' ಎನ್ನುವ ಧರ್ಮಾಂಧ ಧೃತರಾಷ್ಟ್ರರಿಗೇನೂ ಕೊರತೆ ಇಲ್ಲ. ಆದರೆ ಇಲ್ಲುಂಟು 'ಮಹಾದೇವಶೆಟ್ಟಿ' ಎಂಬ ನ್ಯಾಯಾಧೀಶನ ಸರ್ವಜ್ಞನ ನ್ಯಾಯದ ತ್ರಾಸು. ಅದು ನಿರ್ಲಿಪ್ತವಾಗಿ ತನ್ನ ಕಾರ್ಯವನ್ನು ತಾನು ಮಾಡದಿರದು.

ಇದನ್ನರಿತ ಮಾನವ ಬಾಳನ್ನು ಕರ್ಮಕ್ಷೇತ್ರವನ್ನಾಗಿ ಮಾಡಿಕೊಳ್ಳದೆ ಧರ್ಮ ಕ್ಷೇತ್ರವನ್ನಾಗಿ 'ಕುರು' (ನೋವಿನ ಬೊಕ್ಕೆ) ಕ್ಷೇತ್ರವನ್ನು ಮಾಡದೆ ಗುರು (ಅರಿವಿನ) ಕ್ಷೇತ್ರವನ್ನಾಗಿ ಮಾಡಿಕೊಂಡಾಗಲೇ ಇದಕ್ಕೆ ಸಾರ್ಥಕ್ಯ !

(೨೪ನೇ ಪುಟದಿಂದ)

ತರಬೇತಿ ವೀರಶೈವರ ತರಬೇತಿಯಲ್ಲವೆ ? ಜಾತಿರಹಿತ ಸಮಾಜರಚನೆಯೇ ನಮ್ಮ ಧರ್ಮದ ಗುರಿಯಾಗಿರುವಾಗ, ಈಗ ಇಲ್ಲಿ ಕೆಲವು ಒಂದೇ ಜಾತಿಯವರಿಗೆ ಮಾತ್ರ ಪ್ರವೇಶ ಮತ್ತು ತರಬೇತಿ ಸಿಗುತ್ತಿಲ್ಲವೆ ? ಹೀಗಿರುವಾಗ ಹೊಸದಾಗಿ ರೂಪಿಸಿಕೊಂಡಿರುವ ಮತ್ತು ಸಮತಾವಾದದ ಸಮಾಜರಚನೆಯಲ್ಲಿ ಆಸಕ್ತವಾಗಿರುವ ಈ 'ಬಸವ ಮಂಟಪ'ದ ಪ್ರಭುದೇವ ದಿವ್ಯಜ್ಞಾನ ಮಹಾವಿದ್ಯಾಲಯಕ್ಕೆ ಪ್ರೋತ್ಸಾಹ ನೀಡುವುದು ಉಚಿತವಲ್ಲವೆ ? ಅಷ್ಟೆ ಅಲ್ಲ, ಇಂತಹ ತರಬೇತಿಯನ್ನು ನೀಡುವ ವಿದ್ಯಾಲಯಗಳ ಬೇರೆಡೆಯೂ ಅದೇಕೆ ಪ್ರಾರಂಭವಾಗಬಾರದು ? ಈ ಬಗ್ಗೆ ಮಠಾಧಿಕಾರಿಗಳು ಅದೇಕೆ ತಮ್ಮ ಚಿತ್ತವನ್ನು ಹರಿಸಬಾರದು ? ಎಲ್ಲಾ ಮಠಾಧಿಕಾರಿಗಳಿಗೂ ಕಡ್ಡಾಯವಾಗಿ ವೈಜ್ಞಾನಿಕ ಹಿನ್ನೆಲೆಯಲ್ಲಿ ಇಂತಹ ಧಾರ್ಮಿಕ ತತ್ತ್ವಗಳ ತರಬೇತಿ ಏಕೆ ನೀಡಬಾರದು ಎಂದು ನನ್ನ ಪ್ರಾಮಾಣಿಕ ಅನಿಸಿಕೆ.

ಅರಿದಡೆ ಶರಣ ; ಮರೆದಡೆ ಮಾನವ.

ಬಸವ ಧರ್ಮದಲ್ಲಿ ದೇವರ ಕಲ್ಪನೆ

—ಜಗದ್ಗುರು ಮಾತೆ ಮಹಾದೇವಿ

ಧರ್ಮಗಳಲ್ಲಿ ದೇವರ ಕಲ್ಪನೆ ಮೂಲಭೂತವಾದುದು. ಆದಿ ಮಾನವನಿಂದ ಹಿಡಿದು ಆಧುನಿಕ ಮಾನವನವರೆಗೆ ಹಾಸುಹೊಕ್ಕಾಗಿ ಬಂದ ಈ ಕಲ್ಪನೆ, ಧರ್ಮದ ಜೀವಾಳ. ಧರ್ಮಗಳಲ್ಲಿ ಎರಡು ವಿಧ, ಸೇಶ್ವರವಾದಿ ಮತ್ತು ನಿರೀಶ್ವರವಾದಿ. ಸೃಷ್ಟಿಗೆ ಒಬ್ಬ ಕರ್ತನನ್ನು ಒಪ್ಪುವ ಲಿಂಗಾಯತ, ವೈದಿಕ, ಸಿಖ್, ಕ್ರಿಶ್ಚಿಯನ್ ಇತ್ಯಾದಿ ಧರ್ಮಗಳು ಸೇಶ್ವರವಾದಿ ಧರ್ಮಗಳಾದರೆ ; ಜಗತ್ತು ಅನಾದಿಯೆಂದು, ಇದಕ್ಕೆ ಕರ್ತನಿಲ್ಲವೆಂದು ಹೇಳುವ ಜೈನ, ಬೌದ್ಧ ಧರ್ಮಗಳು ನಿರೀಶ್ವರವಾದಿ ಧರ್ಮಗಳು. ರೂಢಿಯಲ್ಲಿ ಇವುಗಳನ್ನು ನಾಸ್ತಿಕ ಧರ್ಮಗಳೆಂದು ಮತ್ತು ಸೇಶ್ವರವಾದಿ ಧರ್ಮಗಳನ್ನು ಆಸ್ತಿಕ ಧರ್ಮಗಳೆಂದು ಕರೆದರೂ, ಈ ಬಗೆಯ ಕರೆಯುವಿಕೆ ಸೂಕ್ತವಾಗದು. ಏಕೆಂದರೆ, ಜೈನ, ಬೌದ್ಧ ಧರ್ಮಗಳು ಸೃಷ್ಟಿಕರ್ತನನ್ನು ಒಪ್ಪದಿದ್ದರೂ, ಆತ್ಮವನ್ನು, ಮುಕ್ತಿಯನ್ನು ಮನ್ನಿಸುತ್ತವೆ. ನಾಸ್ತಿಕತೆಯು ಕರ್ತ, ಆತ್ಮ, ಮುಕ್ತಿ ಈ ಯಾವುವನ್ನೂ ಒಪ್ಪುವುದಿಲ್ಲ. ಆದ್ದರಿಂದ, ಕೇವಲ ಜಡವೊಂದನ್ನೇ ನಂಬದೆ ಚೈತನ್ಯದ ಆಧಿಕ್ಯವನ್ನು ಆತ್ಮ ಅಥವಾ ಪರಮಾತ್ಮನ ರೂಪದಲ್ಲಿ ಒಪ್ಪುವ ಧರ್ಮಗಳನ್ನು ಆಸ್ತಿಕ ಧರ್ಮಗಳು ಎಂದೇ ಭಾವಿಸೋಣ. ಆದರೆ ಪರಮಾತ್ಮನನ್ನು ಆದಿಕಾರಣವಾಗಿ ಒಪ್ಪುವ ಧರ್ಮಗಳನ್ನು ಸೇಶ್ವರವಾದಿ ಧರ್ಮಗಳೆಂದು, ಮತ್ತು ಕೇವಲ ಆತ್ಮರನ್ನು ಒಪ್ಪುವ ಧರ್ಮಗಳನ್ನು ನಿರೀಶ್ವರವಾದಿ ಧರ್ಮಗಳೆಂದು ತಿಳಿಯೋಣ.

ಸೇಶ್ವರವಾದಿ ಧರ್ಮಗಳ ಮೂಲಭೂತ ತತ್ತ್ವ 'ದೇವರು.' ಈ ತತ್ತ್ವದ ಮೇಲೆಯೇ ಆ ಧರ್ಮದ ದೃಷ್ಟಿಕೋನದಿಂದ ಹಿಡಿದು, ನಡೆ, ನುಡಿ, ಸಮಾಜಶಾಸ್ತ್ರ ಅರ್ಥಶಾಸ್ತ್ರ ಎಲ್ಲವೂ ನಿರ್ಣಯಿಸಲ್ಪಡುವವು. ಬಸವ ಧರ್ಮವು ಆಸ್ತಿಕ ಧರ್ಮ, ಸೇಶ್ವರವಾದಿ ಧರ್ಮ. 'ಭಕ್ತಿಯೇ ಬದುಕಿನ ಜೀವಾಳವಾದರೆ, ಪರಮಾತ್ಮನೊಡನೆ ಮಿಲನವೇ ಬದುಕಿನ ಆತ್ಯಂತಿಕ ಗುರಿ' ಎಂದು ಘೋಷಿಸುವ ಧರ್ಮವಿದು. ಇಂತಹ ಧರ್ಮದಲ್ಲಿ ಬರುವ ದೇವರ ಕಲ್ಪನೆ ಏನು ಎಂಬುದನ್ನು ವಿವೇಚಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

ಸ್ವಾಮಿ ನೀನು, ಶಾಶ್ವತ ನೀನು
ಎತ್ತಿದೆ ಬಿರುದು ಜಗವೆಲ್ಲವರಿಯಲು
ಮಹಾದೇವ, ಮಹಾದೇವ ;

ಇಲ್ಲಿಂದ ಮುಂದೆ ಶಬ್ದವಿಲ್ಲ
ಪಶುಪತಿ ಜಗಕ್ಕೆ ಏಕೋ ದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಕೂಡಲಸಂಗಮದೇವ! [ಬ. ಷ. ವ. 526]

ಎಂಬ ಈ ವಚನದಲ್ಲಿ ಬಸವಣ್ಣನವರು ಜಗತ್ತಿಗೊಬ್ಬ ಕರ್ತನನ್ನು, ಶಾಶ್ವತನಾದ ಸ್ವಾಮಿಯನ್ನು ಒಪ್ಪುತ್ತಾರೆ. ಶರಣಧರ್ಮಾನುಯಾಯಿಯಾದ ಸರ್ವಜ್ಞನು ಸಹ ಈ ಜಗತ್ತು ಶಿವನ ಸೃಷ್ಟಿಯೆಂದು, ಈ ಕ್ರಿಯೆ ಶಿವಲೀಲೆ ಎಂದು ವರ್ಣಿಸುತ್ತಾನೆ.

ಕಳ್ಳಿಯೊಳು ಹಾಲು, ಮುಳುಗಳ್ಳಿಯೊಳು ಹೆಜ್ಜೇನು
ಎಳ್ಳಿನೊಳಗೆಣ್ಣೆ ಹನಿದಿರಲು, ಶಿವಲೀಲೆ
ಸುಳ್ಳೆನ್ನಬಹುದೆ ಸರ್ವಜ್ಞ।

ಮರದೊಳಗೆ ಮಂದಾಗ್ನಿಯನ್ನು, ನೊರೆ ಹಾಲೊಳಗೆ ಕಂಪುಳ್ಳ ತುಪ್ಪವನ್ನು, ಶರೀರದೊಳಗೆ ಆತ್ಮವನ್ನು ಗುಪ್ತವಾಗಿ, ಅವ್ಯಕ್ತವಾಗಿ ಹುದುಗಿಸಿರುವ ಲೀಲೆಗೆ ಬೆರಗಾಗಿ ದೇವರ ದಾಸಿಮಯ್ಯನವರು ದೇವನ ಅಸ್ತಿತ್ವವನ್ನು ಮನ್ನಿಸುತ್ತಾರೆ.

ಇಂತಹ ಪರಮಾತ್ಮನನ್ನು ವಚನಶಾಸ್ತ್ರದಲ್ಲಿ ಪರಶಿವ, ಪರಬ್ರಹ್ಮ ಎಂದು ಕರೆಯುತ್ತಾರೆ. ವಚನಶಾಸ್ತ್ರದಲ್ಲಿ ಶಿವ ಶಬ್ದವನ್ನು ಮೂರು ಪ್ರಕಾರವಾಗಿ ಬಳಸಿ ಕೊಳ್ಳುವುದನ್ನು ಗಮನಿಸಬಹುದು. 1. ಪೌರಾಣಿಕ ಮೂರ್ತಿ. 2. ಐತಿಹಾಸಿಕ ವ್ಯಕ್ತಿ. 3. ತಾತ್ವಿಕ ಶಕ್ತಿ. ಈ ಮೂರು ತತ್ತ್ವಗಳನ್ನು ವಿಶ್ಲೇಷಿಸಿರುವುದನ್ನು ಕಾಣುತ್ತೇವೆ. ಐತಿಹಾಸಿಕ ವ್ಯಕ್ತಿತ್ವವಿಲ್ಲದೆ ಕೇವಲ ಪೌರಾಣಿಕ ಉಕ್ತಿಗಳಲ್ಲಿ ಮಾತ್ರ ಬರುವ ಮೂರ್ತಿಯನ್ನು ಶರಣರು ಒಪ್ಪುವುದಿಲ್ಲ, ಮನ್ನಿಸುವುದಿಲ್ಲ, ಪೂಜಿಸುವುದಿಲ್ಲ.

ಕೈಲಾಸವೆಂಬುದೊಂದು ಹಾಳು ಬೆಟ್ಟ ಕಾಣಿರೋ,
ಅಲ್ಲಿರುವ ಶಿವನೊಬ್ಬ ಹೆಡ್ಡ ಕಾಣಿರೋ,
ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು;

ಎಂದು ಹೇಳುವ ಸಿದ್ಧರಾಮೇಶ್ವರರ ವಚನದಲ್ಲಿ ಪೌರಾಣಿಕ, ಅನೈತಿಹಾಸಿಕ ವ್ಯಕ್ತಿಯನ್ನು ಅಲ್ಲಗಳೆಯುವುದನ್ನು ಕಾಣಬಹುದು.

ಶಿವನನ್ನು ಐತಿಹಾಸಿಕ ವ್ಯಕ್ತಿಯನ್ನಾಗಿ ಕಂಡು, ಯೋಗಿರಾಜನಾದ ಶಿವನು ಶೈವ ಧರ್ಮದ ಆದಿ ಗುರು ಎಂದು ನಂಬುವುದನ್ನು ಬಸವಣ್ಣನವರ ವಚನದಲ್ಲಿ ಕಾಣುತ್ತೇವೆ. "ನಿಮ್ಮ ಪರಂಪರೆ (Tradition) ಯಾವುದು?" ಎಂದು ಯಾರಾದರೂ ಪ್ರಶ್ನಿಸಿರುವ ಸಂಭವವುಂಟು. ಆಗ ಬಸವಣ್ಣನವರು :

ಹರನು ಮೂಲಿಗನಾಗಿ, ಪುರಾತರೊಳಗಾಗಿ
ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯ (ಬ. ಷ. ವ. 347)

ಎಂಬು ನುಡಿದು, ತಮಗೆ ಸ್ಫೂರ್ತಿ ಸಿಕ್ಕಿದ್ದು ಹರಪರಂಪರೆಯಿಂದ ಎಂದು ಹೇಳುವರು. ಪಂಚವಿಂಶತಿ ಲೀಲೆಗಳನ್ನು ಮಾಡಿದವರು ಐತಿಹಾಸಿಕ ವ್ಯಕ್ತಿಗಳು, ಗಣೇಶ್ವರರು ಎಂಬ ಭಾವ ಪ್ರಭುದೇವರ ವಚನದಲ್ಲಿ ಸ್ಫುಟವಾಗಿ ತಿಳಿದು ಬರುವುದು.

ರುದ್ರನೆಂಬಾತನೊಬ್ಬ ಗಣೇಶ್ವರನು, ಭದ್ರನೆಂಬಾತನೊಬ್ಬ ಗಣೇಶ್ವರನು
ಶಂಕರನೆಂಬಾತನೊಬ್ಬ ಗಣೇಶ್ವರನು..........
ಇವರೆಲ್ಲರು ನಮ್ಮ ಗುಹೇಶ್ವರ ಲಿಂಗದಲ್ಲಿ ಅಡಗಿಪ್ಪರು.

ರುಧ್ರ, ಭದ್ರ, ಶಶಿಧರ, ಶಂಕರ ಮುಂತಾದ ಮಹಾ ಪುರುಷರು ಕೇವಲ ಪೌರಾಣಿಕ ಕಲ್ಪನೆಯೂ ಅಲ್ಲ, ಅಥವಾ ತಾತ್ತ್ವಿಕ ಪರವಸ್ತುವೂ (Absolute Reality) ಅಲ್ಲ; ಅವರು ವಿಶಿಷ್ಟಕಾಲದಲ್ಲಿ ಹುಟ್ಟಿ, ಸಾಧನೆಮಾಡಿದ ಮಹಾನ್ ವ್ಯಕ್ತಿಗಳು ಎಂಬ ಭಾವ ಮೇಲ್ಕಂಡ ವಚನದಲ್ಲಿ ಬಿಂಬಿತವಾಗಿದೆ. ಆದ್ದರಿಂದ ತಾತ್ತ್ವಿಕ ದೃಷ್ಟಿಯಿಂದ ಅಭ್ಯಸಿಸಿದಾಗ ಐತಿಹಾಸಿಕ ಶಿವನನ್ನು ಶರಣರು ಮನ್ನಿಸಿ, ಅಸ್ತಿತ್ವವನ್ನು ಒಪ್ಪಿ ಗೌರವವನ್ನು ನೀಡಿದ್ದರೂ ಅವನನ್ನು ಪೂಜಿಸುವುದನ್ನು ಕಾಣುವುದಿಲ್ಲ. ಐತಿಹಾಸಿಕ ವ್ಯಕ್ತಿಯನ್ನು ಶಿವನೆಂದು, ನಿರಾಕಾರ ನಿರ್ಗುಣನಾದ ಪರಂಜ್ಯೋತಿ ರೂಪಿ ಚೈತನ್ಯವನ್ನು ಪರಶಿವನೆಂದು ಸಂಬೋಧಿಸುವುದನ್ನು ಕಾಣುತ್ತೇವೆ. ಕೆಲವು ಸಂದರ್ಭದಲ್ಲಿ ಹರ, ಮಹಾಹರ ಎಂದು ಸಂಬೋಧಿಸಿರುವುದನ್ನೂ ಕಾಣುತ್ತೇವೆ.

ಹರಶಕ್ತಿಗಳಲ್ಲಿ ಹುಟ್ಟಿದ ಬೆನಕ ಭೈರವ ಷಣ್ಮುಖರ
ಮಹಾಹರನ ಮಕ್ಕಳೆಂಬ ಪಾತಕಿ ನೀ ಕೇಳೊ
ಹರಿ ಹರನು ಒಂದೆಂಬ ಶಿವದ್ರೋಹಿ ನೀ ಕೇಳೊ
ಹರಿ ಸಹಿತಾರರಿಂದತ್ತ ಅಜಾತನಅಚರಿತ್ರ ಅಪ್ರತಿಮ
ಕೂಡಲಸಂಗಮ ದೇವನೊಬ್ಬನೆ ಕಾಣಭೋ! (ಬ. ಷ. ವ. ೧೧೮೯)

ಐತಿಹಾಸಿಕ ಹಠ ಮತ್ತು ಶಕ್ತಿಗಳ ಮಕ್ಕಳಾದ ಬೆನಕ, ಭೈರವ, ಷಣ್ಮುಖರು ಮಹಾಹರನ ಅಂದರೆ ಸೃಷ್ಟಿಕರ್ತನಾದ, ಮಹಾಚೈತನ್ಯದ (Absolute Reality) ಮಕ್ಕಳಲ್ಲ, ಐತಿಹಾಸಿಕವಾದ ಶರೀರಧಾರಿಗಳು. ಶರಣರ ಪ್ರಕಾರ ಹರ ಎಂಬ ಪದ, ಮಹಾಹರ, ಪರಶಿವ ಎಂಬ ಪದಗಳು ಸಂಕೇತಿಸುವುದು ಹುಟ್ಟು ಇಲ್ಲದ ಅಜಾತನನ್ನು, ಐತಿಹಾಸಿಕ ಚರಿತ್ರೆ ಇಲ್ಲದ ಅಚರಿತ್ರನನ್ನು, ಉಪಮಾತೀತ ಪರಮಾತ್ಮನನ್ನು! ಇಂತಹ ತಾತ್ತ್ವಿಕ ಪರವಸ್ತುವನ್ನು ಶರಣರು ನಂಬಿ, ಮನ್ನಿಸಿ, ಪೂಜಿಸುತ್ತಾರೆ. ಹಲವಾರು ಜನರು ತಪ್ಪಾಗಿ ತಿಳಿದಂತೆ, ಬಸವ ಧರ್ಮವು ಪೂಜಿಸಲು

ಹೇಳುವುದು ಪೌರಾಣಿಕ ತ್ರಿಮೂರ್ತಿಗಳಲ್ಲಿ ಒಬ್ಬನಾದ, ತಮೋಗುಣ ಪ್ರಧಾನ ರುದ್ರನನ್ನಲ್ಲ ; ಸತ್ – ಚಿತ್ – ಆನಂದ–ನಿತ್ಯ–ಪರಿಪೂರ್ಣನಾದ ಮಹಾವಿಭುವಾದ, ಅನಾದಿ ಪರಶಿವನನ್ನು.

ಶರಣರು ಕೊಡುವ ತ್ರಿಮೂರ್ತಿಗಳ ಕಲ್ಪನೆಯೂ ಬಹು ವಿಶಿಷ್ಟವಾದುದು. ಬ್ರಹ್ಮ, ವಿಷ್ಣು, ರುದ್ರರು ಬೇರೆ ಬೇರೆ ವ್ಯಕ್ತಿಗಳಲ್ಲ ; ಆತ್ಯಂತಿಕ ದೈವೀಚೈತನ್ಯದ ಮೂರು ಶಕ್ತಿಗಳು, ಕರ್ತವ್ಯಮುಖವಾದಾಗ ಕೊಡಬಹುದಾದ ಹೆಸರುಗಳು. ಉದಾಹರಣೆಗಾಗಿ ಒಬ್ಬ ವ್ಯಕ್ತಿಯನ್ನು ತೆಗೆದುಕೊಳ್ಳೋಣ. ಅವನು ಗುರುಗಳ ಸನ್ನಿಧಿಗೆ ಬಂದಾಗ ಶಿಷ್ಯನು, ಕೆಲಸಕ್ಕೆ ಹೋದಾಗ ಸರ್ಕಾರಿ ನೌಕರನು, ಮನೆಗೆ ಹೋದಾಗ ಪತ್ನಿಗೆ ಪತಿ, ತಾಯಿಗೆ ಮಗ, ಮಕ್ಕಳಿಗೆ ತಂದೆ, ಸೋದರರಿಗೆ ಭ್ರಾತೃ. ಹೀಗೆ ಬೇರೆ ಬೇರೆ ಕರ್ತವ್ಯಮುಖನಾದಾಗ ಒಬ್ಬನೇ ವ್ಯಕ್ತಿಗೆ ಬೇರೆ ಬೇರೆ ಹೆಸರುಗಳು ಬರುವಂತೆ. ಪರಮಾತ್ಮನು ಸೃಷ್ಟಿಕರ್ತನಾಗುವಾಗ ಬ್ರಹ್ಮ ಎಂಬ ಅಭಿದಾನ ಹೊಂದಿದರೆ, ರಕ್ಷಿಸುವಾಗ ವಿಷ್ಣು ಎಂಬ ಅಭಿದಾನ ತಾಳುವನು. ಸೃಷ್ಟಿಯನ್ನು ಲಯಿಸುವಾಗ ರುದ್ರ ಎನ್ನಿಸಿಕೊಳ್ಳುವನು. ಹೀಗೆ ವಿವಿಧ ಕಾರ್ಯಮುಖನಾದ ಪರಮಾತ್ಮನಿಗೆ ಹೆಸರುಗಳು ಭಿನ್ನವಾಗಿ ಬರುವವು. ದೇವನಿಗೆ ಯಾವುದೇ ಒಂದು ವಿಶಿಷ್ಟವಾದ ಹೆಸರಿಲ್ಲದ ಕಾರಣ ಅವನನ್ನು ಬ್ರಹ್ಮ, ವಿಷ್ಣು, ರುದ್ರ, ಶಿವ ಎಂಬ ಯಾವುದೇ ಹೆಸರಿನಿಂದ ಕರೆದರೂ ತಪ್ಪಿಲ್ಲ. ಆದರೆ ನಾಲ್ಕು ತಲೆಗಳ ವಿಶಿಷ್ಟ ರೂಪದ ವ್ಯಕ್ತಿಯನ್ನೇ ಬ್ರಹ್ಮನೆಂದು, ಸೃಷ್ಟಿ ಕರ್ತನೆಂದು ; ಗಧಾ, ಶಂಖ ಚಕ್ರಧಾರಿಯಾದ ಕ್ಷೀರಶಯನನನ್ನೇ ವಿಷ್ಣುವೆಂದು, ಸ್ಥಿತಿ ಪಾಲಕನೆಂದು ; ಗಂಗೆ ಗೌರೀವಲ್ಲಭ, ನಾಗಭೂಷಣನನ್ನೇ ರುದ್ರನೆಂದು – ಲಯಕರ್ತನೆಂದು ; ಹೇಳುವುದನ್ನು ಶರಣರು ಒಪ್ಪುವುದಿಲ್ಲ. ಇದರಿಂದ ನಾವು ಗ್ರಹಿಸಬಹುದಾದ ಅಂಶವೇದರೆ ಶರಣರು ಪೂಜಿಸುವುದು ಆದಿ ಕಾರಣನಾದ, ಜಗದಂತರ್ಯಾಮಿಯಾದ ಪರಶಿವನನ್ನು ಮಾತ್ರ ಎಂಬುದನ್ನು. ಇಂತಹ ಪರಮಾತ್ಮನ ಸ್ವರೂಪವೇನು ? ತಾವು ಕಂಡುಕೊಂಡ ಸ್ವರೂಪವನ್ನು ಶರಣರು ನೂರಾರು ವಚನಗಳಲ್ಲಿ ಚಿತ್ರಿಸಿದ್ದಾರೆ.

ಎತ್ತೆತ್ತ ನೋಡಿದೊಡತ್ತತ್ತ ನೀನೇ ದೇವಾ
ಸಕಲ ವಿಸ್ತಾರದ ರೂಹು ನೀನೇ ದೇವಾ
'ವಿಶ್ವತಸ್' ಚಕ್ಷು' ನೀನೇ ದೇವಾ
'ವಿಶ್ವತೋಮುಖ' ನೀನೇ ದೇವಾ
'ವಿಶ್ವತೋಬಾಹು' ನೀನೇ ದೇವಾ
'ವಿಶ್ವತಃಪಾದ' ನೀನೇ ದೇವಾ ಕೂಡಲಸಂಗಮದೇವಾ.

(ಬ. ಷ. ವ. 352)

ಪರಮಾತ್ಮನು ಸರ್ವವ್ಯಾಪಕನು (omnipresent) ; ಈ ಜಗತ್ತಿನಲ್ಲಿ ಅಣುರೇಣು ತೃಣಕೋಟಿಯಲ್ಲೆಲ್ಲ ಹಾಲಿನಲ್ಲಿ ತುಪ್ಪವಿರುವಂತೆ, ಓತಪ್ರೋತವಾಗಿ ಬೆರೆತಿರುವವನು. ಅನಂತ ಕಣ್ಣುಗಳನ್ನುಳ್ಳ ಸರ್ವ ದ್ರಷ್ಟಾರನು (omniscient), ಜಗತ್ತನ್ನು ಯಂತ್ರದಂತೆ ಆಡಿಸುವ ಯಂತ್ರವಾಹಕನು, ಸರ್ವಶಕ್ತನು (omnipotent), ಜಗದಲ್ಲೆಲ್ಲ ತನ್ನ ಪಾದಗಳನ್ನು ಹರಡಿಸಿಕೊಂಡವನು ಅರ್ಥಾತ್ ಇರುವವನು (Immanent).

ಸಾವು-ಕೇಡು, ಆದಿ-ಅಂತ್ಯಗಳಿಲ್ಲದವನು. ಆದ್ದರಿಂದ ಹುಟ್ಟು-ಸಾವು ಇಲ್ಲದ ಅ-ಭವನನ್ನು ಮಾತ್ರವೇ ಪರಮಾತ್ಮನೆಂದು ಒಪ್ಪುವ ಶರಣರು, ಹುಟ್ಟಿ-ಅಳಿದ ವ್ಯಕ್ತಿಗಳನ್ನು ದೈವೀಕರಿಸಿ ದೇವರು ಎಂದು ಪೂಜಿಸುವ ಧಾರ್ಮಿಕರನ್ನು ವಿಡಂಬಿಸಿ ಮಾತನಾಡುವರು. ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಹೊರಗಾದ ಕೂಡಲಸಂಗಮ ದೇವರಿಗೆ ಮಾತಾಪಿತರುಳ್ಳಡೆ ಹೇಳಿರೋ ? (ಬ. ಷ. ವ. 544) ಅಮೂಲ್ಯನು, ಅಪ್ರಮಾಣನು, ಅಯೋನಿಜನು ಕೂಡಲಸಂಗಮದೇವರು (ಬ. ಷ. ವ. 1237), ಎಂದು ಸ್ಪಷ್ಟವಾಗಿ ದೇವರ ಸ್ವರೂಪವನ್ನು ಹೇಳುವರು. ತಂದೆ-ತಾಯಿಯುಳ್ಳವರು ದೇವರಲ್ಲ, ತಾನು ಜಗತ್ತಿಗೆಲ್ಲ ಆದಿ ಕಾರಣನಾಗಿ ತನಗೊಂದು ಕಾರಣವಿಲ್ಲದೆ ಇರುವ (Uncaused cause of this universe) ಶುದ್ಧ ಚೇತನನು ಮಾತ್ರವೇ ದೇವರು ಎಂಬುದನ್ನು ಪ್ರಭುದೇವರು ಹೀಗೆ ಹೇಳುತ್ತಾರೆ :

ತಾಯಿ ತಂದೆಯಿಲ್ಲದ ಕಂದಾ
ನಿನ್ನಿಂದ ನೀನೇ ಹುಟ್ಟಿ ಬೆಳೆದೆಯಲ್ಲಾ....
ನಿನ್ನ ಚಾರಿತ್ರ ನಿನಗೆ ಸಹಜ ಗುಹೇಶ್ವರ ! (ಅ. ವ. ೩೪೮)

ಪರಮಾತ್ಮನು ಆಕಾರವೊಂದಿಲ್ಲದ ನಿರಾಕಾರನು, ನಿರ್ಗುಣನು, ನಿತ್ಯ, ನಿರಂಜನನು, ನಿರ್ವಿಕಾರಿಯು. ಜಗತ್ತು ರೂಹು ತಳೆವುದಕ್ಕೆ ಮುನ್ನವೇ ಇದ್ದು, ಜಗದಲ್ಲಿ ಲೀಲೆಯಾಡಿ, ಇದು ಲಯವಾದ ಬಳಿಕವೂ ನಿರ್ವಿಕಾರಿಯಾಗಿ, ಪೂರ್ಣನಾಗಿ ಅವನು ಇರುವನು. ಇಂತಹ ಪರಮಾತ್ಮನು ಎಡೆ-ಕಡೆ ಇಲ್ಲದವನು, ಕುಲಸೀಮೆ ಇಲ್ಲದವನು, ಭಯ-ಭವ ಇಲ್ಲದವನು. ಈ ಜಗತ್ತಿಗೆ ಅಭಿನ್ನ ನಿಮಿತ್ತೋಪಾದಾನ ಕಾರಣವಾಗಿರುವನು. ಜೇಡರ ಹುಳುವು ತನ್ನ ಬಾಯೊಳಗಣ ಜೊಲ್ಲು ರಸವನ್ನು ಉಪಾದಾನ ಕಾರಣವಾಗಿ ಮಾಡಿ, ಬಲೆಯನ್ನು ನೇಯ್ದು ತಾನು ನಿಮಿತ್ತ ಕಾರಣವಾಗಿ ಇರುವಂತೆ, ಪರಶಿವನು ತನ್ನಂತರ್ಗತವಾಗಿರುವ ಚಿಚ್ಛಕ್ತಿಯನ್ನು ಈ ಜಗತ್ತಿಗೆ ಉಪಾದಾನವಾಗಿ ಮಾಡಿ ತಾನು ನಿಮಿತ್ತ ಕಾರಣವಾಗುವನು. ಸೃಷ್ಟಿಮಾಡಿ ತನ್ನ ಸೃಷ್ಟಿಯಿಂದ ದೂರನಿಲ್ಲದೆ, ಅದರಲ್ಲಿ ಅಂತರ್ಯಾಮಿಯಾಗಿ ಬೆರೆಯುವನು. ಚೇತನಮಯವಾದ ಜೇಡವು ಜಡವಾದ ಬಲೆ, ಚೈತನ್ಯಮಯ ಮರಿ ಎರಡಕ್ಕೂ ಕಾರಣವಾಗುವಂತೆ, ಪರಮಾತ್ಮನು ಮೂಲತಃ ಚೇತನ ಸ್ವರೂಪನಾಗಿ ಜಡವಾದ ಜಗತ್ತನ್ನು, ಚೈತನ್ಯಮಯ ಜೀವಾತ್ಮರುಗಳನ್ನು ಸೃಷ್ಟಿಸುತ್ತಾನೆ.

ಪರಮಾತ್ಮನು ನಿರಾಕಾರ, ನಿರ್ಗುಣ, ಆದಿಕಾರಣ ಎಂಬ ದೇವರ ಸ್ವರೂಪವು ತತ್ತ್ವಜ್ಞಾನಿಯ ಬುದ್ಧಿಗೆ ಸಂತೃಪ್ತಿ ನೀಡುವದೇ ಹೊರತು, ಭಕ್ತನ ಹೃದಯಕ್ಕಲ್ಲ. ಅವ್ಯಕ್ತದೇವರ ಕಲ್ಪನೆ ವೈಚಾರಿಕ ಪ್ರಜ್ಞೆಯನ್ನು ತಣಿಸಬಲ್ಲದೇ ವಿನಾ ಭಾವುಕ ಹೃದಯವನ್ನಲ್ಲ. ಇದನ್ನು ಕಂಡ ಶರಣರು ದೇವನನ್ನು ವ್ಯಕ್ತನನ್ನಾಗಿ (personal), ಸಗುಣನನ್ನಾಗಿ ಕಾಣಬಯಸಿದರು. [ದೇವನನ್ನು ವ್ಯಕ್ತನನ್ನಾಗಿ ಕಂಡರೇ ವಿನಾ ವ್ಯಕ್ತಿಯ (person) ನ್ನಾಗಿ ಅಲ್ಲ.]

ತಂದೆ ನೀನು ತಾಯಿ ನೀನು
ಬಂಧು ನೀನು ಬಳಗ ನೀನು

ದೇವರು ಸೃಷ್ಟಿಕರ್ತನಾಗಿ, ತಂದೆಯಾಗಿ, ಜಗತ್ತಿಗೆ ನಿಮಿತ್ತಕಾರಣನಾಗಿರುವನು ; ಸೃಷ್ಟಿಪಾಲಕನಾಗಿ, ತಾಯಿಯಾಗಿ ಉಪಾದಾನ ಕಾರಣನೂ ಆಗಿರುವನು. ಇಷ್ಟು ಮಾತ್ರವಲ್ಲದೆ ನಂಬಿದ ಹೃದಯವು ಕರೆದಾಗ ಓಗೊಡುವ, ಬಂಧುವು, ಸನ್ಮಾರ್ಗ ದರ್ಶಿಯೂ ಆಗಿದ್ದಾನೆ. ಈ ವ್ಯಕ್ತ ದೇವರು ಪತಿಯಾಗಿ, ಸ್ನೇಹಿತನಾಗಿ ಮಧುರ ಭಕ್ತಿಯನ್ನು ಸ್ವೀಕರಿಸುವನು ಎಂಬ ಕಲ್ಪನೆಯು, ಶರಣಧರ್ಮದಲ್ಲಿ ಅನುಭಾವ ಸಾಹಿತ್ಯವು ಹುಲುಸಾಗಿ ಬೆಳೆಯುವಂತೆ ಮಾಡಿದೆ. ಆಡಿ ಬರುವ ಮಗುವಿಗೆ ಆದರದಿಂದ ಊಟಕ್ಕಿಕ್ಕುವ ತಾಯಿಯಷ್ಟು ಮಮತಾಮಯಿ ಅವನು. ಹಾವನ್ನು-ಕಿಚ್ಚನ್ನು ಮುಟ್ಟೀತಲ್ಲಾ ಎಂದು ತಾಯಿ ವಿವಂಚಿತಳಾಗಿ ಮಗುವಿನ ಬೆನ್ನ ಹಿಂದೆ ಇರುವಂತೆ, ಪರಮಾತ್ಮನು ನಂಬಿದವರ ಶ್ರೀರಕ್ಷೆಯಾಗಿರುವನು.

ಬಸವ ಧರ್ಮದ ದೇವರು, 'ಎಡದ ಕೈಯಲ್ಲಿ ಹಾಲಿನ ಬಟ್ಟಲು, ಬಲದಕೈಯಲ್ಲಿ ಶಿಕ್ಷಿಸುವ ದಂಡ' ಹಿಡಿದ ತಾಯಿಯಂತೆ. ಒಂದೆಡೆ ಕಾರುಣ್ಯಧಾರೆಯಿಂದ ಬದುಕಿನ ಸಸಿಯನ್ನು ಪಲ್ಲವಿಸಿ ಬೆಳೆಸಿದರೆ, ಇನ್ನೊಂದೆಡೆ ಶಿಕ್ಷಾದಂಡ ಹಿಡಿದು ಲೋಪ-ದೋಷಗಳನ್ನು ತಿದ್ದಿ, ನ್ಯಾಯಾಧೀಶನಂತೆ ವರ್ತಿಸುವವನು. ಲೀಲಾಮಯವಾದ ಪ್ರಪಂಚದಲ್ಲಿ ಜೀವಾತ್ಮರುಗಳನ್ನು ಆಡಬಿಟ್ಟು ಇರುವವನು ಮಾತ್ರವಲ್ಲ, ಅವರು ದಾರಿ ತಪ್ಪಿದಾಗ ಗುರುವಾಗಿ ಬಂದು ಜಾಗ್ರತಿಸಿ, ಲಿಂಗವಾಗಿ ಪೂಜೆಗೊಂಡು, ಜಂಗಮನಾಗಿ ಮಾರ್ಗದರ್ಶನ ಮಾಡುವವನು. ಹೀಗೆ ಸಗುಣ-ನಿರ್ಗುಣ, ಸಾಕಾರ-ನಿರಾಕಾರ, ವ್ಯಕ್ತಾವ್ಯಕ್ತನಾದ. ಅಂತರ್ಯಾಮಿ-ಅತೀತನಾದ, ಪರಿಪೂರ್ಣದೇವರ ಕಲ್ಪನೆಯನ್ನು ಶರಣರು ನೀಡಿದರು.

ಈ ಕಲ್ಪನೆಯ ಅಡಿಪಾಯದ ಮೇಲೆಯೇ ಶರಣರ ಉಳಿದೆಲ್ಲ ಸಾಧನೆ, ಸಮಾಜ ಶಾಸ್ತ್ರಗಳು ರೂಪುಗೊಂಡುವು. ದೇವನು ಈ ಜಗತ್ತಿನಲ್ಲಿ ಅಂತರ್ಯಾಮಿಯಾದ ಕಾರಣ ಸೃಷ್ಟಿಯು ಶಿವನ ಲೀಲಾರಂಗವಾಯಿತು. ಕರ್ತಾರನ ಕಮ್ಮಟವಾಯಿತು, ಸತ್ಯವಾಯಿತು. ಜೀವರುಗಳನ್ನು ಪರಿಪಕ್ವಗೊಳಿಸುವ ಮಹಾಮನೆಯಾಯಿತು.

ಪ್ರತಿಯೊಂದು ಜೀವಿಯಲ್ಲಿ ಶಿವನ ಅಂಶ ಹಾಸುಹೊಕ್ಕಾಗಿರುವುದರಿಂದ, ಎಲ್ಲರೂ ಸಮಾನರು, ದೇವರ ಮಕ್ಕಳು ಎಂಬ ಸಮತಾವಾದ, ಜಾತ್ಯತೀತ ದೃಷ್ಟಿಕೋನ ರೂಪುಗೊಂಡಿತು. ಹಾಲು ಬಟ್ಟಲು-ಶಿಕ್ಷೆಯ ಬೆತ್ತ ಹಿಡಿದ ದೇವನಂತೆ ಪ್ರತಿಯೊರ್ವನು ವಿನಯ-ವೀರತ್ವ ; ಮಾನವೀಯತೆ-ತತ್ತ್ವನಿಷ್ಠೆಗಳ ಸಂಗಮವಾಗಬೇಕೆಂಬ ನೀತಿಶಾಸ್ತ್ರ ಮೈದಳೆಯಿತು. ಸಮಾಜದ ಶ್ರೇಯಸ್ಸಿಗೆ ವ್ಯಕ್ತಿ ವಿನಯಶೀಲನಾದಂತೆ, ಅಲ್ಲಿಯ ಲೋಪದೋಷಗಳ ನಿರ್ಮೂಲನೆಗೆ ದಿಟ್ಟನೂ ಆಗಬೇಕು ಎಂಬ ವಿನೂತನ ಸಂದೇಶ ರೂಹು ತಾಳಿತು. ಶ್ರೀಸಾಮಾನ್ಯನ ಸಮಗ್ರ ವಿಕಾಸಕ್ಕೆ ಸಾಧನವಾಗುವ ತತ್ತ್ವಗಳಿಂದ ಕೂಡಿದ ಪರಿಪೂರ್ಣ ಧರ್ಮವಿದರ ಮೂಲಭೂತ ತತ್ತ್ವ-ಶರಣರು ನೀಡಿದ ಅಪೂರ್ವವಾದ ದೇವರ ಕಲ್ಪನೆ.

★ ★ ★

★ ಸರ್ವಾಧಿಕಾರಿಯ ಕೈಯಲ್ಲಿನ ರಾಜದಂಡ ಕೋತಿಯ ಕೈಯಲ್ಲಿ ಸಿಕ್ಕ ತೀಕ್ಷ್ಣವಾದ ಅಲಗಿನಂತೆ. ಮನಸ್ಸಿಗೆ ಬಂದಂತೆ ಅವನು ಬೀಸಬಹುದು.

— **ಮಾತಾಜಿ** (ತರಂಗಿಣಿ ಕಾದಂಬರಿ)

ಯಾರಪ್ಪಾ ಅವರು? (ಕವನ)

—ಗೋ. ರು. ಚ.

ಯಾರಪ್ಪಾ ಅವರು
ಇತ್ತ ಬಿಟ್ಟವರು ಬೆಳಕ ?
ನಮ್ಮಪ್ಪಕ್ಕೆ ನಮ್ಮ
ಬಿಡಬಾರದೇ ಸುಮಕ ?
ಯಾಕೆ ತೋರಸ್ತೀರಿ
ನಮ್ಮ ಸುತ್ತಿನ ಹುಳಕ ?
ಇದು ಕತ್ತಲೂ ಅಂತ
ನಿಮಗೆ ಅನಿಸಿದೆಯೇನು ?
ಆದರೆ ನಮಗೆ ಕತ್ತಲೆ
ಒಗ್ಗಿ ಹೋಗಿದೆಯಪ್ಪ !
ನಾವು ಹುಟ್ಟಿದ್ದು ಇಲ್ಲೇ
ಬೆಳೆದದ್ದೂ ಇಲ್ಲೇ !
ಮಣ್ಣು ಕೊಟ್ಟದ್ದನ್ನು
ನಾವು ಉಣ್ಣೋದು ಇಲ್ಲೇ,
ಉಂಡು ಮಲಗೋದು ಇಲ್ಲೇ !
ಕೊನೆಗೆ ಮಣ್ಣು
ನಮ್ಮನ್ನುಣ್ಣುವುದೂ ಇಲ್ಲೇ !
ನೀವು ಏನೇ ಹೇಳಿ
ನಮಗಂತೂ ಇದು ಒಗ್ಗಿಹೋಗಿದೆ !
ಅಯ್ಯೋ, ಬಿಡಿರಿ,
ಮತ್ತೆ ಯಾಕೆ ಹತ್ತಿರ ತರ್ತೀರಿ
ಆ ಬೆಳಕಿನ ಬ್ಯಾಟರಿ ?
ಅರೆಮುಚ್ಚಿದ ಕಣ್ಣು ಚುಚ್ಚಲಿಕ್ಕೆ
ಮತ್ತೆ ಬಿಚ್ಚಲಿಕ್ಕೆ
ಬಿಚ್ಚಿ ನೋಡಿದರೇನು ಕಣ್ಣು
ಸ್ವಚ್ಛವಾಗಿವೆ ಅಂತೀರೇನು ?
ಕತ್ತಲಾಗಿದ್ದ ಕಣ್ಣು
ಮೆತ್ತಿ ಹೋಗಿದೆ ಮಣ್ಣು !
ಮುಚ್ಚಿಡಿರಿ ಆ ಬ್ಯಾಟರಿ
ಕತ್ತಲೇನ ಬೆತ್ತಲೆ ಮಾಡಾಕೆ
ಯಾಕೆ ಹೊರಟೀರಿ ?

ಮಂತ್ರಪುರುಷ ಬಸವಣ್ಣ

—ಮಾತಾಜಿ

ವಿಶ್ವಗುರು ಬಸವಣ್ಣನವರು ಅದೆಷ್ಟು ಪವಿತ್ರಾತ್ಮರು, ಪೂಜ್ಯರು ಆದರೆಂದರೆ ಅವರ ಹೆಸರು ಮಂತ್ರವಾಯಿತು. 'ಶಿವನೇ ಬಸವಾ, ಬಸವಾ ಶಿವನೆ' ಎಂಬುದು ಜನಸಾಮಾನ್ಯರ ನಾಲಿಗೆಯಲ್ಲಾಡುವ ಭಜನೆಯಾದರೆ, 'ಶ್ರೀ ಗುರು ಬಸವಲಿಂಗಾಯ ನಮಃ' ಎಂಬುದು ಶಾಸ್ತ್ರೀಕೃತ ಮಂತ್ರವಾಯಿತು. ದೈವೀಕರಣಗೊಂಡ ಬಸವಣ್ಣನವರ ಹೆಸರಿನ ಈ ಮಂತ್ರವು ವಚನ ಸಾಹಿತ್ಯ ವಲಯದ ಯಾವುದೇ ಸಾಹಿತ್ಯ ಕೃತಿಯ ಆದಿಯಲ್ಲಿ ಇರುವುದನ್ನು ಕಾಣಬಹುದು.

೧. ಹರಬಸವಾಯ ನಮಃ ಗುರು ಬಸವಾಯ ನಮಃ —ಸಿದ್ಧರಾಮ

೨. ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ
ಸತ್ಯ ಶಿವ ಮಂತ್ರ ನಿನ್ಹೆಸರು ಬಸವಯ್ಯ
ಮರ್ತ್ಯದೊಳು ಮಂತ್ರ ಜೀವನಕೆ.

—ಜನಪದ ಸಾಹಿತ್ಯ.

ಹೀಗೆ ಬಸವನಾಮವು ಜೀವನದ ಉಸಿರಾಯಿತು, ಭವತಾರಕ ಮಂತ್ರವಾಯಿತು. ಭಕ್ತಜನರು, 'ಬಸವ ಬಸವಾ ಎಂದು ಬಯಲಾದೆ, ಭವಗೆಟ್ಟೆ' ಎಂದು ಮಂತ್ರಪುರುಷ ಬಸವಣ್ಣನನ್ನು ಭಯ ಭಕ್ತಿಯಿಂದ ಭಜಿಸ ತೊಡಗಿದರು.

ಸೀಮೆ ಸಂಬಂಧಗಳ ಮೀರಿಪ್ಪ ಮಂತ್ರಕ್ಕೆ
ರಾಜ ಮಂತ್ರವು ತಾನು ಪಂಚಾಕ್ಷರಿ
ಪಂಚಾಕ್ಷರಿಯ ಗುಣದ ಬಸವಾಕ್ಷರ ತ್ರಯದ
ಧ್ಯಾನಮೌನದ ಗುಣದ ಸತ್ವವಿಡಿದು
ಆನಂದ ತ್ರೈಲಿಂಗ ಮೂಲ ಮಂತ್ರಕ್ಕೀಗ
ಬಸವಾಕ್ಷರತ್ರಯವು ಮಾತೆಯಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನ.

ಪರಂಪರಾಗತವಾಗಿ ಬಂದಿದ್ದ ಷಡಕ್ಷರಿ ಮಂತ್ರದ ಸ್ಥಾನವೇ ಬಸವ ಮಂತ್ರಕ್ಕೂ ಸಿಕ್ಕಿತು.

ಬಸವಣ್ಣನ ದೈವೀಶಕ್ತಿಯು ಎಷ್ಟರ ಮಟ್ಟಿಗೆ ಪ್ರಭಾವ ಬೀರಿತೆಂದರೆ ಅವರು ಶರಣಾಗತರ ರಕ್ಷಕರು, ಆಶ್ರಿತರ ಉದ್ಧಾರಕರು, ಭಕ್ತರ ಕಾಮಧೇನು, ಕಲ್ಪವೃಕ್ಷ,

ಚಿಂತಾಮಣಿಯೇ ಆದರು. ನಿರವಯುವನಾದ ಪರಮಾತ್ಮನ ಸಾವಯುವ ಪ್ರತಿನಿಧಿ ಬಸವಣ್ಣ ಎಂಬುದನ್ನು ಮಾರ್ಮಿಕವಾಗಿ ತಿಳಿಸುವಂತೆ ಭೀಮಕವಿಯು ಪರಶಿವ ಸಾರ್ವಭೌಮನ 'ಮಹಾ ಸಿಂಹಾಸನಂ ಬಸವಾ'; ಎಂದು ಕಂಡರೆ, ಪ್ರಭುದೇವರು 'ಗುಹೇಶ್ವರ ಲಿಂಗಕ್ಕೆ ವಿಳಾಸವಾದೆಯಲ್ಲಾ ಸಂಗನ ಬಸವಾ' ಎಂದು ನುಡಿದು, ಪರಮನಿಗೆ ನಮ್ಮ ಬಿನ್ನಹದ ಓಲೆ ಮುಟ್ಟಿಸಬೇಕಾದರೆ ವಿಶ್ವಗುರು ಬಸವಣ್ಣನ ವಿಳಾಸಕ್ಕೆ ಕಳಿಸಬೇಕೆಂದು ದೃಢವಾಗಿ ಹೇಳುತ್ತಾರೆ.

ಅರ್ಚಿಸಲು ಬೇಡವದ ಪೂಜಿಸಲು ಬೇಡವದ
ನಿತ್ಯ ಜಪ ತಪವು ನಿನಗೆ ಬೇಡ
ಸಚ್ಚಿದಾನಂದಗುರು ಕಪಿಲ ಸಿದ್ಧ ಮಲ್ಲಿಕಾರ್ಜುನಯ್ಯನ
ಬಸವಾಕ್ಷರ ತ್ರಯುವ ನೆನೆ ನಿನಗೆ ನಿತ್ಯಪದವು.

ಹೀಗೆ ಮಂತ್ರಪುರುಷನಾದ ಬಸವಣ್ಣ ಮುಕ್ತಿದಾಯಕನೂ ಆದ. ಅವನ ಅನುಗ್ರಹದ ಬಲದಿಂದ ಕಾಯದ ಕಾಳಿಕೆ, ಮನದ ಮಲಿನತೆ ಕಳೆದುಕೊಂಡು ಮುಕ್ತಿ ಸಂಪದವನ್ನು ಪಡೆವೆವೆಂಬ ನಂಬುಗೆ ಬೆಳೆಯಿತು.

ಕಾಯುಗುಣದಪಹಾರಿ ಕಲ್ಮಷಮನ ಸಂಹಾರಿ
ದಾಯದೋರಿಯೆ ಭಕ್ತಿದಾಯಕ ನೀನು
ಕಾಯುಗುಣಗಳ ಕಳೆದು ರಾಯ ಶಿವಪದವೀಯೊ
ದೇವ ಶ್ರೀ ಗುರು ಬಸವ ಯೋಗಿನಾಥ ॥

—ಸಿದ್ಧರಾಮ

ಬಸವಣ್ಣನವರ ಹೆಸರು ಭವತಾರಕ ಮಂತ್ರವಾದರೆ, ಬಸವಣ್ಣನವರ ಕರುಣೆ ಮುಕ್ತಿದಾಯಕ ಶಕ್ತಿಯಾಯಿತು. ಭವರೋಗ ವೈದ್ಯನಾದ ಬಸವ ಮಹಾಗುರು-ವನ್ನು ಹೀಗೆ ಸ್ತುತಿಸುತ್ತಾರೆ:

ಬಸವ ಜಗದಾದಿ ಬೀಜ, ಬಸವ ಅನತ ಸುರಭೂಜ
ಬಸವಾ ಬಸವಾ ಬಸವಾ ಎಂಬ ನಾಮ ಸಾಲದೆ ?
ಬಸವ ಭವರೋಗ ವೈದ್ಯ, ಬಸವ ವೇದಾಂತ ವೇದ್ಯ
ಬಸವ ಬಸವ ಬಸವಾ ಎಂಬುಲಿ ಸಾಲದೆ ?
ಬಸವ ಕರುಣಾಮೃತ ಸಿಂಧು, ಬಸವ ಪರಮ ಬಂಧು
ಬಸವ ವರದ ಸೋಮನಾಥ ನೀನೆ !
ಬಸವಾ ಬಸವಾ ಬಸವಾ ಶರಣೆಂದರೆ ಸಾಲದೆ ?– ಸೋಮನಾಥ

'ಬ' ಎಂಬಲ್ಲಿ ಎನ್ನ ಭವವು ಹರಿಯಿತ್ತಯ್ಯ !
'ಸ' ಎಂಬಲ್ಲಿ ಸರ್ವಜ್ಞಾನಿಯಾದೆನಯ್ಯಾ !
'ವ' ಎಂದು ವಚಿಸುವರೆ ವಸ್ತು ಚೈತನ್ಯಾತ್ಮಕನಾದೆನಯ್ಯಾ !
ಇಂತೀ ಬಸವಾಕ್ಷರತ್ರಯುವೆನ್ನ ಸರ್ವಾಂಗದಲ್ಲಿ
ತೊಳಗಿ ಬೆಳಗಿದ ಭೇದವನರಿದು,
ಆನು ನೀನು ಬಸವ ಬಸವಾ ಎನುತಿರ್ದೆವಯ್ಯಾ ಗುಹೇಶ್ವರ.

—ಪ್ರಭುದೇವ

ಹೀಗೆ ಹಲವು ಹನ್ನೊಂದು ರೀತಿಯಲ್ಲಿ ಬಸವ ನಾಮವು ಮಂತ್ರವಾದರೂ, ಅಧಿಕೃತ ಮಂತ್ರವೆಂದು ಶ್ರೀ ಗುರು ಬಸವಲಿಂಗಾಯ ನಮಃ ಎಂಬ ಏಕಾದಶಾಕ್ಷರ ಮಂತ್ರವನ್ನು ಪರಂಪರೆಯು ಸ್ವೀಕರಿಸಿರುವುದರಿಂದ ಅದರ ಅರ್ಥವನ್ನು ತಿಳಿಯು ವುದು ಆವಶ್ಯಕ.

"ಶ್ರೀ" ಇದು ಮಂಗಲವಾಚಕ; ಸಂಪತ್ತಿಗೆ ಅನ್ವಯಿಸುವಂತಹುದು. ಇಂದು ರೂಢಿಯಲ್ಲಿ, ಪುರುಷವಾಚಕವಾಗಿ ಈ ಶಬ್ದವು ಹೆಸರಿನೊಡನೆ ಬಳಸಲ್ಪಡುತ್ತಿದ್ದರೂ ಲಕ್ಷ್ಯಾರ್ಥದಲ್ಲಿ ಸಂಪದವನ್ನು ಸಂಕೇತಿಸುತ್ತದೆ. ಮಹಾತ್ಮರು, ಜ್ಞಾನಿಗಳು ಆರ್ಜಿಸು ವುದು ಭೌತಿಕ ಸಂಪದವನ್ನಲ್ಲ, ಪಾರಮಾರ್ಥ ಸಂಪದವನ್ನು; ಅದುವೇ ಸದುಗುಣ ಸಂಪತ್ತು. ಶಮ, ದಮ, ಶಾಂತಿ, ಸೈರಣೆ, ಕ್ಷಮೆ, ನಿರ್ವಂಚಕತ್ವ, ಪ್ರಾಮಾಣಿಕತೆ, ವೈರಾಗ್ಯ, ಭಕ್ತಿ, ಜ್ಞಾನ ಇನ್ನೂ ಮುಂತಾದ ಅನೇಕ ಸದುಗುಣಗಳ ಐಶ್ವರ್ಯವೇ ಶಾಶ್ವತಸಿರಿಯಾದ ಕಾರಣ ಪಾರಮಾರ್ಥಿಗಳು ಬಯಸುವುದು ಇಂತಹ ಶ್ರೀಯನ್ನು. ಶ್ರೀಕಾರವು ಆದಿಯ, ಪ್ರಾರಂಭದ ಲಕ್ಷಣ. ಆದ್ದರಿಂದ ನಿಜವಾದ ಅರ್ಥದಲ್ಲಿ ಧರ್ಮದ ಆದಿಗುರು ಮಾತ್ರವೇ ಶ್ರೀಗುರುವು.

ಗುರು :– ಪರಮಾತ್ಮನ ಪ್ರತಿನಿಧಿಯಾಗಿ ಇಳೆಯಲ್ಲಿ ನಿಂತು, ಮರ್ತ್ಯ ಲೋಕದ ಮಾನವರ ಮನದ ಮೈಲಿಗೆಯನ್ನು ತೊಳೆಯುವ ಮಹಾಂತನೇ ಗುರು. ಅಜ್ಞಾನವೆಂಬ ಅಂಧಕಾರಕ್ಕೆ ತಾನು ಭಾನುಸ್ವರೂಪನಾಗಿ, ತನ್ನ ಸಂದೇಶವೆಂಬ ಕಿರಣಗ ಳಿಂದ ಮರೆವಿನ ತಿಮಿರವನ್ನು ಹೊಡೆದು ಓಡಿಸುವ ಚಿತ್ಸೂರ್ಯನೇ ಗುರುವು. ಬಸ ವಣ್ಣನವರು ಅಂತಹ ಮಹಾಗುರುವು. "ಮರ್ತ್ಯಲೋಕದ ಮಹಾಮನೆ ಹಾಳಾಗ ಬಾರದೆಂದು ಕರ್ತನಿಂದ ಕಳುಹಲ್ಪಟ್ಟ ದೈವೀಪುರುಷ." ಜಡರುಗಳ ಮನದ ಕತ್ತ ಲೆಯ ತೊಡೆಯಲೆಂದು ಮಹಾಮನೆಯನ್ನು ಕಟ್ಟಿ, ಜನತೆಯ ಹೃದಯ ಸಿಂಹಾಸನದಲ್ಲಿ ಪೀಠಸ್ಥನಾದ ಜಗದ್ಗುರು.

ಬಸವ : ತಾಯಿತಂದೆಗಳು ಮಗುವಾದಾಗ ಕರುಣಿಸಿದ ನಾಮವು ಇದಾದರೂ ಕಾಲಾನಂತರದಲ್ಲಿ ತನ್ನ ಔನ್ನತ್ಯದಿಂದ 'ಬಸವ'ವು ಮೂರು ಅಕ್ಷರಗಳ ಪ್ರಣವವೇ

ಆಯಿತು. ಬ ಕಾರವು ಓಂಕಾರದಲ್ಲಿಯ 'ಅ' ಕಾರವನ್ನು, ಸ ಕಾರವು 'ಉ' ಕಾರವನ್ನು, ವ ಕಾರವು 'ಮ' ಕಾರವನ್ನು ಪ್ರತಿನಿಧಿಸಿ, 'ಬಸವ' ಶಬ್ದವು ಓಂಕಾರದ ಸ್ಥಾನವನ್ನಾಕ್ರಮಿಸಿತು. ಧರಿಸುವ ತ್ರಿಪುಂಡ್ರ ಮೂರು ಎಳೆಗಳು 'ಬ,ಸ,ವ' ಸಂಕೇತವಾದವು, ಪರಮಾತ್ಮನ ಸತ್-ಚಿತ್-ಆನಂದದ ಲಾಕ್ಷಣಿಕ ಶಬ್ದಗಳಾದವು. ಇಚ್ಛಾಜ್ಞಾನಕ್ರಿಯಾ ಶಕ್ತಿಗಳ ಸೂತ್ರಶಬ್ದಗಳಾದವು. ಅದನ್ನು ಹೀಗೆ ಕಾಣುತ್ತೇವೆ :

ಬಸವಾ ಎಂಬ ಮೂರಕ್ಷರ ಹೃದಯ ಕಮಲದಲ್ಲಿ ನೆಲೆಗೊಂಡಡೆ
ಅಭೇದ್ಯ ಭೇದ್ಯವಾಯಿತ್ತು ; ಅಸಾಧ್ಯ ಸಾಧ್ಯವಾಯಿತ್ತು,
ಕೂಡಲ ಚನ್ನ ಸಂಗಯ್ಯನಲ್ಲಿ ಬಸವಣ್ಣನ ಕಾರುಣ್ಯದಿಂದ.

ಹೀಗೆ ಬಸವ ನಾಮ ಪ್ರಣವದ ಸತ್ಯ-ಔನ್ನತ್ಯಗಳ ಪ್ರತೀಕವಾಗಿದೆ.

ಲಿಂಗ : ಈ ಶಬ್ದದ ಮೂಲಾರ್ಥ ಪರವಸ್ತು. ಯಾವುದು ಸೃಷ್ಟಿಸ್ಥಿತಿಲಯಗಳ ಕಾರಣ ಕರ್ತೃವೋ, ಯಾವುದನ್ನು ವೇದಾಂತಿಗಳು ಬ್ರಹ್ಮನೆಂದು, ಸಿದ್ಧಾಂತಿಗಳು ಪರವಸ್ತು—ಪರಶಿವನೆಂದು ಕರೆದು ಈ ಜಗದ ಮೂಲವೆನ್ನುವರೋ ಅದುವೇ ಲಿಂಗ. ಇದರ ಮಹಾಗರ್ಭದ ತೊಟ್ಟಿಲಲ್ಲೇ ಸೃಷ್ಟಿಯ ಸಮಸ್ತ ಚಟುವಟಿಕೆ. 'ಲಿಂಗ' ಎಂದರೆ ಇನ್ನೊಂದು ಅರ್ಥ ದಿವ್ಯ (Divine). 'ಬಸವಲಿಂಗ' ಎಂದರೆ Basava, the God, or Basava, the Divine ಎಂದು ಅರ್ಥ. ಅಂದರೆ ಬಸವಣ್ಣನವರನ್ನು ದೇವನ ಮಟ್ಟಕ್ಕೆ ಏರಿಸಿ, ಅಪೂರ್ವ ದಿವ್ಯತ್ವ (Divinity)ವನ್ನು ಗುರುತಿಸಿದರು. 'ಬಸವ – ಲಿಂಗ' ಎಂಬ ಪ್ರಯೋಗವು Jesus-the Christ, Goutama-the Buddha ಎಂಬ ಪ್ರಯೋಗವನ್ನು ಹೋಲುತ್ತದೆ. ಏಸುವಿನಲ್ಲಿ ದೈವತ್ವವನ್ನು ಗುರುತಿಸಿದಂತೆ, ಗೌತಮನಲ್ಲಿ ಬುದ್ಧತ್ವವನ್ನು ಗುರುತಿಸಿದಂತೆ ಬಸವಣ್ಣನಲ್ಲಿ ಲಿಂಗತ್ವವನ್ನು ದೃಢೀಕರಿಸುವ ತಾತ್ತ್ವಿಕ ಪ್ರಯೋಗವಿದು.

'ಸಂಗನ ಬಸವಾ' ಎಂಬ ಪ್ರಯೋಗವೂ ಬಹಳ ತಾತ್ತ್ವಿಕವಿದೆ. ಸಂಗ ಎಂದರೆ ದೇವರು ಎಂಬ ಪದ ಸೂಚಕ; ಸಂಗನ ಬಸವ ಎಂದರೆ ದೇವರಮಗ (Son of God) ಎಂದು ಅರ್ಥ. ಹೀಗೆ 'ಸಂಗನ-ಬಸವ', ಬಸವಲಿಂಗ ಈ ಎರಡೂ ಶಬ್ದಗಳು ದೈವೀಕರಣಕೊಂಡ (Divinised) ಬಸವಣ್ಣನವರ ನಿಲುವನ್ನು ಸಮರ್ಥಿಸುತ್ತವೆ.

ಅಯ :– ಇಂತಹ ಮಹಾಗುರು, ಆದಿದೇಶಿಕ ಬಸವಣ್ಣನವರಿಗೆ.

ನಮಃ : ನಮಸ್ಕಾರ.

ನಮಸ್ಕಾರವು 'ಶರಣಾಗತ' ನಾಗುವ ಶ್ರದ್ಧೆಯನ್ನು ತೋರುತ್ತದೆ. ಶರಣಾ

ಗತ ರಕ್ಷಕನಾದ ಬಸವ ಮಹಾಗುರುವನ್ನು ಲಕ್ಷವಾಗಿರಿಸಿಕೊಂಡು, ಮುಮುಕ್ಷುವು ತನ್ನನ್ನು ತಾನು ಎಡೆಮಾಡಿಕೊಳ್ಳುವ ಸಮರ್ಪಣಾಭಾವದ ಪ್ರತೀಕ.

ಒಟ್ಟಾರೆ, "ಷಡುಗುಣ ಸಂಪದ್ಭರಿತನು, ಮಂಗಲಮಯನು, ವಿಶ್ವಗುರುವು, ಲಿಂಗಸ್ವರೂಪನೂ ಆಗಿರುವ ಬಸವಣ್ಣನಿಗೆ ನಮಸ್ಕಾರ" ಎಂದು ಹೇಳುವ 'ಶ್ರೀಗುರು ಬಸವಲಿಂಗಾಯ ನಮಃ 'ಇಂದು' ನಾವು-ನೀವು ಬಳಕೆಗೆ ತರಬೇಕಾದ ಮಂತ್ರವಲ್ಲ. ಈ ಧರ್ಮದ ಆದಿಯಿಂದಲೇ ಪರಂಪರಾಗತವಾಗಿ ಶೂನ್ಯಸಿಂಹಾಸನಾಧೀಶ ಪ್ರಭುದೇವರಿಂದ ಹಿಡಿದು ಇಲ್ಲಿಯವರೆಗೆ ವಿರಕ್ತ ಪರಂಪರೆಯಲ್ಲಿ, ಮಗ್ಗೆಯ ಮಾಯಿದೇವ, ಎಳಂದೂರು ಷಡಕ್ಷರಿದೇವ ಮುಂತಾದ ಗುರುವರ್ಗದವರ ಪರಂಪರೆಯಲ್ಲಿ, ಇದೆಲ್ಲಕ್ಕಿಂತ ಮನುಕುಲದ ಸಾರ್ವಭೌಮರಾದ ಜನಸಾಮಾನ್ಯರ ನಾಲಿಗೆ–ಜೀವನಗಳಲ್ಲಿ ಮೊಳಗುತ್ತ ಬಂದಿದೆ.

ಕಾಲಾನಂತರದಲ್ಲಿ ಬಸವಣ್ಣನವರ ಪ್ರಭಾವವನ್ನು ಕುಗ್ಗಿಸಲು ಪ್ರಯತ್ನಿಸಿ ಈ ಸಮಾಜದ ಅನೇಕರು, ಇತಿಹಾಸಕ್ಕೆ ದೂರವಾದ ಹೊಸ ಹೊಸ ಕೃತಿಗಳನ್ನು ರಚಿಸಿ, "ಪ್ರಸೀದಂತು", 'ಪ್ರಸನ್ನ' ಮುಂತಾದ ಶಬ್ದಗಳನ್ನು ಯಾರಾರ ಹೆಸರಿಗೋ ಸೇರಿಸಿ, ಮಂತ್ರೀಕರಿಸಲು ಪ್ರಯತ್ನಿಸಿದರೂ ಅವಾವೂ ಸ್ಥಿರಗೊಳ್ಳದೆ, ಇಂದಿಗೂ ರಕ್ತಗತವಾಗಿ ಪ್ರವಹಿಸುತ್ತಿದೆ ಬಸವ ಮಂತ್ರ. ಈ ಮಂತ್ರದ ಪ್ರಭಾವವನ್ನು ಜನಮನದಿಂದ ಅಳಿಸಿಹಾಕುವ ಪ್ರಯತ್ನ ರಕ್ತದಿಂದ ಕೆಂಪುಕಣಗಳನ್ನು ಬೇರ್ಪಡಿಸುವಷ್ಟೇ ದುಃಸಾಹಸದ ಪ್ರಯತ್ನವಾಗಿದೆ. ಎಂದರೆ ಉತ್ಪ್ರೇಕ್ಷೆಯಾಗದು.

★★

ಸ್ಫುರಣ-ಕಿರಣ

— ಮಾತಾಜಿ

ಸಂಜೆಯಾಗಿತ್ತು; ಆಶ್ರಮದ ಕ್ಯಾಷಿಯರ್ ಶಿವರಾಯ ಹೊರಗೆಲ್ಲೋ ಹೋಗಿದ್ದರು. ಅಕಸ್ಮಾತ್ ಖರ್ಚಿಗೆ ಹಣ ಬೇಕಾಗಿದ್ದರಿಂದ ಶಿಷ್ಯೆ ಗಂಗಮ್ಮ ಹಣ ಕೇಳಿದಳು. ಬೀರುವಿನ ಬೀಗದ ಕೈಗಳಲ್ಲಿ ಒಂದು ಕ್ಯಾಷಿಯರ್ ಬಳಿ, ಇನ್ನೊಂದು ನಮ್ಮ ಬಳಿ. ಸಾಮಾನ್ಯವಾಗಿ ಶಿವರಾಯ ಮಾಸ್ಟರ್ ಹಣ ಕೊಡುವವರು. ಈಗ ತುರ್ತಾಗಿ ಬೇಕಾದ್ದರಿಂದ ನಾನೇ ಹೋಗಿ ನನ್ನ ಬಳಿ ಇದ್ದ ಕೀಲಿಯಿಂದ ಅಲ್ಮೈರಾ ತೆರೆದು ಹಣ ಕೊಟ್ಟೆ. ಆಗ ತಟ್ಟನೆ ಒಂದು ವಿಚಾರ ಸ್ಫುರಿಸಿತು. ಬೀಗದ ಕೈಗಳೆರಡು, ಒಂದು ಲೆಕ್ಕಿಗನ ಬಳಿ ಇನ್ನೊಂದು ಮಾಲಿಕನ ಬಳಿ. ಸಾಮಾನ್ಯವಾಗಿ ಲೆಕ್ಕಿಗನೇ ಹಣ ಕೊಡುವುದು. ವಿಶೇಷ ಪ್ರಸಂಗಗಳಲ್ಲಿ ಮಾತ್ರ ಮಾಲಿಕನು ಕೊಡುವುದು. ಹಾಗೆಯೇ "ದೇವರ ಕರುಣೆ" ಎಂಬ ಭಾಂಡಾರದ ಕೀಲಿಕೈ ಇರುವುದು ಗುರುವಿನ ಬಳಿ ಮತ್ತು ದೇವರ ಬಳಿ. ೧೦೦ರಲ್ಲಿ ೯೯ರಷ್ಟು ಮುಮುಕ್ಷುಗಳಿಗೆ ಗುರುವೇ ಕರುಣೆಯ ಭಂಡಾರ ತೆರೆಯುವುದು. ವಿಶೇಷ ಪ್ರಸಂಗಗಳಲ್ಲಿ, ಪ್ರವಾದಿಗಳ ಜೀವನದಲ್ಲಿ ಮಾತ್ರ ದೇವರು ನೇರವಾಗಿ ಅನುಗ್ರಹಿಸುವನು. ಉದಾಹರಣೆಗೆ ಏಸುಕ್ರಿಸ್ತ, ಬಸವಣ್ಣ, ಬುದ್ಧ ಇಂಥ ನವಧರ್ಮ ದ್ರಷ್ಟಾರರಿಗೆ ಲೌಕಿಕ ಧೀಕ್ಷಾಗುರುವು ಇರುವುದಿಲ್ಲ; ಪರಮಾತ್ಮನೇ ಅನುಗ್ರಹ ನೀಡಿರುವನು.

ಸಂಜೆ ೭-೩೦. ದಿ. ೯-೧೦-೭೭

ಹರಿಹರದಿಂದ ಭದ್ರಾವತಿಗೆ ಹೊರಟಿದ್ದೆವು. ಹಾದಿಯಲ್ಲಿ ಮಲೇ ಬೆನ್ನೂರ ಬಳಿ ಕಾರು ನಿಲ್ಲಿಸಿ, ಸೆಕೆಯನ್ನು ಆರಿಸಿಕೊಳ್ಳುತ್ತಿದ್ದೆವು. ಅನಿತರಲ್ಲಿ ಒಂದರ ಹಿಂದೊಂದು ಲಾರಿಯ ಚೇಸೀಸ್ ಬಂದು, ಹಾಯ್ದು ಹೋದಾಗ ಶಿಷ್ಯೆ ಗಂಗಮ್ಮ ಕೇಳಿದಳು, ಅವೇನೆಂದು. ಅವು ಲಾರಿಯ ಚೇಸೀಸ್ ಎಂದಾಗ 'ಹೀಗೆ ಬರುವವೇ ಎಂದಳು' "ಅಹುದಮ್ಮಾ, ಕಂಪೆನಿಯವರು ಒದಗಿಸುವುದು ಹೀಗೆಯೇ! ಕೊಳ್ಳುವವರು ತಮ್ಮ

ಸಾಮರ್ಥ್ಯಕ್ಕೆ ತಕ್ಕಂತೆ ಲಾರಿಯ ಶರೀರ ರಚಿಸುವರು. ಹೆಚ್ಚು ಹಣ ಇರುವವರು ಅಲಂಕಾರಿಕವಾಗಿ ರಚಿಸುವರು. ಮಧ್ಯಮ ವರ್ಗದವರು ಸುಮಾರಾಗಿ ರಚಿಸುವರು. ಅಲ್ಲದೇ ತಮ್ಮ ತಮ್ಮ ಉದ್ಯಮದ ಉಪಯೋಗಕ್ಕೆ ತಕ್ಕಂತೆ ಬೇರೆ ಬೇರೆ ಕಟ್ಟಿಸುವರು" ಎಂದು ಹೇಳಿದೆ. ತಕ್ಷಣವೇ ಒಂದು ವಿಚಾರ ಸ್ಫುರಿಸಿ ಹೇಳಿದೆ: "ಹಾಗೆಯೇ ನಾವು (ಅಂದರೆ ಗುರುಗಳು) ಶಿಷ್ಯರಿಗೆ ಕೊಡುವ ಜ್ಞಾನ ಚೇಸೀಸ್: ಧರ್ಮದ ಮೂಲಭೂತ ತತ್ತ್ವಗಳಿಗೆ ಸಂಬಂಧಿಸಿರುತ್ತದೆ. ನಂತರ ಅವರವರ ಪ್ರತಿಭೆ, ಸಾಧನೆಗೆ ಅನುಸಾರವಾಗಿ ಅವರು ಜ್ಞಾನದ ಕಟ್ಟಡ ರಚಿಸಿಕೊಳ್ಳುವರು. ಮತ್ತು ಪರಿಸರ, ಹಾಗೂ ಕೇಳುವ ಶ್ರೋತೃಗಳ ಮಟ್ಟಕ್ಕೆ ತಕ್ಕಂತೆ ಶಿಷ್ಯರು ಬೋಧೆ ಮಾಡುವ ಸಂಪತ್ತು ಬೆಳಸಿಕೊಳ್ಳ ಬೇಕಾಗುತ್ತದೆ.

ಮಧ್ಯಾಹ್ನ ೨ ಗಂಟೆ. ೨೩-೯-೭೭

ಮಲೆನಾಡಿನ ನಿಸರ್ಗದೇವತೆಯ ಚೆಲುವು ಹುಚ್ಚು ಹಿಡಿಸುತ್ತಿತ್ತು. ಹರಿಹರದಿಂದ ಭದ್ರಾವತಿಯತ್ತ ಸಾಗುವಾಗ ಶಾಂತಿಸಾಗರ ಜಲಾಶಯದ ಬಳಿಗೆ ಬಂದಿದ್ದೆವು. ದಾರಿಯ ಇಕ್ಕೆಲಗಳಲ್ಲೂ ಹಸಿರು ಸಮುದ್ರ. ಗಾಳಿಗೆ ಬಿಂಕದಿಂದ ತೂಗುವ ಬತ್ತದ ಸಸಿಯು ಒನಪು-ಒಯ್ಯಾರ ಸಮುದ್ರದ ಅಲೆಗಳನ್ನು ನೆನಪಿಗೆ ತರುತ್ತಿತ್ತು. ವಿಶಾಲವಾದ ಹೊಲಗದ್ದೆಗಳು. ಸೂರ್ಯಕಾಂತಿಯ ಬೆಳೆಯಿಂದಾವೃತವಾದ ಹೊಲ.

"ಮಾತಾಜಿ, ಸೂರ್ಯಕಾಂತಿ ಸೂರ್ಯನೆಡೆಗೆ ಮುಖ ಮಾಡಿಕೊಂಡಿರುವದು ಎಂದು ಹೇಳುವರು. ಅವೇಕೆ ಹಾಗಿಲ್ಲ?" ಕುಮುದಾ ಕೇಳಿದಳು. ದಿಟ್ಟಿಸಿ ನೋಡಿದೆ. ನಿಜ, ಸೂರ್ಯಕಾಂತಿ ನೆಲಕ್ಕೆ ಬಾಗಿತ್ತು, ತನ್ನನ್ನೇ ತಾನು ನೋಡಿಕೊಳ್ಳುವಂತೆ. ಇನ್ನೂ ಗಮನಿಸಿದೆ. ಹೂವು ಬಾಡಿತ್ತು, ಬೀಜಗಳು ಪಕ್ವಗೊಂಡಿದ್ದವು. "ನೋಡಮ್ಮಾ, ಇನ್ನೂ ಪಕ್ವವಾಗಬೇಕೆಂಬ ಆತುರದ ಸ್ಥಿತಿ ಇದ್ದಾಗ ಸೂರ್ಯನ ಕಡೆಗೆ ಮುಖ. ಪಕ್ವವಾದ ಬಳಿಕ ತನ್ನಲ್ಲಿಯೇ ತನ್ಮಯತೆ". ಹಾಗೆಯೇ ಮುಮುಕ್ಷು ಸಾಧಕಾವಸ್ಥೆಯಲ್ಲಿರುವಾಗ ದೇವರು ಎಲ್ಲಿ ಎಲ್ಲಿ? ಎಂದು ಅಳಿಸಂಕುಳ, ಮಾಮರ, ಬೆಳದಿಂಗಳು, ಕೋಗಿಲೆ ಎಲ್ಲೆಡೆ, ಅರಸುವನು. ಅನಂತರ ಪಕ್ವವಾದಾಗ ತನ್ನಲ್ಲೇ ತಾನು ಕಂಡುಕೊಂಡು "ಎನ್ನಲ್ಲಿ ನೀನಿರುವೆ" ಎಂದು ಅಂತರ್ಮುಖಿನಾಗುವನು, ತನ್ಮಯ ಸ್ಥಿತಿ ಪಡೆಯುವನು.

ಮಧ್ಯಾಹ್ನ ೨-೩೦ ಗಂಟೆ. ೨೩-೯-೭೭



ಗ್ರಂಥ ವಿಮರ್ಶೆ

ಪರಮ ಪೂಜ್ಯ ಮಾತಾಜಿಯವರಿಗೆ,

ಅಧ್ಯಾತ್ಮದ ಅಡಿಯಲ್ಲಿಯೇ ಜೀವನ ಸಾಗಿಸುವವರೂ ಕಾದಂಬರಿ ಬರೆಯುವರೆಂದರೆ ತುಂಬಾ ಆಶ್ಚರ್ಯಕರ ಸಂಗತಿಯಾಗಿತ್ತು. ಯಾಕೆಂದರೆ, "ಶಿವಜೀವಿಗಳು ಕೂಡಾ ಲೇಖನ ವ್ಯವಸಾಯ ಮಾಡುವರು. ಮಾಡಿದರೂ ಅವರ ಕೃತಿಗಳು ಪಾರಮಾರ್ಥಿಕ ವರ್ತುಲಕ್ಕೆ ಸೀಮಿತವಾಗಿರುತ್ತವೆ" ಎಂದು ಭಾವಿಸಿದ್ದೆ. ಅಂದರೆ ಯಾವುದಾದರೂ ಶಿವಶರಣರಿಗೆ ಸಂಬಂಧಿಸಿದ ಕತೆ-ಕಾವ್ಯ ಬರೆಯುವುದು, ಧರ್ಮ ಗ್ರಂಥಗಳ ಕೈಪಿಡಿ ಬರೆಯುವುದು, ಅನುಭಾವಿಗಳ ಅಮರವಾಣಿಗಳಿಗೆ ಟೀಕೆ-ಟಿಪ್ಪಣಿ ಬರೆಯುವುದೆಂದು ಭಾವಿಸಿದ್ದೆ.

ತಮ್ಮ "ಹೆಪ್ಪಿಟ್ಟ ಹಾಲು" ಹೊರ ಜಗತ್ತಿಗೆ ಕಾಲಿರಿಸಿದಂದಿನಿಂದ ಅದರ ಪುಟಗಳನ್ನು ಮಗುಚಿಹಾಕಬೇಕೆಂಬ ಲವಲವಿಕೆ ಮೂಡಿತ್ತು. ಆದರೆ ಆ ಕೃತಿ ಇದುವರೆವಿಗೂ ನನ್ನ ಕೈ ಸೇರಲಿಲ್ಲ. ಕಾರ್ಯಬಾಹುಳ್ಯದ ಮೂಲಕ, ಸಮಯ ಅಭಾವದ ಮೂಲಕ, ನನಗೆ ಅದರಲ್ಲಿ ಕಣ್ಣೋಡಿಸುವುದು ಆಗಿರಲಿಲ್ಲ. ಈಗ ತಾನೇ ಅದನ್ನು ಓದಿ ಅದರಲ್ಲಿರುವ ಮಕರಂದವನ್ನು ಈಂಟುವ ಸುಸಂಧಿ ಒದಗಿ ಬಂದಿತು.

ಕಾದಂಬರಿ ಎಂದರೆ, 'ಸಾಮಾನ್ಯವಾಗಿ ಸಮಾಜದಲ್ಲಿ ನಡೆಯುವ ಘಟನೆಗಳನ್ನೇ ಅಲ್ಪಸ್ವಲ್ಪ ಮಾರ್ಪಾಟು ಮಾಡಿ ರಸವತ್ತಾಗಿ ಬರೆದು ಓದುಗರಿಗೆ ಉಣಬಡಿಸುವದು. ಅದನ್ನು ಹೆಚ್ಚಾಗಿ ತಾರುಣ್ಯ ತುಂಬಿದ ತರುಣ ತರುಣಿಯರು ಓದುವರು' ಎಂಬುದು ಸಾಮಾನ್ಯ ನಂಬಿಗೆಯಾಗಿದೆ. ಅದರಲ್ಲಿ ಅಶ್ಲೀಲತೆಯ ಅಟ್ಟಹಾಸವು ಸೀಮಿತವಿಲ್ಲದ ಘಟ್ಟವನ್ನು ಮುಟ್ಟಿರುವದೆಂಬ ಕುರುಡು ಕಲ್ಪನೆಯನ್ನು ಸಂಪ್ರದಾಯಸ್ಥರು

ತಮ್ಮ ವಿಚಾರದ ಸುಳಿಯಲ್ಲಿ ತುಂಬಿಕೊಂಡಿದ್ದಾರೆ. ಸಾಮಾನ್ಯವಾಗಿ ಕಾದಂಬರಿಗಳು ಕಾಮದ ಕಲುಷಿತ ಹಾದಿಯನ್ನೇ ಅನುಸರಿಸುತ್ತವೆ. ಆದರೆ ತಮ್ಮ ಕಾದಂಬರಿಯು ಪಾರಮಾರ್ಥಿಕದ ಪರಿಮಳದ ಪಥವನ್ನು ಅನುಸರಿಸಿದೆ. ತಮ್ಮ ಕಾದಂಬರಿಗೂ ಅನ್ಯರ ಕಾದಂಬರಿಗೂ ಆನೆ-ಆಡುಗಳ ತಾರತಮ್ಯ. ನವ ಪೀಳಿಗೆಯು ಕಾದಂಬರಿಯನ್ನು ಓದುವುದು ಹೆಚ್ಚೆಂಬ ಮಾತನ್ನು ತಾವು ಗಮನದಲ್ಲಿರಿಸಿಕೊಂಡೇ "ಹೆಪ್ಪಿಟ್ಟ ಹಾಲನ್ನು" ರಚಿಸಿರಬೇಕು. ಕಾದಂಬರಿಯ ಮೂಲಕವೂ ಪಾರಮಾರ್ಥಿಕ ವಿಚಾರಗಳನ್ನು ಪ್ರವಹಿಸಬಹುದಾಗಿದೆ ಎಂಬ ತಮ್ಮ ನೂತನ ಹೆಜ್ಜೆಯು ದಾರ್ಶನಿಕರಿಗೆ ಆದರ್ಶವಾಗಿದೆ. ಕಾದಂಬರಿಯಲ್ಲಿ ಅಶ್ಲೀಲತೆಯ ಮೈಲಿಗೆಯು ಬಹುದೂರವಾಗಿದೆ. ಮಲತ್ರಯಗಳಿಂದ ಆವೃತವಾದ ಮನಸ್ಸು ಮರ್ಕಟನ ಹಾಗೆ ಸ್ವಚ್ಛಂದವಾಗಿ ವಿಹರಿಸಲು ಇಲ್ಲಿ ಅವಕಾಶವಿಲ್ಲದಾಗಿದೆ. ಮಾಯೆಯಿಂದ ಮುಚ್ಚಿದ ಮನಸ್ಸನ್ನು ಸುಷುಪ್ತಾವಸ್ಥೆಗೆ ಕರೆದೊಯ್ಯುವ ಸುವಿಚಾರಗಳ ಸಂಯೋಗವಿದೆ.

ಇಲ್ಲಿ **ಜಂಗಮರನ್ನು** ತೃಪ್ತಿಪಡಿಸುವ ಹಾಗೂ ಪೂಜೆಯ ವಿಧಾನಗಳಿಗೂ ಅವಕಾಶವಿದೆ. ಆಹಾರ ಮತ್ತು ಪ್ರಸಾದಗಳ ತಾರತಮ್ಯವು ಜನರ ಮೇಲೆ ಒತ್ತರಿಸುವಂತೆ ಬಿತ್ತರಿಸಿದ್ದೀರಿ. ನವನಾಗರಿಕರು Dignityಗಾಗಿ ಚೆಲ್ಲುವ ಅನ್ನದ ಅಗುಳಿನ ವಿಷಯವು ಎಂತಹವರನ್ನೂ ತಲೆ ತಗ್ಗಿಸುವಂತೆ ಮಾಡುತ್ತದೆ. ಕರಡಿಕಟ್ಟು, ಬಾಬ್ ಕಟ್ಟು, ಅಜಂತಾ ತುರುಬು, ಬೇಲೂರು ಶಿಲಾಬಾಲಿಕೆಯರ ತುರುಬಿನ ವಿಷಯವೂ ಅಷ್ಟೇ ! ಕುಂಭ ಸಹಸ್ರ ವಿಷಯದೊಳಗೆ ಬಿಂಬಿಸಿ ತೋರುವ ಸೂರ್ಯನೊಬ್ಬನಿರುವಂತೆ, ಸಕಲ ಲೋಕಕ್ಕೂ ದೇವನೊಬ್ಬನೆ, ದೇವನೊಬ್ಬ ನಾಮ ಹಲವು, ಪರಬ್ರಹ್ಮನಲ್ಲದೇ ಅಖಿಲಲೋಕಕ್ಕೆ ಒಡೆಯನಿಲ್ಲವೆಂಬುದನ್ನು; ದೇವ ಬೇರೆ, ದೇವತೆಗಳು ಬೇರೆ ಎಂಬ ವಿಚಾರಸರಣಿಯನ್ನು ಶ್ರೀ ಮಾತಾಜಿಯವರು ವ್ಯಕ್ತಮಾಡಿದ ಮಾತಿನಿಂದ ಇಡೀ ಸಮಾಜವೇ ಜಾಗ್ರತಗೊಳ್ಳಬೇಕು. ಶಕ್ತಿವಿಶಿಷ್ಟಾದ್ವೈತದ ವೈಶಿಷ್ಟ್ಯಪೂರ್ಣ ತತ್ವಗಳು ಇದರಲ್ಲಿ ಆಗಾಗ ಇಣುಕಿರುವದು ಕೃತಿಗೆ ಆಳವನ್ನು ತಂದುಕೊಟ್ಟಿದೆ. ಸನ್ನಿವೇಶ ಸರಾಗವಾಗಿ ಸಾಗಿರುವಾಗ ಸನ್ನಿವೇಶಕ್ಕನುಗುಣವಾಗಿ ಅಕ್ಕನ ಅಮರವಾಣಿಯನ್ನೋ, ಅಣ್ಣನ ಅನುಭವ ವಾಣಿಯನ್ನೋ, ಸರ್ವಜ್ಞನ ಉಜ್ವಲ ಉಕ್ತಿಗಳನ್ನೋ, ಜಾಣ್ಣುಡಿ, ನಾಣ್ಣುಡಿಗಳನ್ನೋ ಬಳಸಿರುವುದರಿಂದ ನೊರೆಹಾಲಿಗೆ ಸಕ್ಕರೆಯ ಮಳಲನ್ನು ಬೆರೆಸಿದಂತಾಗಿದೆ.

ಇಲ್ಲಿ ವನಿತೆಯರಿಗೊಂದು ವೈಶಿಷ್ಟ್ಯಪೂರ್ಣ ಸ್ಥಾನವಿದೆ. ಸ್ತ್ರೀಯ ಸ್ಥಾನಮಾನಗಳು ಸಂಸಾರದಲ್ಲಷ್ಟೇ ಸೀಮಿತವಾಗಿರದೇ ಅವರು ಪಾರಮಾರ್ಥಿಕದಲ್ಲಿ ನುಗ್ಗಬಹುದಾಗಿದೆ. ಗಂಡನನ್ನೇ ತನ್ನ ಹಿಂದೆ ಎಳೆದೊಯ್ಯಬೇಕಾಗಿದೆ. "ಬಿಂದು ಮೂತ್ರಗಳೆರಡು ಒಂದೇ ನಾಳದಿ ಟಕ್ಕು, ಒಂದ ಬಿಟ್ಟೊಂದು ತಡೆದರೆ ಪರಬ್ರಹ್ಮನಕ್ಕು" ಎಂಬ

ಸರ್ವಜ್ಞನ ಉಕ್ತಿಯನ್ನು ನೆನೆಸಿಯೇ ಈ ಕಾದಂಬರಿಯನ್ನು ರಚಿಸಿರಬೇಕು. 'ಇಂದ್ರಿಯವನ್ನು ಕಾದಾತ ಚಂದ್ರನಂತಿಕ್ಕು' ಎಂಬ ಮಾತನ್ನು ಇಲ್ಲಿ ಪುಷ್ಟೀಕರಿಸಲಾಗಿದೆ. ಬಿಂದುಕಾದರೆ ತೇಜಸ್ಸು ಓಜಸ್ಸು ಬೆಳೆದು ಪಾರಮಾರ್ಥಿಕಕ್ಕೆ ಅಲುಗದ ಅಡಿಪಾಯವಾಗುವದೆಂಬ ವಿಷಯ ದಂಗು ಬಡಿಸುವಂತಾಗಿದೆ. ಸ್ತ್ರೀಯರೂ ಹಿಂದೆ ಆಗಿಹೋದ ಶರಣೆಯರಂತೆ, ತಮ್ಮ ಜೀವನವನ್ನು ಉರಿಯುಂಡ ಕರ್ಪುರದಂತೆ ಉರಿಸಿ ಮುಕ್ತಿಕ್ಷೇತ್ರಕ್ಕೆ ಸಲೀಸಾಗಿ ಹೋಗುವ ಸಹಜ ಮಾರ್ಗವನ್ನು ಇಲ್ಲಿ ಕಲ್ಪಿಸಿರುವುದರಿಂದ ಇದು ಕಾಮಿನಿಯರಿಗೆ ಕೈವಲ್ಯದ ಕಾಮಧೇನುವಾಗಿದೆ! ಇಲ್ಲಿ ಸ್ತ್ರೀಯನ್ನು ಕಾಮದ ಕೈಗೊಂಬೆಯನ್ನಾಗಿಸದೇ ಪಾರಮಾರ್ಥಿಕದ ಪುತ್ಥಳಿಯನ್ನಾಗಿ ಇರಿಸಲಾಗಿದೆ.

ಆಗೊಮ್ಮೆ ಈಗೊಮ್ಮೆ ನವಿಲು ನೃತ್ಯಮಾಡುವಂತೆ ಮನಃಶಾಸ್ತ್ರವೂ ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸಿಕೊಂಡಿದೆ. ಬೆಳಗಿನ ಜಾವದಲ್ಲಿ ಓದಿದರೆ ನೆನಪುಳಿಯುವ ಸಂಗತಿಯನ್ನು ಸಾಮಾನ್ಯವಾಗಿ ಸ್ಪಷ್ಟೀಕರಿಸಿದರೆ, ಇಲ್ಲಿ ರಾತ್ರಿ ಮಲಗುವಾಗ ಓದಿದರೆ ನೆನಪುಳಿಯುವದೆಂಬುದನ್ನು ಪುಷ್ಟೀಕರಿಸಲಾಗಿದೆ. ರಾಜನ್ನರ ವ್ಯಕ್ತಿತ್ವವಂತೂ ಅಪೂರ್ವ. ಅವರ ಉದಾತ್ತ ವಿಚಾರಗಳಿಂದ ಕೆಟ್ಟು ದೂರ ಸರಿದ ಅನೇಕ ಸಂಸಾರಗಳೂ ಗಟ್ಟಿಕೊಂಡು ಸಮೀಪಿಸಲೇಬೇಕು.

ಇದರಲ್ಲಿ ಬಳಸಿರುವ ಸಾಹಿತ್ಯವನ್ನು ಕಂಡು ಎಂತಹ ಜಾಣ್ಮೆಯುಳ್ಳವನೂ ಹೌದೆಂದು ತಲೆಯಲ್ಲಾಡಿಸಬೇಕು. ಅದು ಸಾಹಿತಿಗಳಿಗೆ ಹಬ್ಬದ ರಸದೂಟ! ನಿಜಕ್ಕೂ ಮಾತೆಯವರೇ, ತಾವು ಪಾರಮಾರ್ಥಿಕದ ಪವಿತ್ರ ದೇವತೆ. ಅಷ್ಟೇಅಲ್ಲ, ಸರಸ ಸಾಹಿತ್ಯದ ವರದೇವತೆಯೂ ಹೌದು. ಈ ಕೃತಿಯಲ್ಲಿ ಬಂದಿರುವ ಸನ್ನಿವೇಶಗಳ ಜೋಡಣೆಯ ಜಾಣ್ಮೆಯು ಎಂತಹವರನ್ನೂ ಮಂತ್ರ ಮುಗ್ಧರನ್ನಾಗಿ ಮಾಡುತ್ತದೆ, ಬೆಚ್ಚಿ ಬೆರಳು ಕಚ್ಚುವಂತೆ ಮಾಡುತ್ತದೆ. "ಜಾಣೆನೊಳು ವಾಣಿಗಿಮ್ಮಿಗಿಲು" ಎಂಬ ಕವಿಯ ಉಕ್ತಿಗೆ ತಾವು ಅರ್ಹರು. ದೇಹವುಳ್ಳಲ್ಲಿ ಪುಣ್ಯವ ಪಡೆವುದೇ ಲೇಸೆಂಬ ಸಿದ್ಧಾಂತವನ್ನೇ ಆದರ್ಶವಾಗಿಟ್ಟುಕೊಂಡ ತಾವು ಇತರರನ್ನೂ ತಮ್ಮ ಆದರ್ಶದಲ್ಲಿ ಕರೆದೊಯ್ಯಲು ಯತ್ನಿಸಿದ್ದು ಸಂತೋಷದ ಸಂಗತಿ. 'ಮೌನದ ಜಿಂಕೆಯನ್ನು ಮಾತಿನ ಬಾಣದಿಂದ ಭೇದಿಸಿದರು'. 'ಉಂಡು ಒಗೆದ ಅಗುಳಿಗೆ ಕಾಗೆಗಳು ಮುತ್ತುವಂತೆ. ಪರೀಕ್ಷೆ ಮುಗಿದೊಡನೆಯೇ ವಿಚಾರಗಳು ಮುತ್ತಿದವು'. 'ಗಂಡ ಹೆಂಡತಿಯೆಂದರೆ ಗಂಡಭೇರುಂಡ ಪಕ್ಷಿಯಂತಿರಬೇಕು' 'ಬೆಂಕಿಯ ಸಮೀಪದಲ್ಲಿರಿಸಿದ ಹೂವಿನಂತೆ' 'ತಾಯಿ ಮಹಾ ತ್ಯಾಗಮಯಿ' ಇಂತಹ ಅನೇಕ ಸೊಬಗಿನ ಸಾಹಿತ್ಯದ ಉಕ್ತಿಗಳನ್ನು ಉಪಯೋಗಿಸಿ, ಶೃಂಗಾರ ರಸದಲ್ಲಿ ತೇಲುವಂತೆ ಮಾಡಿರುವಿರಿ.

ಆಧ್ಯಾತ್ಮದ ಚರಮ ಗುರಿಯನ್ನು ಸಾಧಿಸಬೇಕೆಂದು ಕಾತರಿಸಿದ ಕಲ್ಯಾಣಿಯ ಜೀವನ ಮೊದಲು ಕಾದಾರಿದ ಹಾಲಿನಂತಾಗಿದ್ದು, ಆ ಜೀವನದ ಹಾಲಿನಲ್ಲಿ ಕುಸುಮ

ಳೆಂಬ ಮಜ್ಜಿಗೆ ಬಿದ್ದಾಗ ಅವಳಿಗಾದ ಕಷ್ಟದ ಪ್ರಸಂಗವನ್ನೋದಿದರೆ ಎಂತಹ ಕಲ್ಲೆದೆಯ ಕಟುಕನ ಕಣ್ಣಿನಲ್ಲಿಯೂ ನೀರು ಬರದೇ ಇರದು. ಓದುಗನು ಓದುತ್ತಾ ಓದುತ್ತಾ ತನ್ನ ನಿಜವನ್ನೇ ಮರೆತು ಭಾವನಾ ಲೋಕದಲ್ಲಿಯೇ ಮುಳುಗಿಬಿಡುವನು. ಇಂತಹ ಸ್ವಾರಸ್ಯಮಯ ಕಾದಂಬರಿಯು ಚಿತ್ರರಂಗವನ್ನು ಪ್ರವೇಶಿಸಿದರೆ ಇನ್ನೂ ಹೆಚ್ಚಿನ ಕಳೆ ಬಂದೀತು! ಅಂತಹ ಸುದೈವವು "ಹೆಪ್ಪಿಟ್ಟ ಹಾಲಿಗೆ" ಒದಗಲೆಂದು ಸರ್ವಾಂತರ್ಯಾಮಿಯೂ, ಸರ್ವೇ ಸಮರ್ಥನಾದವನೂ ಆದ ಪರಮೇಶ್ವರನಲ್ಲಿ ಪ್ರಾರ್ಥಿಸುವೆ.

ಎದುರು ಬದುರು ನಿಂತು ಮಾತನಾಡಿದರೆ ನಾಲ್ಕು ಮಾತಿನಿಂದ, ದೂರವಿದ್ದರೆ ಅವರ ಲೇಖನಿಯ ನಾಲ್ಕು ಸಾಲಿನಿಂದ, ಅವರ ವ್ಯಕ್ತಿತ್ವವನ್ನೇ ಅಳೆಯಬಹುದೆಂಬ ಮಾತು ಶಾಶ್ವತ ಸತ್ಯ. ಹಾಗೆ ನಾನು ತಮ್ಮೀ ಕೃತಿಯನ್ನು ಓದಿದಾಗ ಅದರಲ್ಲಿ ಬರುವ ಮಾನವೀಯತೆ ಧೀಮಂತಿಕೆಯ ಪ್ರತೀಕವಾದ ಯೋಗಿಣಿಯ ಚಿತ್ರ ಓದುತ್ತ ಹೋದಂತೆಲ್ಲಾ ತಮ್ಮ ಇಡೀ ಜೀವನ ಚರಿತ್ರೆಯೇ ಗೊತ್ತಾದಂತಾಯಿತು. ಅಷ್ಟೇ ಅಲ್ಲ ಆದಿಯಿಂದ ಮುಡಿಯವರೆವಿಗೂ ನೋಡಿದಂತೆ ಭಾಸವಾಯಿತು. ಪಾರಮಾರ್ಥದ ಭೂಮಿಕೆಯಲ್ಲಿ ಬೆಳೆದ ಸಸಿ ಪಾರಮಾರ್ಥಿಕದ ಬೆಳಸನ್ನು ಕೊಟ್ಟೀತೇ ಹೊರತಾಗಿ ಲೌಕಿಕದ ಬೆಳಸನ್ನೆಂದೂ ಕೊಡಲಾರದೆಂದು ನನ್ನ ಮನಸ್ಸಿಗೇ ನಾನು ಖಾತ್ರಿಮಾಡಿಕೊಂಡೆ.

ಅಶ್ಲೀಲತೆಯ ಅಟ್ಟಹಾಸದ ಘಟ್ಟವನ್ನು ಮುಟ್ಟಿದ ನವನಾಗರಿಕರಿಗೆ ಪಾರಮಾರ್ಥಿಕದ ಪವಿತ್ರ ಪನ್ನೀರನ್ನು ಸಿಂಪಡಿಸಿ ಪವಿತ್ರರನ್ನಾಗಿ ಮಾಡಿ ತಿಳಿಯಾದ ತುಪ್ಪದಂತೆ ಘಮಘಮಿಸುವ ತಮ್ಮ ಘನವಾದ ಉಪದೇಶವನ್ನಿತ್ತು ಉದ್ಧಾರ ಮಾಡಲು ಯತ್ನಿಸಿದ ತಮ್ಮ ಚರಣಕ್ಕೆ ಅನಂತ ಶರಣಾರ್ಥಿಗಳು.

—ತಮ್ಮ ಚರಣ ಸೇವಕ,
ವೀರಯ್ಯ, ಶಿಕ್ಷಕ, ಹೊಗರ್ನಾಳು.

ಬೇಗನೆ ಮೀಯಿರಿ ತರಂಗಿಣಿಯಲ್ಲಿ

ಅಕ್ಕಮಹಾದೇವಿಯನ್ನು ಕುರಿತು ಪೂಜ್ಯ ಮಾತೆಯವರು ರಚಿಸಿದ ೬೦೦ ಪುಟಗಳ ಬೃಹತ್ ಕಾದಂಬರಿ "ತರಂಗಿಣಿ". ಮನೋಜ್ಞ ಶೈಲಿ, ಹೃದಯ ಸ್ಪರ್ಶಿ ಘಟನೆಗಳು, ವೀರ ವಿರಾಗಿಣಿಯ ಬದುಕನ್ನು ಬಗೆದುನೋಡುವ ಅಪೂರ್ವ ಪ್ರಯತ್ನ.

ಮಿಂದು ಹೊರಬಂದಾಗ ಪುನರ್ಜಾತರಾದ ಅನುಭವ ಓದುಗರಿಗೆ.

ತರಂಗಿಣಿ: ಬೆಲೆ ೩೩ ರೂ. ತಡಮಾಡದೆ ಹಣ ಕಳಿಸಿರಿ.



ಹಿಂದಿನ ಸಂಚಿಕೆಯವರೆಗೆ—

(ತತ್ತ್ವ ಪ್ರಸಾರ-ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆಯವರು ೧೯೭೬ ಮೇ ೧೪ ರಂದು ತಾಯ್ನಾಡಿನಿಂದ ತೆರಳಿದರು. ಡಾ॥ ಅರುಣಕುಮಾರ್ ಮತ್ತು ಶ್ರೀದೇವಿ ಸ್ವಾಗತಿಸಿ ಉತ್ತರ ಲಂಡನ್‌ನಲ್ಲಿದ್ದ ತಮ್ಮ ಪರಿಚಿತರಲ್ಲಿ ಆತಿಥ್ಯದ ವ್ಯವಸ್ಥೆ ಮಾಡಿ, ತಮ್ಮ ಕರ್ತವ್ಯಕ್ಕೆ ಮರಳಿದ್ದಾರೆ. ಅತಿಥೇಯಳು, ದೆವ್ವದಂಥಾ ಬೃಹತ್ ಬಂಗಲೆಯಲ್ಲಿ, ಮಾತೆಯವರನ್ನು ಬಿಟ್ಟು, ಸಿನಿಮಾಕ್ಕೆ ಹೋಗಿದ್ದಾಳೆ. ಅಂಥ ಬೃಹತ್ ಬಂಗಲೆಯಲ್ಲಿ, ಏಕಾಂಗಿಯಾಗಿ ಇರಲು ಆತಂಕಗೊಂಡ ಮಾತೆಯವರು, ಪೂರ್ವ ಪರಿಚಿತಳಾದ ಉಮಾ ಮಹೇಶ್ವರಿಯನ್ನು ಅರಸಿಕೊಂಡು ಲಂಡನ್ನಿನ ಉಪನಗರ ಹ್ಯಾಮ್‌ಸ್ಟೆಡ್‌ಗೆ ಬಂದು, ವಿಳಾಸ ಹಿಡಿದು ಹುಡುಕಿದಾಗ ಉಮಾ ರೂಮನ್ನು ಕೀಲಿಸಿ ಎಲ್ಲಿಯೋ ಹೋಗಿರುವಳು. ಎದುರು ಕೋಣೆಯ ತರುಣಿ ಪಟಪಟನೆ ಉಮಾಳು ರಾತ್ರಿ ಹತ್ತಕ್ಕೆ ಬರುವ ಸುದ್ದಿ ಹೇಳಿ, ಬಾಗಿಲಿಕ್ಕಿಕೊಂಡು ಗೂಡು ಸೇರಿದ್ದಾಳೆ).

ಧಾರಾವಾಹಿ-೩. ದಿ. ೧೫-೫-೭೬ **ಜಗದ್ಗುರು ಮಾತಾಜಿ**

"ಮಾತೆಯವರ ವಾಗ್ಝರಿ ಗಂಗಾ ಪ್ರವಾಹದಂತೆ ಸಲಿಲ, ಜೋಗದ ಜಲಪಾತದಂತೆ ನಿರರ್ಗಳ" ಎಂದು ನನ್ನ ತಾಯ್ನಾಡಿನ ಅನೇಕರು ನನ್ನ ಭಾಷಣವನ್ನು ಆಲಿಸಿದಾಗ ಹರ್ಷಿಸಿ ನುಡಿದುದುಂಟು. ಆದರೀಗ ಆ ವಾಕ್‌ಧಾರೆ ಕಲಬುರ್ಗಿಯ ನಲ್ಲಿ ನೀರಿನಂತೆ ಆಗಿತ್ತು; ಸದಾ ಜಲಕ್ಷಾಮ, ವರ್ಷಾಧಾರೆಯ ಕೊರತೆಯನ್ನೆದುರಿಸುವ ಆ ನಾಡಿನಲ್ಲಿ ನೀರು ಧಾರಾಕಾರವಾಗಿ ಬರುವುದೆಲ್ಲಿಂದ ಬಂದೀತು! ನನ್ನ ನಾಲಿಗೆ ಬತ್ತಿದುದು ಭಯದಿಂದಲ್ಲ, ನಿಸ್ಸಹಾಯಕತೆಯಿಂದಲ್ಲ, ಅನುಕಂಪದಿಂದ. ಅಲ್ಲಿಯ ಜನರ ನೀರಸ ಬದುಕನ್ನು, ಕುತೂಹಲವೇ ಸತ್ತ ಮನೋಭಾವವನ್ನು, ಉಳಿದೆಲ್ಲರಿಂದ ತಾವು ಸಿಡಿದು ನಿಂತವರೋ ಅಥವಾ ಕೊಂಡಿ ಕಳಚಿ ಜಾರಿದವರೋ ಎಂಬ ಉದಾಸೀನವನ್ನು ಕಂಡು ಎದೆಯಲ್ಲಿ ತಳಮಳವಾಯಿತು. ಇವರ ಬಗ್ಗೆ ನನಗೇಕಿರಬೇಕು ಕಳಕಳಿ? ಪ್ರಶ್ನೆ ಸರಿದಾಡಿತು ತಲೆಯಲ್ಲಿ, ಹುಳುವಿನಂತೆ. ಏಕಿರಬಾರದು? ಇಂತಹ ತುಂಡು ತುಂಡಾದ ಸಮಾಜದಲ್ಲಿ ಬದುಕು ಹೂವಿನ ಮಾಲೆಯಾಗದೆ ಮುಳ್ಳಿನ ಜಾಲವಾಗದೆ?

ನಮ್ಮ ಸಮಾಜಗಳಲ್ಲಿ ಎಳೆಗಳೆಲ್ಲ ಸಿಕ್ಕಾಪಟ್ಟೆ ಸೇರಿ ಗೋಜಲು ಗೋಜಲಾದ ವಾತಾವರಣ ಎನಿಸಿದರೆ, ಅಲ್ಲಿ ಮಗ್ಗದ ಮೇಲೆ ನೇರವಾಗಿ ಎಳೆಗಳನ್ನು ಹಾಸಿಟ್ಟಂತೆ, ಇನ್ನೂ ಅಡ್ಡ ಎಳೆಗಳು ಹಾಯ್ದು ಸೀರೆಯ ರೂಪ ಬಂದಿರದ ಸ್ಥಿತಿ. ನೋಡಲೇನೋ ಬಹು ಚಂದ ಮಗ್ಗದ ಮೇಲಿನ ಹಾಸಿದ ಬಿಡಿಬಿಡಿ ಎಳೆಗಳು, ಆದರೆ ಅವಿನ್ನೂ ಎಳೆಯೇ ವಿನಾ ಅಖಂಡ ವಸ್ತ್ರವಲ್ಲ. ಏನೇ ಇರಲಿ, ನಮ್ಮವರೇ ವಾಸಿ, ಕಷ್ಟ-ಸುಖದಲ್ಲಿ ಪಾಲುಗಾರರಾಗುವ ಮನೋವೃತ್ತಿಯುಳ್ಳವರು.

ಹೀಗೆ ತಲೆಯ ವನದಲ್ಲಿ ವಿಚಾರದ ದುಂಬಿ ಗುಂಯ್ಗುಡುತ್ತ ಸುಳಿಯುತ್ತಿದ್ದುದರಿಂದ ಸಮಯ ಸರಿದ ಅರಿವೇ ಆಗಿರಲಿಲ್ಲ. ಎರಡು ನಾಡುಗಳ ಸಂಸ್ಕೃತಿ, ಜನರ ದೃಷ್ಟಿಕೋನದ ತೌಲನಿಕ ಅಧ್ಯಯನ ಮತಿಯ ತತ್ತ್ವಶಾಲೆಯಲ್ಲಿ ನಡೆದಿತ್ತು. ಅಷ್ಟರಲ್ಲಿ ಒಂದು ವಿಚಿತ್ರ ಮತ್ತು ಕರ್ಕಶ ಶಬ್ದ ಆರಂಭವಾಯಿತು. ಯಾವುದೋ ಯಂತ್ರ ಭರ್ ಎನ್ನುತ್ತಲಿರುವಾಗಲೇ ಬಾಗಿಲು ತೆರೆಯಿತು. 'ಆ ಹೆಣ್ಣು ಬಾಗಿಲನ್ನು ತೆರೆದು ಆ ನಿರ್ಜೀವ ಪ್ರಾಣಿಯನ್ನು ನೆಲದ ಹಾಸಿನ ಮೇಲೆ ಓಡಾಡಿಸ ತೊಡಗಿದಳು. ಅದು ಕಸ ಗುಡಿಸುವ ಹೂವರ್ ಯಂತ್ರ. ಅದರ ಭಯಾನಕ ಸದ್ದಿಗೆ ಬೆಕ್ಕುಗಳು ಸಹ ಗಾಬರಿಯಾಗಿ ಹೊರಗೆ ಓಡುತ್ತಿದ್ದವು. ನಾನು ಸನ್ನೆ ಮಾಡಿ ಅದನ್ನು ನಿಲ್ಲಿಸಲು ಹೇಳಿದೆ. "ಇಲ್ಲಿ ನೋಡಿ ಮಿಸ್; ಉಮಾಳು ಬರುವ ತನಕ ನಾನು ಎಲ್ಲಿರಬೇಕೆಂಬ ಸಮಸ್ಯೆ! ರೆಸ್ಟ್ರಾಂಟಿನಲ್ಲೋ, ಪಾರ್ಕಿನಲ್ಲೋ ಕುಳಿತಾಗಲೀ ರಸ್ತೆಯಲ್ಲಿ ಅಡ್ಡಾಡುತ್ತ ಕಾಲಸವೆಸುವುದಾಗಲೀ ನನಗೆ ಒಗ್ಗದ ವಿಷಯ. ಇಂಥ ದೊಡ್ಡದೊಂದು ಮನೆಯಲ್ಲಿ ಸಂದರ್ಶಕರು, ಅತಿಥಿಗಳು ಬಂದು ಕುಳ್ಳಿರಲು ಸಾಮೂಹಿಕ ಸಭಾಂಗಣ ಸಹ ಇಲ್ಲ. ಒಂದು ಕುರ್ಚಿಯಿಲ್ಲ. ನಿಮಗೇನೂ ತೊಂದರೆಯಾಗದಿದ್ದರೆ ನಾನು ಒಳಗೆ ಕುಳಿತುಕೊಳ್ಳುವೆ." ನಾನಾಗಿ ಮಾತನಾಡದಿದ್ದರೆ, ಕೇಳದಿದ್ದರೆ ಮಾರ್ಗವಿಲ್ಲವೆಂದು ಧೈರ್ಯವಹಿಸಿದೆ. ದನಗಳಲ್ಲಿ ಎರಡು ಪ್ರಕಾರ. ಕೆಲವು ನಾಲಿಗೆ ಶಬ್ದಕ್ಕೆ ಓಡುವವು, ಕೆಲವು ಬಾಲ ಮುರಿದಾಗ ಓಡುವವು, ಮತ್ತೆ ಕೆಲವು ಬಾರುಕೋಲಿನ ಏಟು ಬಿದ್ದಾಗ ಓಡುವವು. ಹಾಗೆಯೇ ಮನುಷ್ಯರು ಮೂರು ವಿಧ ಸಾತ್ವಿಕ, ರಾಜಸ, ತಾಮಸ. ಸಾತ್ವಿಕರು ಪರಿಸರವನ್ನು ನೋಡುತ್ತಲೇ ಅರ್ಥಮಾಡಿಕೊಂಡು ಸಹಾಯ ಮಾಡುವವರು, ರಾಜಸರು ಬಾಯಿ ಬಿಟ್ಟು ಕೇಳಿದಾಗ ಮುಂದರಿವವರು, ತಾಮಸರಿಗೆ ಒತ್ತಡ ಹೇರಿದಾಗ ಉಪಕಾರ ಮಾಡಲು ಮುಂದಾಗುವವರು.

ಅಂತೂ ಆ ಮಹಿಳಾಮಣಿ ಎರಡನೆ ವರ್ಗಕ್ಕೆ ಸೇರಿದವಳು. ಆಗ ಮುದ್ದು ನಗೆ ನಕ್ಕು ಕೆಂದುಟಿಗಳನ್ನು ಬಿಡಿಸಿ ನುಡಿದಳು :

"ಬನ್ನಿ, ಬನ್ನಿ. ಸಂತೋಷ...." ಒಳಕ್ಕೆ ಆಹ್ವಾನಿಸಿ ಸೋಫಾ ತೋರಿದಳು. ಆಕೆ ಸಮಾಜದ ಸಾಮಾನ್ಯ ವರ್ಗ ಸಣ್ಣ ಕೋಣೆಯಲ್ಲೇ ತುಂಬಾ ಅಚ್ಚುಕಟ್ಟುತನ.

ದವರ ಸಾಲಿಗೆ ಆರ್ಥಿಕವಾಗಿ ಸೇರಿದವಳು. ಆದರೂ ನಮ್ಮಲ್ಲಿನ ಮಧ್ಯಮ ವರ್ಗದ
ವರ ಮನೆಗಿಂತಲೂ ಹೆಚ್ಚಿನ ಸಂಪತ್ತು, ಸಲಕರಣೆ. ನಮ್ಮ ಹೆಂಗೆಳೆಯರ ಶ್ರೀಮಂತಿಕೆ
ಅವರುಡುವ ಬಟ್ಟೆ–ಬರೆ, ಧರಿಸುವ ಆಭರಣಗಳಲ್ಲಿ. ಆ ನಿರಾಭರಣೆಯರು ತಮ್ಮ
ಸಂಪತ್ತನ್ನು ಪ್ರದರ್ಶಿಸುವುದು ಗೃಹೋಪಕರಣಗಳ ಜೋಡಣೆಯಲ್ಲಿ.

"ನಾವು ಬಾಗಿಲನ್ನು ಮುಚ್ಚಿಕೊಂಡು ಕುಳಿತರೆ ಉಮಾಳಿಗೆ ನಾವು ಬಂದ ವಿಷಯ
ತಿಳಿಯುವುದು ಹೇಗೆ? ಬಾಗಿಲನ್ನು ತೆರೆದಿಡಿ...." ನಾನು ಸೂಚಿಸಿದೆ.

"ಓ ಹಾಗೆ ತೆಗೆದಿಡುವುದು ಅನಾಗರಿಕತನ. ಇಲ್ಲಿ ಎಲ್ಲರೂ ತಂತಮ್ಮ ಬಾಗಿಲನ್ನು
ಮುಚ್ಚಿರಿಸಬೇಕು."

ಆ ದೇಶದಲ್ಲಿ ಮನೆ ಬಾಗಿಲನ್ನು ಸದಾ ತೆರೆದಿಡುವುದಾಗಲೀ, ಅಥವಾ ತೆರೆದು
ಮನೆ ಮುಂದಿನ ಮೆಟ್ಟಿಲ ಮೇಲೆ ಕುಳಿತುಕೊಳ್ಳುವುದಾಗಲೀ, ಮನೆಯ ಮುಂಬದಿಯಲ್ಲಿ
ಸಮಾವೇಶವಾಗಿ ಹರಟುವುದಾಗಲೀ ಅನಾಗರಿಕತೆ. (ಆದರೆ ರೇಲ್ವೆ ಪ್ಲಾಟ್ ಫಾರ್ಮು,
ಬಸ್‌ನಿಲ್ದಾಣ, ರಸ್ತೆ ಬದಿಗಳಲ್ಲಿ ನಿಂತು ಅಸಹ್ಯವಾಗಿ ತರುಣ–ತರುಣಿಯರು ಮುತ್ತಿಡು
ವುದು ಅನಾಗರಿಕತೆ ಎನಿಸದುದು ಆಶ್ಚರ್ಯ. ಪೌರ್ವಾತ್ಯ ದೇಶಗಳಿಂದ ಬಂದ ಜನ
ಇಂಥ ದೃಶ್ಯ ಕಂಡು ಹೌಹಾರದಿರರು. ಆ ನಾಡಿನ ಹಿರಿಯರಿಗೇನೋ ರೂಢಿಯಾಗಿದೆ.
ಅಂತೆಯೇ ಅವರು ಕಿರಿಯರು ಮಾಡುವ ಪ್ರಣಯ ಚೇಷ್ಟೆ ಕಂಡು ನೋಡಿದರೂ ನೋಡ
ದಷ್ಟು ನಿರ್ಲಿಪ್ತರಾಗಿ ಮುಂದೆ ಹೋಗುತ್ತಾರೆ. ಭಾರತೀಯರಂತೂ ತಲ್ಲಣಿಸುತ್ತಾರೆ.
ಮತ್ತು ಎರಡು ನಾಡುಗಳ ಸಂಸ್ಕೃತಿ–ವ್ಯವಹಾರಗಳ ನಡುವಣ ಕಂದರ ಕಂಡು
ಸೋಜಿಗಪಡುವುದೇ ಅಲ್ಲದೇ ಕೆಲವೊಮ್ಮೆ ಪೇಚಿಗೂ ಸಿಕ್ಕಿಕೊಳ್ಳುತ್ತಾರೆ) ಮುಂಭಾಗ
ಕ್ಕಿಂತ ಹೆಚ್ಚಾಗಿ ಹಿಂದೆ ವಿಸ್ತಾರವಾದ ಕೈದೋಟಗಳಿರುವುದರಿಂದ ಅಲ್ಲಿಯೇ ಕುರ್ಚಿ,
ಶಿಲಾಸನಗಳನ್ನು ಹಾಕಿಕೊಂಡು ವಿಶ್ರಮಿಸುವುದು ಸ್ವಾಭಾವಿಕ. ಹೀಗಾಗಿ, ನಮ್ಮ
ವಠಾರಗಳಲ್ಲಿ, ಹಳೆಯ ಊರಿನ ಭಾಗದಲ್ಲಿ, ಕಿಷ್ಕಿಂದಾ ನಗರದ ರಸ್ತೆಯಲ್ಲಿಯೇ ಜಗುಲಿ
ಗಳ ಮೇಲೆ ಕುಳಿತು ಕಟ್ಟೆ ಕಾನ್‌ಫರೆನ್ಸ್ ಮಾಡುವ ಮಹಿಳಾಗ್ರಣಿಗಳ ಗುಂಪು, ಆ ದೇಶ
ದಲ್ಲಿ ಸ್ವಾಭಾವಿಕವಾಗಿ ಕಾಣಬರದು. ನಮ್ಮ ತಾಯಂದಿರು ಮಾಡುವ ಈ ಕಟ್ಟೆ ಕಾನ್
ಫರೆನ್ಸ್‌ಗಳಿಂದಾಗಿ, ಮತ್ತು ಅವರೇ ವಾಕಿಂಗ್ ನ್ಯೂಸ್‌ಪೇಪರ್ಸ್ ಆಗಿ ಬಿಡುವುದರಿಂದ
"ಸಮಾಚಾರ್" ನವರ ಕೆಲಸದ ಒತ್ತಡ ಕಡಿಮೆಯಾಗಿ, ಎಷ್ಟೋ ವಿಷಯ ಪುಕ್ಕಟ್ಟೆ
ಯಾಗಿ ವಿತರಣೆಯಾಗುವ, ಎಷ್ಟೋ ವಿಷಯಗಳಿಗೆ (ಅಪ) ಪ್ರಚಾರ ದೊರೆಯುವ
ಸಂಭವ ಸೌಲಭ್ಯ ನಮ್ಮಲ್ಲುಂಟು. ಈ ಭಾಗ್ಯ ಆ ಬಿಳಿಯನಾಡಿನವರಿಗೆ ಇಲ್ಲ! ಪಾಪ!

ಸದಾಕಾಲ ಬಾಗಿಲು ಮುಚ್ಚಿರುವುದು, ಆದರಲ್ಲೂ ಸುಪ್ರಭಾತದ ಮಂಗಲ
ಸಮಯದಲ್ಲಿ ಮುಸ್ಸಂಜೆಯ ಸಂಧ್ಯಾಗಮನದ ವೇಳೆಯಲ್ಲಿ ತಲೆ ಬಾಗಿಲು ಮುಚ್ಚಿದ್ದರೆ

ಅದು ಅತ್ಯಂತ ಅಮಂಗಲ ನಮ್ಮವರಿಗೆ. ಬೆಳಗಿನ ವೇಳೆಯಲ್ಲಿ ಯಾವ ಮನೆಯ ಬಾಗಿಲು
ತೆರೆಯದೆ, ಅಂಗಳದ ಕಸ ಬಿದ್ದಿರುವುದೋ ಆ ಮನೆಯ ಗೃಹಿಣಿಯನ್ನು ಆಲಸಿ, ಬೇಜ
ವಾಬ್ದಾರಿಯ ವ್ಯಕ್ತಿ ಎನ್ನುವುದು ಸ್ವಾಭಾವಿಕ. ಎಂತಹ ಗುಡಿಸಲೇ ಇರಲಿ, ಹೊಸ್ತಿ
ಲನ್ನು ಸಾರಿಸಿ, ಅಂಗಳಕ್ಕೆ ನೀರು ಸಿಂಪಡಿಸಿ, ಚಿತ್ತಾರದ ರಂಗವಲ್ಲಿ ಎಳೆದರೆ ಆ ಅಂಗಳ
ನೋಡಲೆಷ್ಟು ನಯನ ಮಧುರ ! ಉಷೆಯು ದೂತೆಯಾಗಿ ಆರತಿ ಹಿಡಿದು ಬರುವಾಗ,
ಅವಳನ್ನು ಹಿಂಬಾಲಿಸಿ ಬರುವ ಸಾರ್ವಭೌಮ ಸೂರ್ಯನ ಹೊಂಗದಿರು ಗಿಡಮರಗಳನ್ನೆ
ಬ್ಬಿಸಿ, ಹೂವುಗಳನ್ನು ನಗಿಸಿ, ಹಕ್ಕಿಗಳ ಕಂಠವನ್ನು ಬಿಸಿ ಮಾಡಿ, ಶ್ರುತಿ ಮಾಡಿ ಹಾಡಿಸಿ
ಸೃಷ್ಟಿಯನ್ನು ಆಲಂಗಿಸಿ ನಲಿಸುವಾಗ ಮನೆಯ ಸುಮಂಗಳೆ ಮಿಂದು ಮಡಿಯುಟ್ಟು,
ಪ್ರಸನ್ನಮುಖಿಯಾಗಿ ಬಳೆಗಳ ಝುಣತ್ಕಾರ ಮಾಡುತ್ತ ಅಂಗಳ ಗುಡಿಸಿ, ನೀರು ಸಿಂಪ
ಡಿಸಿ, ಸೂರ್ಯನ ಕಿರಣಗಳ ಹೊಂಬಣ್ಣದ ಅವಕುಂಠನದಲಿ ನಸುನಗೆಯನ್ನು ಲಾಸ್ಯವಾ
ಡಿಸುತ್ತ ಸುಪ್ರಭಾತವೊಂದನ್ನು ಗುನುಗುತ್ತ ಇದ್ದರೆ; ಆಹಾ! ಎಂತಹ ಸ್ವರ್ಗೀಯ
ಸುಖ. ಅದೇ ಬಳೆಗಳು ಸಂಗೀತವನ್ನು ಹಾಡುತ್ತ, ರಂಗೋಲೆ ಎಳೆಯುವ ಕೈಗಳಲ್ಲಿ
ಉಯ್ಯಾಲೆಯಾಡುತ್ತಿದ್ದರೆ, ಏನು ರಮ್ಯತೆ !

ನಿಸರ್ಗದತ್ತ ಈ ಸುಖ–ಸಂತೋಷ ಇಂದಿನ ಮಾನವನ ಬಾಳಿನಲ್ಲಿ ದೂರವಾ
ಗುತ್ತ, ಕೃತಕ ಬದುಕಿನ ಅಷ್ಟಪದಿಯ ಕೈಗೆ ಸಿಕ್ಕು ಜರ್ಜರಿತವಾಗುತ್ತಿದೆ. ಅಂತೆಯೇ
ಆ ನಾಡಿನಲ್ಲಿ ಈ ಯಾವ ಚಟುವಟಿಕೆಗಳಿಲ್ಲ. ಸದಾ ಮನೆ ಬಾಗಿಲನ್ನು ಮುಚ್ಚಿರುವು
ದೊಂದೇ; ಅದು ಮುಂಜಾವಿರಲಿ, ಸಂಜೆ ಇರಲಿ !

ಆಕೆ, ಮಿಸ್. ಹೆಲೆನಾ. ಉಮಾ ಬಂದಾಗ ನಾನು ಬಂದುದು ತಿಳಿಯಲೆಂದು ಎದ್ದು
ಹೋಗಿ ಒಂದು ಚೀಟಿಯನ್ನು ಬಾಗಿಲ ಕಿಂಡಿಯಲ್ಲಿಟ್ಟು ಬಂದಳು. ವಾರಾಂತ್ಯವಾದ
ಕಾರಣ ಮನೆಯ ಸ್ವಚ್ಛೀಕರಣ ನಡೆಸಿದ್ದಳು. ತನ್ಮಧ್ಯೆ ನಾನು ಮನೋವಿಜ್ಞಾನಿಯ
ಚಿಕಿತ್ಸಕ ದೃಷ್ಟಿಯಿಂದ ಅಲ್ಲಿಯ ಭೌತಿಕ ಪರಿಸರ, ನೈತಿಕ ವಿಚಾರಧಾರೆಗಳನ್ನು ಬಗೆದು
ನೋಡುತ್ತಿದ್ದೆ. ಆ ತರಳೆಯ ಸ್ವಂತ ನಾಡು ಜೆಕೊಸ್ಲೋವಾಕಿಯ. ವ್ಯಕ್ತಿ ಸ್ವಾತಂತ್ರ್ಯ
ಹರಣಮಾಡುವ ಕಮ್ಯುನಿಸ್ಟ್ ಸರ್ಕಾರ ಬಂದಿದ್ದುದರಿಂದ ಈ ವಯದ ಕೆಲವು ತರುಣ
ತರುಣಿಯರು ಅಲ್ಲಿಂದ ತಪ್ಪಿಸಿಕೊಂಡು ಬಂದರಂತೆ. ಇಂಗ್ಲೆಂಡಿನಲ್ಲಿ ಅವರಿಗೆ ಪೂರ್ಣ
ಸ್ವಾತಂತ್ರ್ಯ. "ಮನುಷ್ಯನೆಂದರೆ ಕೇವಲ ಅನ್ನ ತಿನ್ನುವ ಪ್ರಾಣಿಯೇ ! ಅವನಿಗೇನು ಭಾವನೆ
ಗಳಿಲ್ಲವೆ? ಭಾವನೆಗಳ ಸಮಾಧಿ ಮಾಡಿ ವ್ಯಕ್ತಿಯನ್ನು ಸರ್ಕಾರದ ಅಡಿಯಾಳನ್ನಾಗಿ
ಮಾಡುತ್ತದೆ ಈ ರಾಜಕೀಯ ಸಿದ್ಧಾಂತ. ಅಂತೆಯೇ ನಮಗೆ ಜಿಗುಪ್ಸೆ." ಹೇಳುತ್ತಾ
ಹೆಲೆನಾಳ ಕಣ್ಣಲ್ಲಿ ನೀರು ಜಿನುಗಿತು. ಅನುಕಂಪದಿಂದ ಕಾರಣ ಕೇಳಿದೆ. "ನನ್ನ ತಾಯಿ
ತಂದೆಯ ನೆನಪಾಯಿತು. ತೊರೆದು ಎಷ್ಟೋ ವರುಷಗಳಾದವು. ವಯಸ್ಕರಾಗಿ
ದ್ದರು........"

"ಅವರ ಬಳಿ ಹೋಗಬಹುದಲ್ಲಾ. ಅಳುವುದೇಕೆ?"

"ತಾಯಿತಂದೆಯಿಂದ ದೂರವಿದ್ದರೂ ಚಿಂತೆಯಿಲ್ಲ. ವ್ಯಕ್ತಿ ಸ್ವಾತಂತ್ರ್ಯ ಹರಣ ಮಾಡಿಕೊಳ್ಳಲಾರೆ. ಯಮಸಾಹಸಮಾಡಿ ಆ ಕಬ್ಬಿಣದ ತೆರೆಯಿಂದ ತಪ್ಪಿಸಿಕೊಂಡು ಬಂದಿರುವ ನಾವು ಮತ್ತೆ ಆ ಸಿಂಹದ ಗವಿಯನ್ನು ಹೊಗೆವು" ತಿರಸ್ಕಾರ ಆಕೆಯ ರೋಮರೋಮದಲ್ಲಿ ಉಕ್ಕುತ್ತಿತ್ತು. ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ಆ ನಾಡಿನ ಬಹು ಪಾಲು ಜನಕ್ಕೆ ನಖಶಿಖಾಂತ ತಿರಸ್ಕಾರ. ಸಾಮ್ಯವಾದೀ ರಾಷ್ಟ್ರಗಳ ಅನುಭವಗಳನ್ನು ಉಪ್ಪುಕಾರ ಹಚ್ಚಿ ಬಣ್ಣಿಸುತ್ತಾರೆ.

"ಇಪ್ಪತ್ತೆರಡು ವರುಷವಾದರೂ ಮದುವೆ ಏಕಾಗಿಲ್ಲ?" ನನ್ನ ಪ್ರಶ್ನೆ.

ನೀತಿ, ನೈತಿಕ ಚೌಕಟ್ಟುಗಳ ಬಗ್ಗೆ ತೀವ್ರ ವಿಡಂಬನೆ, ತಿರಸ್ಕಾರದ ಮಾತುಗಳು ಚಿಮ್ಮಿದವು. "ಗಂಡ–ಹೆಂಡತಿ, ಸಂಸಾರ–ಮಕ್ಕಳು ಇದೆಲ್ಲ ಹೊರೆಗಳು. ಸ್ವಲ್ಪ ಸುಖಕ್ಕಾಗಿ ಭಾರವಾದ ಹೊಣೆಗಾರಿಕೆ ಏಕೆ? ಇರುವ ತನಕ ಹೇಗೋ ಬದುಕಿದರಾಯ್ತು. ಬಂದ ಸಂಬಳವನ್ನು ಸ್ವಲ್ಪ ಊಟಕ್ಕೆ, ಬಹಳಷ್ಟು ಬಟ್ಟೆಗೆ, ಉಳಿದುದನ್ನು ಚಟಗಳ ತೃಪ್ತಿಗೆ ವಿನಿಯೋಗಿಸುತ್ತ 'ತೇಲಿಹೋಗುವ ಮೋಡ (passing cloud)' ದಂತಹ ಈ ಬಾಳನ್ನು ಕಳೆದರಾಯಿತು."

ಈ ವಿಚಾರಧಾರೆ ಕೇಳಿ ನನ್ನಲ್ಲಿ ಸೂಕ್ಷ್ಮ ಕಂಪನವಾಯಿತು. "ದೇವಾ, ಇಂಥ ವಿಚಾರ–ಆಚಾರ, ಸಂಸ್ಕೃತಿಯ ಚಂಡಮಾರುತವನ್ನು ನನ್ನ ಮಾತೃಭೂಮಿಯ ಜನರ ಮೇಲೆ ಬೀಸಿಸಬೇಡ. ನಮ್ಮವರಲ್ಲಿರುವ ಆದರ್ಶಗಳು ಕುಪ್ಪಳಿಸುವಂತೆ ಮಾಡಬೇಡ. ಅನೇಕ ರೀತಿಯ ಜಾತಿ, ವರ್ಣ, ವರ್ಗಗಳ ವೈಪರೀತ್ಯ ನಮ್ಮಲ್ಲಿದ್ದರೂ ಕೌಟುಂಬಿಕ ವ್ಯವಸ್ಥೆಯಲ್ಲಿ ನಮ್ಮವರು ಸುಖಿಗಳು...." ಎಂದು ಮನದಲ್ಲೇ ದೇವರನ್ನು ಪ್ರಾರ್ಥಿಸಿದೆ. ಆಕೆಯ ಹೃದಯ ಪರಿವರ್ತನೆಗಾಗಿ ಕೆಲವಾರು ಮಾತು ಹೇಳಿದೆ. ನಿಮ್ಮಲ್ಲಿ ಒಂದು ಬಗೆಯ ಉದಾಸೀನತೆ, ಜೀವನದಲ್ಲಿ ನಿರಾಸಕ್ತಿ, ನಿರ್ಜೀವತೆ ಕಾಣುತ್ತವೆ. ಏಕೆಂದರೆ ಲೋಕಸಾಗರದಲ್ಲಿ ಜೀವನದ ದೋಣಿಯನ್ನು ತಳ್ಳಲು ಹುಟ್ಟೊಂದು ಬೇಕು. ಕೌಟುಂಬಿಕ ಆದರ್ಶ, ತನ್ನದಾದ ವ್ಯಕ್ತಿಗಳಿಗೆ ಮಾಡುವ ಯಾವುದಾದರೊಂದು ತ್ಯಾಗ–ಇಂತಹವೇ ಜೀವನವನ್ನು ಮುನ್ನಡೆಸುವ ಅದಮ್ಯ ಶಕ್ತಿಗಳು.

ಆಕೆ ಮಾರುತ್ತರವಾಗಿ ಪ್ರಶ್ನೆ ಕೇಳಿದಳು, "ಮತ್ತೆ ನೀವೂ ಮದುವೆಯಾಗಿಲ್ಲವಲ್ಲ. ನಿಮಗೂ ನಿರಾಸಕ್ತಿಯುಂಟೆ?"

ನಕ್ಕು ಹೇಳಿದೆ, 'ನನ್ನ ಕಣ್ಣೆದುರಿಗೆ ಹಿರಿದಾದ ಆದರ್ಶಗಳಿವೆ. ಮಾನವ ಕಲ್ಯಾಣ, ಧರ್ಮ ಪ್ರಸಾರ, ಸಮಾಜ ಸೇವೆ ಇವು ನಮ್ಮನ್ನು ಉತ್ಸಾಹಿತರನ್ನಾಗಿ ಮುನ್ನಡೆಸುತ್ತವೆ ನಮ್ಮಲ್ಲಿ ಅಕ್ಕಮಹಾದೇವಿಯೆಂಬ ವೀರ ವಿರಾಗಿಣಿ ಹೇಳುವಳು : ಗುರುವೆಂಬ ತಂದೆಯ

ಹಸ್ತದಲ್ಲಿ ಪುನರ್ಜಾತರಾಗಿ, ಪರಮಾತ್ಮನನ್ನು ತಮ್ಮ ಪತಿಯೆಂದು ಶರಣಾಗತರಾದವರಿಗೆ ಲೋಕವೇ ಮನೆ, ಮಾನವ ಕುಲವೇ ಕುಟುಂಬ. ಇದು ವಿಶ್ವಕುಟುಂಬತ್ವದ ಸೂತ್ರ. ಅಂದಾಗ ಮಾನವೀಯ ಭಾವನೆಗಳ ತೃಪ್ತಿಯು ನಮ್ಮಲ್ಲಿ ವಿಶಾಲ ತಳಹದಿಯ ಮೇಲೆ ಆಗುವುದು". ಆಕೆ ಮೌನವಾಗಿ ಆಲಿಸುತ್ತಿದ್ದಳು.

"ನದಿಯು ಎರಡು ದಂಡೆಗಳ ಮಧ್ಯೆ ಹರಿದಾಗಲೇ ಸಮುದ್ರವನ್ನು ಸೇರುವುದು. ಹಾಗೆಯೇ ನೀನು ಸಹ ಪತಿ ಪ್ರೇಮ ಮತ್ತು ಕುಟುಂಬ ಭಾವನೆಗಳ ಮಧ್ಯೆ ನಿನ್ನ ಜೀವನ ಶಕ್ತಿಯನ್ನು ಹರಿಸಬೇಕು. ನಾನು ದೈವೀ ಶರಣಾಗತಿ–ಧರ್ಮಪ್ರಸಾರ ಎಂಬ ಎರಡು ದಂಡೆಗಳ ಮಧ್ಯೆ ಹರಿಯಬಿಟ್ಟಿರುವೆ."

ಹೆಲೆನಾ ನನ್ನ ಒಂದೊಂದು ಮಾತನ್ನೂ ಆಲಿಸುತ್ತ, ಮೈದುಂಬಿಸಿಕೊಳ್ಳುವಂತೆ ಕೇಳುತ್ತಿದ್ದಳು. "ಸ್ವಲ್ಪ ತಿಂಡಿ ತಿಂದು ಕಾಫೀ ಕುಡಿತಿರಾ ?" ತನಗಾಗಿ ಮಾಡಿಕೊಳ್ಳಲು ಸಿದ್ಧಳಾಗಿ ಕೇಳಿದಳು. "ಬೇಡ....ಅನೇಕ ಬಾರಿ ತಿನ್ನುವ ಹವ್ಯಾಸವಿಲ್ಲ...."

"ಏತಕ್ಕಾಗಿ ಇಂಥ ನಿಯಮ ಹಾಕಿಕೊಳ್ಳಬೇಕು....? ಇವೆಲ್ಲದರಿಂದ ಜೀವನದಲ್ಲಿ ನೀರಸತೆ ಹೆಚ್ಚುವವು...."

"ಇಲ್ಲ, ಮನೋ ನಿಗ್ರಹಕ್ಕೆ ಆವಶ್ಯಕ. ಒಂದು ವಸ್ತುವನ್ನು ಅನುಭವಿಸಿದಾಗ ಆಗುವ ಆನಂದಕ್ಕಿಂತ, ಅದನ್ನು ನಿಗ್ರಹಿಸಿದಾಗ, ಮೆಟ್ಟಿನಿಂದಾಗ ಆಗುವ ಆನಂದ ಅಪೂರ್ವ. ತನ್ನ ಆದರ್ಶಗಳನ್ನು ರಕ್ಷಿಸಿಕೊಂಡಾಗ ಬಾಳಿನಲ್ಲಿ ಉತ್ಸಾಹ ಕುಂಠಿತವಾಗದು...."

"ಏನೋ ನನಗಿವೆಲ್ಲ ಹೊಸ ಶಬ್ದಗಳು." ಅಚ್ಚರಿಯಿಂದ ನುಡಿದಳು.

ಅಷ್ಟರಲ್ಲಿ ಬಾಗಿಲಮೇಲೆ ಟಕ ಟಕ. ಬಾಗಿಲು ತೆರೆದಾಗ ಉಮಾ ಮಹೇಶ್ವರಿ ಒಂದೇ ನೆಗೆತಕ್ಕೆ ಹಾರಿ, ಮಂಡಿಯೂರಿ ಪಾದ ಮುಟ್ಟಿ ನಮಸ್ಕರಿಸಿದಳು. ಭಾರತದ ಪ್ರವಾಸ ಮುಗಿಸಿ ಸುಮಾರು ಎರಡು ವರ್ಷ ದಾಟಿದರೂ ಈ ಸಂಸ್ಕೃತಿಯ ಮರೆವು ಆಗಿರಲಿಲ್ಲವಾಕೆಗೆ. ಮೈಬಣ್ಣದಷ್ಟೇ ಬಿಳುಪಿರುವ ಶುಭ್ರ ಬಿಳಿಯ ಸೀರೆ, ಹಣೆಯ ಮೇಲೆ ವಿಭೂತಿಯ ಬಿಳಿಯ ಬೊಟ್ಟು, ಗಂಧದ ಚುಕ್ಕಿ. ಆಕೆ ಸಂಭ್ರಾಂತಳಾಗಿದ್ದಳು. ತನ್ನನ್ನು ತಾನೇ ಸಂತೈಸಿಕೊಳ್ಳುತ್ತ, "ಇದೇನು ಮಾತಾಜಿ. ಇದ್ದಕ್ಕಿದ್ದಂತೆಯೇ. ಪತ್ರ ಸಹ ಬರೆದಿಲ್ಲ...."

"ಎರಡು ಪತ್ರ ಹಾಕಿದ್ದೆ, ಒಂದು ಫ್ರಾನ್ಸಿಗೆ, ಇನ್ನೊಂದು ಇಲ್ಲಿಗೆ."....

"ನನಗೆ ಒಂದೂ ತಲುಪಿಲ್ಲ." ಆದುದಿಷ್ಟೇ, ಆಕೆ ಒಂದು ತಿಂಗಳ ರಜೆ ಮೇಲೆ ಹೋದಾಗ, ಬ್ರಿಟನ್ನಿಗೆ ಬರೆದ ಪತ್ರ ಪುನರ್ನಿರ್ದೇಶಿಸಲ್ಪಟ್ಟು ಫ್ರಾನ್ಸಿಗೆ ಹೋಗಿದೆ ಅಲ್ಲಿಯದು ನಾನು ಲಂಡನ್ ತಲುಪಿದ ಮೂರು ದಿವಸಗಳ ಮೇಲೆ ಮುಟ್ಟಿತು.

"ತಮಗೆ ತೊಂದರೆಯಾಯಿತು...."

"ತೊಂದರೆ ಏನು ಬಂತು? ಇಲ್ಲಿಯ ಸಂಸ್ಕೃತಿ, ಸ್ತ್ರೀಪುರುಷರ ಸ್ವೇಚ್ಛಾ ಜೀವನ ಕಂಡು ಮನಸ್ಸಿಗೆ ಮುಜುಗರ. ಅಂತೆಯೇ ಹೊಂದಿಕೊಳ್ಳಲಾರದೆ ಇಲ್ಲಿಗೆ ಬಂದೆ" ಮಿಸ್. ಹೆಲೆನಾಳ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸಿ, ಬೀಳ್ಕೊಂಡು ಉಮಾಳಲ್ಲಿ ಬಂದುದಾಯಿತು.

ಮನಸ್ಸಿನ ದುಗುಡ ಪರಿಹಾರವಾಯಿತು. ಭಾರತೀಯ ಸಂಸ್ಕೃತಿಯಲ್ಲಿ ಶ್ರದ್ಧೆಯುಳ್ಳ ಆಕೆ ಸ್ವಾಭಾವಿಕ ಪರಿಸರವನ್ನು ಒದಗಿಸುವಳೆಂದು ಸಮಾಧಾನವಾಯಿತು. ಶೈವ ಸಂಸ್ಕೃತಿಯಲ್ಲಿ ವಿಶ್ವಾಸ ಬೆಳೆಸಿಕೊಂಡ ಮಿಸ್. ಮಿಶೆಲ್ ತಾನು ಶಿವಭಾಮೆಯಾಗಬಯಸಿ ಉಮಾ ಮಹೇಶ್ವರಿ ಎಂದು ನಾಮಾಂತರ ಮಾಡಿಕೊಂಡಿದ್ದಳು. ಭಾರತ ಸಂದರ್ಶನಕ್ಕೆ ಮುನ್ನವೇ Women saints of East and West ಓದಿ, ಅಕ್ಕಮಹಾದೇವಿಯ ವ್ಯಕ್ತಿತ್ವ–ವೈರಾಗ್ಯಗಳಿಂದ ಪ್ರಭಾವಿತಳಾಗಿ ವಿರಕ್ತಿಯ ಹಾದಿ ತುಳಿಯಬಯಸಿದವಳು. ಆಕೆಯ ಕೋಣೆಯೊಳಕ್ಕೆ ಕಾಲಿರಿಸಿದಾಗ ನಮ್ಮ ನಾಡಿನ ಪೂಜಾಗೃಹದೊಳಗೆ ಪಾದವಿಟ್ಟಂತಾಯಿತು. ಶಿವನ ಸುಂದರ ಭಾವಚಿತ್ರವೇ ಅಲ್ಲದೆ ಬೆಂಗಳೂರಿಗೆ ನಮ್ಮಲ್ಲಿ ಬಂದಾಗ ನಾನು ಆಶೀರ್ವದಿಸಿ ಕೊಟ್ಟಿದ್ದ ದಿಗಂಬರದ ದಿವ್ಯಾಂಬರೆ ಅಕ್ಕಮಹಾದೇವಿಯ ಮತ್ತು ಬಸವಣ್ಣನವರ ಭಾವಚಿತ್ರಗಳು, ಮತ್ತು ಉಮಾ ಬಹಳ ಆಸಕ್ತಿಯಿಂದ ಪಡೆದು ತಂದಿದ್ದ ನನ್ನ ಭಾವಚಿತ್ರ ಗೋಡೆಯ ಮೇಲಿದ್ದವು. ಅವುಗಳ ಮುಂದೆಯೇ ಆಕೆ ನಿತ್ಯಾರ್ಚನೆ ಮಾಡುತ್ತಿದ್ದುದು. ನಾನು ಆಶೀರ್ವದಿಸಿ ಕೊಟ್ಟ Vacanas of Akkamahadevi ಆಕೆಯ ನಿತ್ಯದ ಪಾರಾಯಣ ಗ್ರಂಥ. ಇದನ್ನರಿತಾಗ ಸಖೇದಾಶ್ಚರ್ಯ, ಆನಂದಗಳಿಂದ ಮೂಕಳಾಗಿ ನಿಂತೆ. ಕೇವಲ ಹದಿನೈದು ದಿನಗಳನ್ನು ನಮ್ಮೊಡನೆ ಕಳೆದ ಈ ಬಿಳಿಯನಾಡಿನ ಬಾಲೆ ಎಂಥ ಶ್ರದ್ಧೆ–ವಿಶ್ವಾಸಗಳೊಡನೆ ಅಕ್ಕಮಹಾದೇವಿಯ ವಿರಕ್ತಿಯ ಹಾದಿಯನ್ನು ತುಳಿದಿದ್ದಾಳೆ ಎಂದು ಆನಂದದ ನವಿಲು ಮನದ ಗಿರಿಯಲ್ಲಿ ಗರಿಗೆದರಿ ನರ್ತಿಸಿತು. "ಗೀಚು ಪಾಟಿಗಿಂತ ಸ್ವಚ್ಛ ಪಾಟಿಯ ಮೇಲೆ ಬರವಣಿಗೆ ಮೂಡಿಸುವುದು ಬಲು ಸುಲಭ. ಕುಡಿಗಟ್ಟಿದ ಬತ್ತಿಗಿಂತ ಹೊಸ ಬತ್ತಿಯನ್ನು ಹಚ್ಚುವುದು ಸರಳ" ಎನ್ನಿಸಿತು ನನಗೆ. ಬಹು ಬಗೆಯ ಮೂಢನಂಬಿಕೆ, ಕಂದಾಚಾರಗಳಿಂದ ಮಡುಗಟ್ಟಿರುವ ನಮ್ಮವರಿಗಿಂತಲೂ ಎಷ್ಟು ಬೇಗ ಈ ಶ್ವೇತ ಚರ್ಮಾಂಬರೆಯ ಮೇಲೆ ನಮ್ಮ ವಿಚಾರ ಪರಿಣಾಮ ಬೀರುವುದಲ್ಲಾ ಎನಿಸಿತು.

ಶಿಶುವಿಹಾರಕ್ಕೆ ಹೋಗಿ ಹೊಸದಾಗಿ ಹಾಡನ್ನು ಕಲಿತುಕೊಂಡು ಬಂದ ಮಗು ತಾಯಿಯ ಮುಂದೆ ಆನಂದ ಭರಿತವಾಗಿ ಪಾಠವನ್ನೊಪ್ಪಿಸುವಂತೆ, ತನ್ನ ಮುಂದುವರಿದ ಸಾಧನೆ, ಉಳಿಸಿಕೊಂಡ ಪರಿಪಾಠಗಳ ಬಗ್ಗೆ ಉತ್ಸುಕತೆಯಿಂದ ಹೇಳಿದಳು. ತನ್ಮಯ ಭಾವದಿಂದ ಭಜಿಸಲು ಅನುಕೂಲವಾಗಲೆಂದು ಹಾರ್ಮೋನಿಯಮ್ ಖರೀದಿಸಿದ್ದನ್ನು

ಹೇಳಿ, ಅದನ್ನು ತೆಗೆದಿರಿಸಿ, ವಿಲಕ್ಷಣವಾಗಿ ಬಾಯಿ ತೆರೆಯುತ್ತ "ನಮಾಮಿ ಶಂಕರ ಉಮಾ ಮಹೇಶ್ವರ. ಭವಾನಿ ಶಂಕರ ತವ ಶರಣಂ" ಮತ್ತು "ನಟರಾಜ ನಟರಾಜ ನರ್ತನ ಸುಂದರ ನಟರಾಜ...." ಎಂದು ಹಾಡಿದಳು. ದಕ್ಷಿಣ ಭಾರತದ ಕರ್ನಾಟಕ ಸಂಗೀತವನ್ನು ಮತ್ತು ತಮಿಳು-ಸಂಸ್ಕೃತಗಳನ್ನು ಕಲಿಯುತ್ತಿರುವುದಾಗಿಯೂ, ಭಾರತದ ಯೋಗಾಸನ ಮತ್ತು ಧ್ಯಾನಯೋಗವನ್ನು ಅಭ್ಯಾಸ ಗೈಯ್ಯುತ್ತಿರುವುದಾಗಿಯೂ ಹೇಳಿದಳು. ತಾಯಿತಂದೆಯರನ್ನು ತೊರೆದು, ಒಬ್ಬಂಟಿಗಳಾಗೇ ಭಾರತವನ್ನು ಆರು ತಿಂಗಳ ಕಾಲ ಸಂದರ್ಶಿಸಿ, ಫ್ರಾನ್ಸ್ ದೇಶದ ವಿಲಾಸದ ವಾತಾವರಣ ಮನಸ್ಸಿಗೆ ಹಿಡಿಸದೆ, ಏಕಾಂಗಿನಿಯಾಗಿ ಆಂಗ್ಲನಾಡಿನಲ್ಲಿದ್ದು, ಉಪಜೀವನಕ್ಕಾಗಿ ನೌಕರಿ ಮಾಡುತ್ತ ಉಳಿದ ವೇಳೆಯಲ್ಲಿ ಭಾರತೀಯ ಭಾಷೆ–ವಿದ್ಯೆಗಳನ್ನು ಕಲಿಯುವ ಆಕೆಯ ಸಾಹಸಕ್ಕೆ ಯಾರಿಗೆ ತಾನೇ ಆಶ್ಚರ್ಯವಾಗದಿರದು.

ಅನ್ನವನ್ನು, ದಿಢೀರ್ ಸಾಂಬಾರನ್ನು ಮಾಡಿ, ಅಂಗಡಿಯಿಂದ ಬೆಣ್ಣೆ–ಹಣ್ಣು ತಂದು ನನ್ನ ಪೂಜಾನಂತರ ಊಟಕ್ಕಿಟ್ಟಳು. ತಲೆಯ ಮೇಲೆ ಬೆಟ್ಟದಂತೆ ಕವಿದಿದ್ದ ಮಂಕು ದಿಕ್ಕಾಪಾಲಾಗಿ ಚದುರಿತು. ಧೈರ್ಯವಾಗಿ ಅಂದಿನ ರಾತ್ರಿ ಅಲ್ಲೇ ಉಳಿದೆ. ಆದರೆ ನಾನು ಇಲ್ಲಿ ಬಂದಿರುವುದು ಮಾಲಿಕನಿಗೆ ಗೊತ್ತಾಗಬಾರದಂತೆ. ಏಕೆಂದರೆ ಆ ದೇಶದಲ್ಲಿ ಒಬ್ಬರಿರುವ ಕೋಣೆಯಲ್ಲಿ ಇಬ್ಬರಿರುವುದಾಗಲೀ, ಇಬ್ಬರಿರಬೇಕಾದ ಕೋಣೆಯಲ್ಲಿ ಒಬ್ಬರಿರುವುದಾಗಲೀ ಒಪ್ಪಿತವಿಲ್ಲ ಜಾಸ್ತಿ ಜನರನ್ನು ಕೋಳಿ ಮರಿಗಳಂತೆ ಗೂಡಿನಲ್ಲಿ ತುಂಬಿ, ಪರಿಸರ ಮಾಲಿನ್ಯಕ್ಕೆ ಕಾರಣವಾಗುವುದನ್ನಾಗಲೀ ಅಥವಾ ಅನವಶ್ಯಕವಾಗಿ ಜಾಗವನ್ನು ವ್ಯರ್ಥಗೊಳಿಸುವುದನ್ನಾಗಲೀ ಸರ್ಕಾರ ಒಪ್ಪುವುದಿಲ್ಲ.

ಮರುದಿನ ಭಾನುವಾರ ಸುಪ್ರಭಾತದಲ್ಲಿಯೇ ಎದ್ದು, ಸ್ನಾನ ಪೂಜಾದಿಗಳನ್ನು ಪೂರೈಸಿ, ನಮ್ಮ ಆತಿಥೇಯಳ ವಸತಿಗೆ ಬಂದೆವು. ಆಕೆ ನನ್ನ ನಿರ್ಗಮನದಿಂದ ಅಚ್ಚರಿಗೊಂಡಿದ್ದಳು. ಅಂದು ಸಂಜೆ ಉಮಾಳು ವಾಟ್‌ಫರ್ಡ್ ವೇ ನಲ್ಲಿರುವ ಇಂದ್ರನಾಥರ ಯೋಗ ಕೇಂದ್ರಕ್ಕೆ ಕರೆದೊಯ್ದಳು. ನಾನು ಆಗಮಿಸುತ್ತಿದ್ದಂತೆಯೇ ಇಂದ್ರನಾಥರು ಹೃತ್ಪೂರ್ವಕವಾಗಿ ಪುಷ್ಪಗುಚ್ಛವನ್ನಿತ್ತು, ಸ್ವಾಗತಿಸಿ, ನಮಸ್ಕರಿಸಿ ಕರೆದೊಯ್ದರು. ನಾನು ಬರಲಿರುವ ಬಗ್ಗೆ ಉಮಾಳು ದೂರವಾಣಿ ಮೂಲಕ ತಿಳಿಸಿ ಬಿಟ್ಟಿದ್ದಳಂತೆ. ನಮ್ಮ ಬಗ್ಗೆ ಸಾಕಷ್ಟು ವಿವರಗಳನ್ನು ಹೇಳಿ, ನನ್ನ 'ಆತ್ಮಕಥೆ' ಯ ಹಾಳೆಯನ್ನು ಉಮಾ ಕೊಟ್ಟಿದ್ದ ಕಾರಣ ಇಂದ್ರನಾಥರು ಆತ್ಮೀಯವಾಗಿ ಮಾತನಾಡಿಸಿ, ನಾನು ಬರುವ ದಿನಾಂಕದ ಬಗ್ಗೆ ಮುಂಚೆಯೇ ತಿಳಿಸದಿರುವುದಕ್ಕೆ ಆಕ್ಷೇಪಿಸಿದರು. ತಿಳಿಸಿದ್ದರೆ ತಮ್ಮ ಕಾರಿನಲ್ಲಿ ಬಂದು, ಕರೆತರಲು ಬಹಳ ಅನುಕೂಲವಾಗುತ್ತಿತ್ತು ಎಂದರು. ಅವರ ವಿನಯ, ಸಾತ್ವಿಕತೆ, ಭಯ-ಭಕ್ತಿ ಅಚ್ಚರಿಯನ್ನುಂಟು ಮಾಡಿದವು. ಒಳಕ್ಕೆ ಸ್ವಾಗತಿಸಿ ತಮ್ಮ ಯೋಗ ಕೇಂದ್ರದ ಅಭ್ಯಾಸಿಗರನ್ನು ಪರಿಚಯಿಸಿದರು.

ಒಂದು ಗಂಟೆಯ ಕಾಲ ಯೋಗಾಸನ, ಪ್ರಾಣಾಯಾಮ, ಧ್ಯಾನ ನಡೆಯಿಸಿದ ನಂತರ ಆಕಸ್ಮಿಕವಾಗಿ ಬಂದ ನನ್ನನ್ನು ಯೋಗಾಸಕ್ತ ವಿದ್ಯಾರ್ಥಿಗಳಿಗೆ ಉಪದೇಶಿಸಲು ಕೇಳಿದರು. ಇಂದಿನ ಯುಗದಲ್ಲಿ ಆಧ್ಯಾತ್ಮ ಮೌಲ್ಯಗಳ ಅವಶ್ಯಕತೆ, ಮನಸ್ಸಿನ ಉದ್ವಿಗ್ನತೆಗೆ ಧ್ಯಾನವು ನೀಡುವ ಪರಿಹಾರ, ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ, ಪಾಶ್ಚಿಮಾತ್ಯರ ಪ್ರಯತ್ನವಾದ ಮತ್ತು ಭಾರತೀಯರ ದೈವೀಶರಣಾಗತಿಗಳ ಮಧ್ಯೆ ಆಗಬೇಕಾದ ಸಮ್ಮಿಳನದ ಬಗ್ಗೆ ಮಾತನಾಡಿದಾಗ ಅಭ್ಯಾಸಿಗರು ಹರ್ಷಿಸಿದರು. ನಾನು ಸರಳವಾದ ದೃಷ್ಟಾಂತಗಳೊಡನೆ ಮನವರಿಕೆ ಮಾಡಿಕೊಟ್ಟುದನ್ನು ಬಹುವಾಗಿ ಮೆಚ್ಚಿದ್ದು, ಆ ಮೆಚ್ಚುಗೆ ಅವರ ಕಣ್ಣುಗಳು ಮಿಂಚಿದ ಹೊಳಪಿನಲ್ಲಿ ವ್ಯಕ್ತವಾಯಿತು. ಆ ನಾಡಿಗೆ ಕಾಲಿಟ್ಟ ಎರಡನೆಯ ದಿನವೇ ಯೋಗಕೇಂದ್ರವನ್ನು ಸಂದರ್ಶಿಸಿ ಪರಿಣಾಮಕಾರಿಯಾಗಿ ಮಾತನಾಡಿದುದು ತುಂಬಾ ಆತ್ಮವಿಶ್ವಾಸವನ್ನು ನನಗೆ ಕೊಟ್ಟಿತ್ತು. ಪ್ರತಿ ಭಾನುವಾರವೂ ಬಂದು ಉಪದೇಶಿಸಬೇಕೆಂದು ಕಳಕಳಿಯಿಂದ ಕೇಳಿಕೊಂಡರು.

ನನ್ನ ಭಾಷಣ ಮುಗಿಯುವುದರಲ್ಲೇ ಒಂದು ವಿಶೇಷ ಆಮಂತ್ರಣ ಕಾದಿತ್ತು. ತಮಿಳುನಾಡಿನ ಮೂಲ ನಿವಾಸಿಯಾದ ಶ್ರೀಮತಿ ಲಕ್ಷ್ಮಿರಾಮಚಂದ್ರನ್ ಯೋಗಕೇಂದ್ರದ ಸಾಧಕಿ. ಪತಿಯಿಂದ ವಿವಾಹ ವಿಚ್ಛೇದನ ಪಡೆದು, ಒಂದೇ ಮಗುವನ್ನು ಸಾಕಿ ಬೆಳೆಸುತ್ತಾ, ಸರ್ಕಾರಿ ನೌಕರಿಯಲ್ಲಿದ್ದ ಒಂಟಿ ಜೀವ. ಮಗ ಅಲ್ಲಿಂದ ಎರಡು ನೂರು ಮೈಲಿ ಮೇಲೆ ಪ್ರೌಢಶಾಲೆಯಲ್ಲಿ ವ್ಯಾಸಂಗನಿರತ. "ಸಜ್ಜನರ ಸತ್ಸಂಗ, ಮಾರ್ಗದರ್ಶನ ಸಾನ್ನಿಧ್ಯ, ಉಪದೇಶ ಅವಶ್ಯವಾಗಿ ಬೇಕಾಗಿರುವ ಆಕೆಗೆ ನನ್ನ ಉಪಸ್ಥಿತಿ ತುಂಬಾ ಅವಶ್ಯವಿದೆ ಎಂದು, ದಯೆಯಿರಿಸಿ ಆಕೆಯ ಆತಿಥ್ಯವನ್ನು ಸ್ವೀಕರಿಸಬೇಕೆಂದು ಒತ್ತಾಯಿಸಿದಳು. ನಾನು ಹೃತ್ಪೂರ್ವಕವಾಗಿ ಆಹ್ವಾನ ಸ್ವೀಕರಿಸಿದಾಗ ಸಂತಸಗೊಂಡಳು. ಯೋಗಕೇಂದ್ರದ ಕಾರ್ಯಕ್ರಮದ ನಂತರ ಇಂದ್ರನಾಥರ ಶಿಷ್ಯ ಪೀಟರ್‌ರವರು ತಮ್ಮ ಕಾರಿನಲ್ಲಿ ನನ್ನನ್ನು, ಉಮಾಳನ್ನು ಕರೆದುಕೊಂಡು ಬಂದು ನಮ್ಮ ಅತಿಥೇಯಳ ಮನೆಯನ್ನು ತಲುಪಿಸಿದಾಗ ನನ್ನ ಮನಸ್ಸು ಹಿಂದಿನೆರಡು ದಿವಸಗಳ ದುಗುಡ ಕಳೆದುಕೊಂಡು ಹಗುರವಾಗಿತ್ತಲ್ಲದೇ, ನೀರಭ್ರ ಆಕಾಶದಷ್ಟು ಪ್ರಶಾಂತ ಮತ್ತು ನಿರ್ಮಲವಾಗಿ, ಅಲ್ಲಿ ಶುಭ ಭವಿಷ್ಯದ ಚಂದಿರ ಮತ್ತು ಆಶಾಕಿರಣಗಳ ತಾರೆಗಳು ಮಿನುಗುತ್ತಿದ್ದವು.

(ಸಶೇಷ)

★★★★

ಕಾಣಬಹುದೆ ಪರುಷದ ಗಿರಿ ಅಂಧಕಂಗೆ?
ಅರಿಯಬಹುದೆ ರಸದ ಭಾವಿ ನಿರ್ಭಾಗ್ಯಂಗೆ?
ತೆಗೆಯಬಹುದೆ ಕಡವರವು ದರಿದ್ರಂಗೆ?
ಕರೆಯಬಹುದೆ ಕಾಮಧೇನು ಅಶುದ್ಧಂಗೆ?
ಎನ್ನೊಡೆಯ ಕೂಡಲ ಸಂಗನ ಶರಣರನ್ನು
ಪುಣ್ಯವಿಲ್ಲದೆ ಕಾಣಬಹುದೆ?

— ಬಸವಣ್ಣ

ಈ ತಿಂಗಳ ಮಂಗಳಮೂರ್ತಿ :

ಕಾವ್ಯ ಸಹ್ಯಾದ್ರಿ ಕುವೆಂಪು

— ಗೊ. ರು. ಚನ್ನಬಸಪ್ಪ

"ಉತ್ತರದ ಕಾಶಿಯಲಿ ಕತ್ತೆ ಮಿಂದೈತರಲು
ದಕ್ಷಿಣದ ದೇಶಕದು ಕುದರೆಯಹುದೇ?"

—ಇದು ಕನ್ನಡದ ಮೇಲೆ ಅನ್ಯ ಭಾಷೆಯ ಆಕ್ರಮಣ ಕಂಡಾಗ ಕುವೆಂಪು ಬೀಸಿದ ಬಿಚ್ಚುಗತ್ತಿ! "ಅರ್ಥವಾಗದ ಸಗ್ಗ ಎನಿತಿದ್ದರೇನು? ಅರ್ಥವಾದರೆ ಸಾಕು ನರಕವೂ ಜೇನು!" ಎನ್ನುವ ದೃಢವಾಣಿ. ತಾಯ್ನೆಲ ತಾಯ್ನುಡಿಗಳ ಬಗೆಗೆ ಅಖಂಡ ಅಭಿಮಾನ.

ಪುಟ್ಟಪ್ಪನವರು ಹುಟ್ಟಿದುದು ನಿಸರ್ಗದ ಮಡಿಲಲ್ಲಿ; ಸಂಪ್ರದಾಯದ ಒಡಲಲ್ಲಿ. ಬಾಣಂತಿಗೆ ಕಾಬಸಳೆ ಕುಡಿ, ಲವಕೆ ಹುಳದ ಮದ್ದು ಕುಡಿಸುತ್ತಿದ್ದ ಕಾಲ. ಹೆರಿಗೆ ಮಾಡಿಸಿದವಳು ಹಳೇ ಪೈಕದ ಓರ್ವ ಸೂಲಗಿತ್ತಿ. (ಕನ್ನಡದ ಚೆನ್ನ ಚೇತನವನ್ನು ಮೊದಲು ಮುಟ್ಟಿದ ಪುಣ್ಯಾತಗಿತ್ತಿ!)

ಹುಟ್ಟಿದ ಊರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯ ಬಳಿ; ಬೆಕ್ಕನೂರಿನ ಕುಪ್ಪಳಿ. ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ತೊಟ್ಟಿಲಲ್ಲಿಟ್ಟು ತೂಗಿದ ಹೆಸರು ಪುಟ್ಟಪ್ಪ. ಆಗ ತಾಯಿ ಹಾಡಿದ ಜೋಗುಳಕ್ಕೆ ಕೋಗಿಲೆ ಕಾಜಾಣಗಳೇ ಸಾಕ್ಷಿ!

'ಓ' ನಾಮ ಕಲಿತದ್ದು ಕೂಲಿ ಮಠದಲ್ಲಿ – ಮರಳಿನ ಮೇಲೆ ಬೆರಳಲ್ಲಿ ಅಕ್ಷರ ತಿದ್ದಿ. ಆರಂಭದಲ್ಲಿ ದೊರೆತ ಓರ್ವ ಓದಿಸುವ ಅಯ್ಯನವರು "ಅಕ್ಷರದ ಜೊತೆ ಅಂಕಿ ಹೇಳಿಕೊಟ್ಟರು; ನಶ್ಯದ ಜೊತೆಗೆ ಬೀಡಿ ಕಲಿಸಿದರು." ಜುಟ್ಟು ಕಳಚಿ ಕ್ರಾಪು ತಂದು ಕೊಟ್ಟವರು ಮಂಗಳೂರಿನ ಮೇಸ್ತ್ರು!

ಹುಡುಗ ಪುಟ್ಟಪ್ಪ ಬಲು ಚೂಟಿ. ಮಾತಿನಲ್ಲಿ ಸೋಲದ ಚಾಟಿ. ಕ್ಯಾಟ್‌ಬಿಲ್ ಹಿಡಿದು ಸ್ವತಃ ಬೇಟೆಗೆ ಹೋಗುತ್ತಿದ್ದರೂ ಹಾವಿನ ಹಿಡಿತಕ್ಕೆ ಸಿಕ್ಕಿದ ಅಳಿಲೊಂದನ್ನು ಉಳಿಸಿದ ಜೀವ ಕಾರುಣ್ಯ. ಬೇಟೆ ಕಲಿಸಿದ ಪಾಠ, ಅಳಿಲ ಜೀವ ರಕ್ಷಣೆ ಕೊಟ್ಟ ಶಿಕ್ಷಣ –ಬಾಲಕ ಪುಟ್ಟಪ್ಪನವರ ಬುದ್ಧಿಗೆ ಸಿದ್ಧಿ!

ಪುಟ್ಟಪ್ಪನವರು ಪ್ರಕೃತಿಯ ವರಪುತ್ರ. (ಹುಟ್ಟಿದುದು ಮೂಲಾ ನಕ್ಷತ್ರ!) ಶಾಲೆಯಲ್ಲಿ ಕಲಿತುದಕ್ಕಿಂತ ನಿಸರ್ಗ ನೋಡಿ ಕಲಿತುದೇ ಹೆಚ್ಚು. ನಿಸರ್ಗವೇ ಅವರ ಮೆಚ್ಚು; ಅದೇ ಹುಚ್ಚು!

ಮಲೆನಾಡಿನ "ಗಿಡ ಮರ ಬಳ್ಳಿ, ಗಿರಿ ನದಿ ಕಂದರ, ರವಿ ಶಶಿ ತಾರೆ, ಕಾಜಾಣ ಕೋಗಿಲೆ, ಗಿಳಿ ತೇನೆ, ಕಾಮಳ್ಳಿ ಪಿಕಳಾರ, ಮೀಂಚುಳ್ಳಿ. ಹುಲಿ, ಹಂದಿ, ದೊಡ್ಡು ಕಡ ಮಿಗ, ಮಸಿಯ, ಕೋಡಗ, ಎರಳೆ, ಸಾರಗ, ಬರ್ಕ, ಉಡ, ಸೀತಾಳಿ, ಕೇದಗೆ, ಬಕುಳ, ಮಲ್ಲಿಗೆ, ಸುರಗಿ, ಸುರಹೊನ್ನೆ, ಉದಯಾಸ್ತ ಋತು ಪರಿವರ್ತನೆ – ಒಂದೊಂದೂ ಗುರುವಾಗಿ ಅವರಿಗೆ ನಡೆಗಲಿಸಿವೆ, ನುಡಿಗಲಿಸಿವೆ" ಎನ್ನುತ್ತಾರೆ ದೇ. ಜ. ಗೌ.

ಸುತ್ತಣ ಪರಿಸರ, ಆಜನ್ಮ ಸಂಸ್ಕಾರ. ಬಾಲ್ಯದಲ್ಲೇ ಭಾವಲೋಕ ವಿಹಾರ; ಆತ್ಮಾನುಭೂತಿಯ ವಿಚಾರ. ಮೊದ ಮೊದಲು ಜನಬಳಕೆ. ಕ್ರಮೇಣ ಏಕಾಂತದ ಬಯಕೆ. ಬಹಿರ್ಮುಖಕ್ಕಿಂತ ಅಂತರ್ಮುಖದ್ದೇ ಮೇಲುಗೈ!

ಶಾಲಾ ಕಾಲೇಜಿನುದ್ದಕ್ಕೂ ಪ್ರತಿಭೆಯ ಪರಮ ಪ್ರಕಾಶ. ಮೂರನೆಯ ತರಗತಿಯಲ್ಲಿದ್ದಾಗಲೇ ಷೇಕ್ಸ್‌ಪಿಯರನ 'ಮರ್ಚೆಂಟ್ ಆಫ್ ವೆನ್ನಿಸ್' ನಾಟಕದಲ್ಲಿ 'ಷೈಲಾಕ್' ಪಾತ್ರ. ಪ್ರೌಢಶಾಲೆಯಲ್ಲೇ ವರ್ಡ್ಸ್ ವರ್ತ್, ಷೆಲ್ಲಿ ಅವರನ್ನು ಅನುಕರಿಸಿ ಪದ್ಯ ಬರೆಯುವ ಸಾಹಸ. ಪುಸ್ತಕ ಭಂಡಾರದ ಪೂರ್ಣ ಬಳಕೆಯ ಅಭ್ಯಾಸ.

ವಯಸ್ಸಿಗಿಂತ ವೇಗವಾಗಿ ಬೆಳೆದ ಬುದ್ಧಿ ಸಾಮರ್ಥ್ಯ. ಪಾಶ್ಚಿಮಾತ್ಯ ಸಾಹಿತ್ಯದಿಂದ ಕಾವ್ಯಾನುಭವ. ಮಿಲ್ಟನ್ ಕವಿಯಿಂದ ಹೆಚ್ಚು ಪ್ರಭಾವ.

ಪುಟ್ಟಪ್ಪನವರ 'ಸುಪ್ತ ಚಿತ್ತದಲ್ಲಿ ಗುಪ್ತವಾಗಿದ್ದ ಪ್ರತಿಭಾ ಶಕ್ತಿಯ ಬೀಜ ಮೊಳೆತು' ಸುಳಿದೆಗೆದು ಬೆಳೆದುದು ಮೈಸೂರಿನಲ್ಲಿ–ಪ್ರೌಢ ಶಿಕ್ಷಣಕ್ಕೆ ಬಂದಾಗ. ಮಲೆನಾಡಿನಿಂದ ಬಯಲು ಸೀಮೆಗೆ ಬಂದಾಗ ಅವರಿಗೆ ಕೊರತೆಯೆನಿಸಿದರೂ ಮೈಸೂರಿನಲ್ಲಿ ಆ ಕೊರತೆ ತುಂಬಿದ ತಾಣಗಳೆಂದರೆ ಲಲಿತಾದ್ರಿ, ಕಾರಂಜಿಕೆರೆ, ಕುಕ್ಕನಹಳ್ಳಿ ಕೆರೆ, ಥಂಡಿ ಸಡಕ್!

ವಿದ್ಯಾರ್ಥಿಯಾಗಿದ್ದಾಗ ಚರ್ಚಾಕೂಟವೊಂದರಲ್ಲಿ "Caste system is a menace to India" ಎಂಬ ಬಗ್ಗೆ ಪುಟ್ಟಪ್ಪನವರು ಮಾಡಿದ ವಾದ ಅವರ ಪ್ರಗತಿಪರ ವಿಚಾರಧಾರೆಯ ಪ್ರತೀಕ. ಸಂಪ್ರದಾಯದ ವಿರುದ್ಧ ಸಿಡಿದೆದ್ದ ಈ ಸಿಡಿಲ ಮರಿ ಸೆಳೆದ ಕಣ್ಣು ಕಿವಿಗಳು ಸಾವಿರ ಸಾವಿರ! ಆ ಸಮಯದಲ್ಲೇ ರಾಮಕೃಷ್ಣಾಶ್ರಮದ ಪರಿಚಯ.

ಕಾಲೇಜಿನಲ್ಲಿ ಅಧ್ಯಯನಕ್ಕೆ ಆರಿಸಿಕೊಂಡ ಐಚ್ಛಿಕ ವಿಷಯ ಮನಶ್ಶಾಸ್ತ್ರ ಮತ್ತು

ತತ್ತ್ವಶಾಸ್ತ್ರ. ನಿರಂತರ ಗ್ರಂಥಾಧ್ಯಯನ – ಕಾವ್ಯ ಕೃಷಿಗಳು ನಿತ್ಯಕಾಯಕ. ಪರಿಣಾಮವಾಗಿ "ಕವಿ ಹೃದಯ ವೀಣೆ, ಲೋಕ ಅದನ್ನು ಮಿಡಿಸುತ್ತದೆ. ವ್ಯಕ್ತಿತನವೆ ಕವಿಗೆ ಇಲ್ಲ. ಅವನು ಇಲ್ಲ; ಅಥವ ಎಲ್ಲ" ಎನ್ನುವ ತನ್ಮಯತೆ!

೧೯೨೨ ರ ಅಕ್ಟೋಬರ್ ೮ ಪುಟ್ಟಪ್ಪನವರ ಬದುಕಿಗೆ ಹೊಸ ರಕ್ಷೆ. ಕಲ್ಕತ್ತೆಯ ಬೇಲಿಮಠದಲ್ಲಿ ಮಂತ್ರ ದೀಕ್ಷೆ. ಚಿನ್ನ ಮತ್ತಷ್ಟು ಚೊಕ್ಕಟವಾಯಿತು!

ಅನಂತರ ಅವರ "ದಾರ್ಶನಿಕ ದೃಷ್ಟಿ ಗಂಭೀರವಾಯಿತು. ವಿಚಾರಮತಿ ನಿಶಿತವಾಯಿತು. ಮನೋಭಾವ ವಿಶಾಲವಾಯಿತು. ಬುದ್ಧಿ ಶ್ರೀಮಂತವಾಯಿತು. ಆಲೋಚನಾ ಶಕ್ತಿ ಪ್ರಜ್ವಲಗೊಂಡಿತು. ಪ್ರತಿಭೆ ದೇದೀಪ್ಯಮಾನವಾಯಿತು. ಅಧ್ಯಾತ್ಮ ಸಾಧನೆಗೆ ಸ್ಫೂರ್ತಿ ದೊರೆಯಿತು. ಒಟ್ಟಿನಲ್ಲಿ ಹೊಸ ಸಂಕ್ರಮಣ ಅವರ ಬಾಳಿನಲ್ಲಿ ಆರಂಭವಾಯಿತು."

ಹಡೆದವರ ನಿರೀಕ್ಷೆ ಏನಿತ್ತೋ ಏನೋ? ಪುಟ್ಟಪ್ಪನವರಂತೂ ಕಾವ್ಯರ್ಷಿ ಆದರು. ರಾಷ್ಟ್ರ ಕವಿ ಆದರು. ಕನ್ನಡ ಭಾಷೆಗೆ 'ಭೀಮ ರಕ್ಷೆ ಆದರು'.

ಕುವೆಂಪು 'ಕನ್ನಡದ ಕಂಪು, ಇಂಪು, ಪೆಂಪುಗಳ ರಸ ಸಂಗಮದಲ್ಲಿ ಉದ್ಭವಿಸಿದ' ರಸಋಷಿ. 'ಅನಂತದಿಂದ ಗುಣಿಸಿಕೊಂಡು ನೀವೂ ಅನಂತವಾಗಿ' ಎಂದು ಹೇಳಿದ ಮಹಾ ದಾರ್ಶನಿಕ!

ಕನ್ನಡ ಸಾಹಿತ್ಯ – ಸಂಸ್ಕೃತಿ ಸಾಮ್ರಾಜ್ಯದ ಈ ಸಾಮ್ರಾಟ ನಾಡಿಗೆ ಕೊಟ್ಟ ಸಾಹಿತ್ಯ ಪುಷ್ಪಗಳು ಸುಗಂಧಮಯ. ಅವರ 'ರಕ್ತಾಕ್ಷಿ' ಕನ್ನಡದ ಹ್ಯಾಮ್ಲೆಟ್ ಕಾವ್ಯ. "ಕಾನೂರು ಸುಬ್ಬಮ್ಮ ಹೆಗ್ಗಡಿತಿ," ಮಲೆನಾಡಿನ ಬದುಕಿನ ಭವ್ಯ ದರ್ಶನ. 'ಜಲಗಾರ,' 'ಶೂದ್ರತಪಸ್ವಿ' ಗಳು ಸಾಮಾಜಿಕ ಕ್ರಾಂತಿಯ ಕಿಡಿಗಳು! ಕುವೆಂಪು ಅವರ ಹಸ್ತದಿಂದ ಮೂಡಿಬಂದ ಕಾವ್ಯ, ಪ್ರಬಂಧ, ಕಾದಂಬರಿ, ನಾಟಕ–ಒಂದೊಂದೂ ಮಂದಾರ. ಪ್ರತಿಯೊಂದರಲ್ಲೂ ಹೊಸ ಸಂದೇಶ!

ಕನ್ನಡ ಕುಲಕ್ಕೆ ಕಿರೀಟ ತೊಡಿಸಿದ 'ರಾಮಾಯಣ ದರ್ಶನಂ' ಮಹಾ ಕಾವ್ಯ ಒಂಭತ್ತು ವರ್ಷಗಳ ಮಹಾ ತಪಸ್ಸಿನ ಫಲಶ್ರುತಿ. ಜ್ಞಾನಪೀಠ ಪ್ರಶಸ್ತಿಗೊಂದು ಘನತೆ!

ದೇವಂಗಿ ರಾಮಣ್ಣಗೌಡರ ಪುತ್ರಿ ಹೇಮಾವತಮ್ಮ ಕುವೆಂಪು ಅವರ ಧರ್ಮಪತ್ನಿ. ಮದುವೆಯಾದ ನಂತರ ಮೈಸೂರಿನ ಹೊಸಮನೆ 'ಉದಯ ರವಿ'ಯಲ್ಲೇ ವಾಸ. ಕಾವ್ಯ ಕನ್ನೆಯೊಡನೆ ಎಂದಿನಂತೆ ಸರಸ. ಪತಿಯ ಸಾಹಿತ್ಯ ಸೇವೆಗೆ ಪತ್ನಿಯ ಪೂರ್ಣ ಸಹಕಾರ. ಅವರದು 'ಸತಿ ಪತಿಗಳೊಂದಾದ' ಭಕ್ತಿ!

ಜೋಡಿಗೂಡಿದ ದಾಂಪತ್ಯ ಜೀವನದ ಫಲ–'ಪ್ರೇಮ ಕಾಶ್ಮೀರ', 'ಚಂದ್ರ ಮಂಚಕ್ಕೆ ಕಾವ್ಯ ಸಹ್ಯಾದ್ರಿ ಕುವೆಂಪು

ಬಾ ಚಿಕೋರಿ', 'ಜೇನಾಗುವ', 'ಅನುತ್ತರಾ' ಕೃತಿಗಳು. ಸಂಸಾರವನ್ನು ಯೋಗವೆಂದು ಭಾವಿಸಿದ ಜೀವನಯೋಗಿ ಕುವೆಂಪು. ಅವರಿಗೆ ಸಂಸಾರ ಬಂಧನವಲ್ಲ; ಶಿವಪೂಜೆ.ಅಲ್ಲಿ 'ರಾಗವೇ ವೈರಾಗ್ಯ; ಭೋಗವೇ ತ್ಯಾಗ; ಮೋಹವೇ ಭಕ್ತಿ; ಪ್ರೇಮವೇ ಮುಕ್ತಿ !'

"ನಾವಿಬ್ಬರು ಎಂದೆಂದೂ ಕೂಡಿ ಒಂದು ದಂಪತಿ; ನೀನು ನನ್ನ ಹೆಂಡತಿ, ಸಾಮಾನ್ಯವೇ ಈ ಸಂಗತಿ ?" ಎಂದು ಕೇಳುವ ಸೊಗಸು ಕುವೆಂಪು ಅವರದು !

ಹೀಗೆ ಲೋಕದ ಮಧ್ಯೆ ಇದ್ದರೂ ತಮ್ಮದೇ ಆದ ಲೋಕದಲ್ಲಿ ವಿಹರಿಸುವ ಕುವೆಂಪು ಅವರನ್ನು ದೈವವೇ ಕೈ ಹಿಡಿದಿದೆ. ಆ ಭದ್ರ ರಕ್ಷೆಯಲ್ಲೇ ಅವರು ಸಿದ್ಧ ಪುರುಷರಾಗಿದ್ದಾರೆ; 'ಬೆಳಕಿನ ಗರ್ಭ ಗುಡಿಯಿಂದ ಮಿಡಿದ ಓಂಕಾರ' ವಾಗಿದ್ದಾರೆ !

ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಕುವೆಂಪು ಅವರಿಂದ ಸಂದಿರುವ ಸೇವೆ ಅಪ್ರತಿಮ. ಮೈಸೂರು ವಿಶ್ವವಿದ್ಯಾಲಯದ ಗಂಗೋತ್ರಿಯ ಗುಡಿ ಕಟ್ಟಿದ ಕೀರ್ತಿ ಅವರದು. ಕನ್ನಡಕ್ಕೆ ಅವರು ಮೂಡಿಸಿದ ಕೋಡು ಎಲ್ಲಕ್ಕಿಂತ ಎತ್ತರ !

ಸಾಹಿತ್ಯದ ಮೂಲಕ ಸಾಮಾಜಿಕ ಬದುಕನ್ನು ಕೆದಕಿ ನೋಡಿರುವ ಈ ನುಡಿ ವೈದ್ಯ ಅದರ ರೋಗ ನಿವಾರಣೆಗೆ ಕೊಟ್ಟ 'ಗುಳಿಗೆ'ಗಳು ಒಂದೆರಡಲ್ಲ ! 'ಶೂದ್ರ' ನಾಗಿ ಸರಸತಿಯ ವೀಣೆ ಹಿಡಿದು ನುಡಿಸಿದ ಕ್ರಾಂತಿ ಶಕ್ತಿ. 'ಗೊಬ್ಬರದ ಮೇಲೆ ಕಬ್ಬ ಬರೆದು' ಸಂಪ್ರದಾಯದ ಹುಬ್ಬೇರಿಸಿದ ವ್ಯೋಮ ವ್ಯಕ್ತಿ !

ಕುವೆಂಪು 'ಅಳತೆಗೆ ಅಳವಡದ' ಕಾವ್ಯ ಬ್ರಹ್ಮ. ರಾವಣನಲ್ಲಿ ರಾಮನ ಘನತೆ ಕಾಣುವ ದಿವ್ಯ ಚೇತನ. ದೀನ ದಲಿತರ ಬಗೆಗೆ ಅದ್ವಿತೀಯ ಅನುಕಂಪ. ಸಾಹಿತ್ಯದ ನುಡಿನುಡಿಯಲ್ಲೂ ದಲಿತೋದ್ಧಾರದ ದನಿ. ಸ್ವಾಭಿಮಾನ, ಸ್ವಾತಂತ್ರ್ಯಗಳ ವೀರ ಘೋಷ ! ಸಮನ್ವಯ ಸಹಿಷ್ಣುತೆಗಳ ಮಂಜುಳ ನಾದ !

ಕನ್ನಡ ಕವಿಗಳು ಕಂಡ ಕುವೆಂಪು – ಕಾವ್ಯ ಗೊಮ್ಮಟದೇವ; ದಿವ್ಯದ್ರಷ್ಟಾರ; ಆದಿಕವಿ ಸಂಭೂತಿ, ಜ್ಞಾನ ಗಂಗೋತ್ರಿ, ನುಡಿ ರೂವಾರಿ, ಶೃಂಗಸಮ ವ್ಯಕ್ತಿ, ನಾಡು ನುಡಿಗಳಿಗೆ ಚಿರ ಮಂತ್ರ ಶಕ್ತಿ, ಕಾವ್ಯ ಮಯೂರ, ಯುಗ ಕವಿ, ಕರುನಾಡ ಸಿರಿಗುಡಿಯ ನಿತ್ಯ ನಂದಾದೀಪ !

ಸ್ವತಃ ಕುವೆಂಪು ಅವರೇ ಹೇಳಿರುವಂತೆ "ವಿಧಿಯ ಮನಸು ಕಡೆದ ಕನಸು ಕಾಣ್ಬ ಕಣಸೆ, ಕಾಣ್: ಕುವೆಂಪು ! ಭಕ್ತಿಯುಡಿಯ ಹುಡಿ–ಕುವೆಂಪು ! ಗುರು ಹಸ್ತದ ಅಡಿ–ಕುವೆಂಪು ! ನುಡಿರಾಣಿಯ ಗುಡಿ–ಕುವೆಂಪು ! ಸಿರಿಗನ್ನಡ ಮುಡಿ–ಕುವೆಂಪು ! ಇರ್ದುಮಿಲ್ಲದೀ ಕುವೆಂಪು !"

ಮಹಾ ಕವಿ ಪುಟ್ಟಪ್ಪನವರು ಭಾವ ಲೋಕದಲ್ಲಿದ್ದರೂ ಭೂಮಿ ಬಿಟ್ಟು ನಿಂತವ

ರಲ್ಲ. ವ್ಯಕ್ತಿ, ಸಮಾಜ, ರಾಷ್ಟ್ರಗಳ ಬದುಕಿಗೆ ಬೆಲೆ ಕೊಟ್ಟವರು. ಇಲ್ಲಿನ ಸಿಹಿ–ಕಹಿ ಅನುಭವಿಸಿದವರು. ಶಿವ ಶರಣರು ಹೇಳುವಂತೆ, 'ಕಳ್ಳಗಂಜಿ ಕಾಡ ಹೊಕ್ಕವರಲ್ಲ; ಹುಲಿ ಗಂಜಿ ಹುತ್ತ ಸೇರಿದವರಲ್ಲ; ಕಾಲಕ್ಕಂಜಿ ಭಕ್ತರಾದವರಲ್ಲ !' ಮಾನವ ಜೀವನವನ್ನು ತಮ್ಮದೇ ಆದ ದೃಷ್ಟಿಯಿಂದ ಕಂಡುಕೊಂಡವರು. ಇದ್ದು ಇಲ್ಲದಂತೆ ಇರುವ ಬಗೆಯನ್ನು ತೋರಿಕೊಟ್ಟವರು !

ಅವರಿಗೆ ಮಾತಿಗಿಂತ ಮೌನ ಪ್ರೀತಿ. ಸುತ್ತಮುತ್ತಣ ಸಮಸ್ತವೂ ಅವರ ದೃಷ್ಟಿಯಲ್ಲಿ ಶಿವಮಯ; ಮಂಗಳಮಯ. ಅವರು ಶಿವಾನುಭಾವಿ. ಅವರ ಶಿವಾನುಭವ 'ಎಳ್ಳೊಳಗಣ ಎಣ್ಣೆ; ಕಲ್ಲೊಳಗಣ ಹೇಮ, ಹಾಲೊಳಗಣ ತುಪ್ಪ, ಕಾಷ್ಠದೊಳಗಣ ಅಗ್ನಿ, ಪುಷ್ಪದೊಳಗಣ ಪರಿಮಳ !'

ಕಾವ್ಯ ಧರ್ಮಕ್ಕೆ ಕುವೆಂಪು ಒಂದು ವ್ಯಾಖ್ಯಾನ. ಅವರ ಸತ್ಯದರ್ಶನ ವಿನೂತನ: "ಕಲ್ಲು ರೊಟ್ಟಿಯಾದರೆ ಮಾತ್ರ ಪವಾಡವೇನು? ಕಲ್ಲು ಕಲ್ಲಾಗಿರುವುದೇ ಮಹತ್ತರ ಪವಾಡವಲ್ಲವೇನು?" ಕುವೆಂಪು ಅವರದು ಜಡದಲ್ಲಿ ಚೇತನ ಕಾಣುವ ದರ್ಶನ. ಪ್ರಕೃತಿಯೇ ಅವರ ಭಗವಂತ !

ಅವಾಸ್ತವತೆ ಆಡಂಬರಗಳು ಆರಂಭದಿಂದಲೂ ದೂರ. ಸತ್ಯಕ್ಕೆ ಸದಾ ಸಾಕ್ಷಿ. ಕಾವ್ಯ ಕಾಯಕವೆ ಕೈಲಾಸ! ಪರಿಶುದ್ಧ ಶರಣ ಜೀವನ. ಕುವೆಂಪು–'ಶೂದ್ರ' ಶಿಲೆಗೆ ಶುಭ ಸ್ಪರ್ಶ !

ನಿಸರ್ಗದಂಗಳದ ಈ ಮಂಗಳ ಮೂರ್ತಿಯ ಕಾಲದವರು ನಾವು. ನಮಗೆ ಅದಕ್ಕಿಂತ ಮತ್ತೇನು ಹಿರಿಮೆ ಬೇಕು?

ಕನ್ನಡದ ಈ ಭಾಗ್ಯನಿಧಿಗೆ ಇದೇ ಡಿಸೆಂಬರ್ ೨೯ ರಂದು ೭೩ ವರ್ಷ ತುಂಬಲಿದೆ. ಈ 'ಶೂದ್ರತಪಸ್ವಿ' ಕಾವ್ಯ ಸಹ್ಯಾದ್ರಿ ನೂರು ವರ್ಷ ಮೀರಿ ಬಾಳಲಿ.

'ಕುವೆಂಪು ಧೀಮಂತ ವ್ಯಕ್ತಿ–ಶಕ್ತಿ; 'ನ ಭೂತೋ ನ ಭವಿಷ್ಯತಿ' !

★★★★

ಕಲ್ಪನೆಯ ಕನಸಿನಲಿ ದೇವನ ಕಾಣದೆ,
ಕಾರ್ಯದ ನೆನಹಿನಲಿ ದೇವನ ಕಾಣು

—ಶರಣ ಉಕ್ತಿ.

ಅರಸರ ಮನೆಯುಲಿ ಅರಸಿಯಾಗಿಪ್ಪುದಕ್ಕಿಂತ
ಭಕ್ತರ ಮನೆಯುಲಿ ತೊತ್ತಾಗಿಪ್ಪುದು ಕರಲೇಸಯ್ಯ

—ಬಸವಣ್ಣ.

ದೃಷ್ಟಾಂತ ಕಥೆ

ಮೂವರು ಮಿತ್ರರು

ಒಲವಿನ ಎಳೆಯರೇ,

ಈ ಬಾರಿ ನಿಮಗೆ, ಜೀವನದಲ್ಲಿ ಗಳಿಸಬೇಕಾದ ಸಂಪತ್ತು ಯಾವುವು ಎಂಬ ಬಗ್ಗೆ ಹೇಳುವೆನು. ಒಂದೂರಿನಲ್ಲಿ ಒಬ್ಬ ಸಿರಿವಂತನಿದ್ದ. ಅವನು ಶ್ರೀಮಂತನಿದ್ದಂತೆ ಗುಣವಂತನೂ ಉದಾರಿಯೂ ಆಗಿದ್ದ. ಸಾಮಾನ್ಯವಾಗಿ ಧನಮದ ತಾಳಿ, ಅನ್ಯರನ್ನು ದೀನರನ್ನು ತಿರಸ್ಕಾರದಿಂದ ಕಾಣುವ ಸಿರಿವಂತರೇ ಹೆಚ್ಚು. ಇವನಾದರೋ ಶಿವನು ಕೊಟ್ಟ ಸಂಪತ್ತು ತನಗೆ ಒದಗಿದೆ ಎಂದರಿತು ನಿರ್ಲಿಪ್ತವಾಗಿ ಎಲ್ಲವನ್ನೂ ನೋಡಿ ಕೊಳ್ಳುತ್ತ, ದಾನಧರ್ಮಗಳನ್ನೂ ಮಾಡುತ್ತಲಿದ್ದ. ಒಂದು ಬಾರಿ ಕಾರಣಾಂತರದಿಂದ ಅವನು ನ್ಯಾಯಾಲಯಕ್ಕೆ ಹೋಗಬೇಕಾಯಿತು, ಆಗ ತನ್ನ ವಾದವನ್ನು ಸಮರ್ಥಿಸಲು ಅವನಿಗೆ ಬಲವಾದ ಸಾಕ್ಷಿ ಬೇಕಾಗಿತ್ತು.

ಅಂತಹ ಸಾಕ್ಷಿಯನ್ನು ಹುಡುಕಿಕೊಂಡು ಓರ್ವ ಸ್ನೇಹಿತನ ಬಳಿ ಹೋಗಿ ಕರೆದ. ಅವನು ನಿರ್ದಾಕ್ಷಿಣ್ಯವಾಗಿ, "ನನ್ನ ಮನೆಯ ಹೊಸ್ತಿಲು ದಾಟಿ ಹೊರಬರುವುದಿಲ್ಲ" ಎಂದು ನುಡಿದ. ಶ್ರೀಮಂತನಿಗೆ ತುಂಬಾ ವ್ಯಥೆಯಾಯಿತು. 'ಇಂತಹವನನ್ನು ಮಿತ್ರನೆಂದು, ಆಪದ್ಬಂಧುವೆಂದು ನಂಬಿದ್ದೆನಲ್ಲಾ' ಎಂದು ಪಶ್ಚಾತ್ತಾಪ ಪಟ್ಟನು. ಇನ್ನೋರ್ವ ಸ್ನೇಹಿತನ ಬಳಿಗೆ ಹೋದ. ಅವನಾದರೋ ಹೀಗೆ ನುಡಿದ, 'ಮಿತ್ರನೇ, ನಾನು ಬರಬಲ್ಲೆ. ಆದರೆ ನ್ಯಾಯಾಲಯದ ಹೊಸ್ತಿಲತನಕ ಮಾತ್ರ. ಅದನ್ನು ದಾಟಿ ಒಳಗೆ ಬರಲಾರೆ. ಸಿರಿವಂತನು ವ್ಯಥೆಗೊಂಡು ಅವನ ಆಸೆ ಬಿಟ್ಟು ಮೂರನೆಯವನ ಬಳಿಗೆ ಹೋದನು. ಮೂರನೆಯ ಮಿತ್ರನು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದೇ ಅಲ್ಲದೇ ನ್ಯಾಯಾಲಯದ ಕಟ್ಟೆ ಮೇಲೆ ನಿಂತು ಸಾಕ್ಷ್ಯ ನೀಡಲು ಆತ್ಮಪೂರ್ವಕವಾಗಿ ಒಪ್ಪಿ ಕೊಂಡನು. ಅವನು ಬಲವಾದ ಸಾಕ್ಷಿಯಾದುದರಿಂದ ಕೇಸು ನಮ್ಮ ಶ್ರೀಮಂತ ನಂತೆಯೇ ತೀರ್ಪಾಯಿತು.

(೬೨ನೆಯ ಪುಟ ನೋಡಿ)

ಮೊಸಳೆ ಕಣ್ಣೀರು

ಜಾತಿ ವರ್ಣ ವರ್ಗ, ಏನು ಬಡಿದಾಟ
ಎತ್ತೆತ್ತ ನೋಡಿದರು ಬರಿಯ ಕಾದಾಟ !
ಜಾತೀಯತೆ ಮೂಢಾಚಾರ ಅಂಧತ್ವದ ಕಂತೆ
ಆಗಿಹುದು ಭಾರತವಿದು ಅರ್ಥವಿಲ್ಲದ ಸಂತೆ.
ಹೊಲೆಯನ ಕೂಸೊಂದು ನೀರಲ್ಲಿ ಮುಳುಗುತಿರೆ
ಮೇಲೆತ್ತಲಾರದ ಮಡಿವಂತ ಜಿಜ್ಞಾಸೆ.
ಅದು ಕಡೆಯ ಉಸಿರ
ಕಣ್ಣೆದುರೇ ಎಳೆದರೂ ಚಿಂತೆಯಿಲ್ಲ
ತಾ ಮುಟ್ಟಿ ಮೈಲಿಗೆಯಾಗಲಿಲ್ಲೆಂದು ಸಮಾಧಾನದುಸಿರು.
ಮೆಟ್ಟು ಮಾಡುವ ಮಾದಾರ ಮುಟ್ಟಲಸ್ಪೃಶ್ಯ,
ಅವನು ಮಾಡಿದ ಮೆಟ್ಟು ಅಂಗಕ್ಕೆ ಸ್ಪೃಶ್ಯ ;
ಆಭಾಸಗಳ ಆಗರ, ವಿಪರ್ಯಾಸಗಳ ತವರು !
ಜಾತೀಯತೆಯ ಈ ಅನಿಷ್ಟ ಕುಷ್ಠರೋಗ
ಮತಿವಂತಿಕೆಯ ಬತ್ತಿಸಿದೆ,
ಮಾನವತೆಯ ಕೊಳೆಸಿದೆ.
ಅಂತೆಯೇ ಉದುರಿಹೋಗುತ್ತಿಹವು
ಹಲವು ಹನ್ನೊಂದು ನಲುಗಿದ ಚೇತನಗಳು
ಮಾತೃಧರ್ಮದ ಲತೆಯಿಂದ ಸರಿದು ;
ಸಿಡಿದು ಎದುರಾಗುತ್ತಿಹವು ಬಹಳ ಜೀವಗಳು
ತಾಯಿಧರ್ಮದ ಎದುರು.
ಸುಂದರ ಮೊಗದ ಮೇಲೆ
ಅಂದಗೆಡಿಸುವ ಮೊಡವೆಯೊಲು
ಅಸ್ಪೃಶ್ಯತೆಯ ಕುರೂಪ
ಅಂದಗೆಡಿಸಿಹುದು ತಾಯಿ ಭಾರತಿಯ.
ಯಾವ ಷಾಂಪೂ ಹಾಕಿ
ಯಾವ ಕ್ರಾಂತಿಯ ಕುದಿನೀರನೆರೆದು
ತೊಳೆಯ ಬಲ್ಲೆವೊ ನಾವು
ಈ ಜಾತೀಯತೆಯ ಜಿಡ್ಡ !
ಎಣ್ಣೆಗಾಣವನೊರಸಿದ ಬಟ್ಟೆಯೊಲು

ಜಡ್ಡುಗಟ್ಟಿದೆ ಭಾರತೀಯನ ಮತಿಯು!
ಜಾತಿ ದೇವನಿರ್ಮಿತವೆಂಬ ನಂಬಿಗೆಯು
ಇಳಿದಿಳಿದು ಬೇರ್ವಡೆದಿದೆ
ಮನದ ಪಾತಾಳಲೋಕದೊಳ್.
ಮನುಜ ಧಮನಿಗಳಲ್ಲಿ ಹರಿವ ರಕ್ತವು ಒಂದು
ಎಂದೆಂಬ ಅರಿವು ಮೂಡದಿಹುದಿನ್ನು.
ಮತಿಯ ಶುದ್ಧೀಕರಣ, ಹೃದಯ ಪರಿವರ್ತನ,
ಸಮಾಜ ಗರ್ಭದಲ್ಲಿ ಆಗದ ಹೊರೆತು,
ಆಗಿ ಎಲ್ಲರನ್ನು ನಮ್ಮವರೆನ್ನದ ಹೊರತು,
ಭಾಷಣಗಳೆಲ್ಲವು ಬರಿಯ ಕೂಗಾಟ,
ನಾವು ಮಾಡುವುದೆಲ್ಲ ಕಣ್ಣುಮುಚ್ಚಾಲೆಯಾಟ ;
ಮೊಸಳೆ ಕಣ್ಣೀರುದುರಿಸುವ ಬರಿಯ ಹುಡುಗಾಟ!

("ಅಸ್ಪೃಶ್ಯತೆ" ವಿಷಯದ ಮೇಲೆ ನಡೆದ
ಮಹಿಳಾ ಕವಿಗೋಷ್ಠಿ, ಚನ್ನಪಟ್ಟಣ, ೬–೧೧–೭೭ ಕ್ಕಾಗಿ ಬರೆದುದು)

———

(೬೦ನೇ ಪುಟದಿಂದ ಮುಂದುವರಿದುದು)

ಅದೇ ರೀತಿ ಮಾನವನು ಗಳಿಸಿಕೊಳ್ಳುವ ಮಿತ್ರರು ಮೂವರು-ಭೌತಿಕ ಸಂಪತ್ತು, ಹೆಂಡತಿ-ಮಕ್ಕಳು, ಬಂಧು-ಬಾಂಧವರು, ಮತ್ತು ಪುಣ್ಯ. ಮನುಷ್ಯ ಸತ್ತಾಗ ಅವನ ತೋಟ, ಹೊಲ, ಭವನ, ಸೋಫಾ, ಕಾರು ಮುಂತಾದ ಯಾವ ಭೌತಿಕ ಸಂಪತ್ತು ಸಹ ಅವನನ್ನು ಹಿಂಬಾಲಿಸವು ಆ ಎಲ್ಲವೂ ಮನೆಯ ಹೊಸ್ತಿಲ ಒಳಗೇ ಉಳಿಯುವವು. ಹೆಂಡತಿ-ಮಕ್ಕಳು, ಬಂಧು-ಬಾಂಧವರು (ಸ್ಮಶಾನದವರೆಗೆ) ಸಮಾಧಿ ಮಾಡಲು ಬರುವರು. ತಮ್ಮನ್ನು ಅಗಲಿದ ವ್ಯಕ್ತಿಗಾಗಿ ಒಂದೆರಡು ಹನಿ ಕಣ್ಣೀರು ಸುರಿಸಿ, ಮರಳುವರು. ಕೇವಲ ಪರೋಪಕಾರದಿಂದ, ಪರಸೇವೆಯಿಂದ ಗಳಿಸಿದ ಪುಣ್ಯಮಾತ್ರವೇ ಹಿಂಬಾಲಿಸಿ, ದೈವೀರಾಜ್ಯದಲ್ಲಿ ಇವನ ಪರವಾಗಿ ಸಾಕ್ಷಿ ಹೇಳಿ, ಇವನನ್ನು ದಂಡದಿಂದ ತಪ್ಪಿಸುವುದು. ಅಂತೆಯೇ ಮೊದಲನೆಯ ಎರಡು ಬಗೆಯ ಸಂಪದವನ್ನೇ ನಚ್ಚಿಕೊಂಡು ಮನುಷ್ಯ ವ್ಯರ್ಥನಾಗದೆ, ಸಾಧ್ಯವಾದಷ್ಟು ಪರೋಪಕಾರ ನಿರತನಾಗಿ ಪುಣ್ಯವೆಂಬ ಮಿತ್ರನನ್ನು ಸಂಪಾದಿಸಿಕೊಳ್ಳಬೇಕು.

(ಸಂಗ್ರಹ)

ತ್ರಿನೇತ್ರ.

ಸಾದರ-ಸ್ವೀಕಾರ

೧. **ಪವಾಡಗಳು**:— (ಒಂದು ಸಮಗ್ರ ವಿವೇಚನೆ) ಎ. ಆರ್. ಕೋಳಿ. ಪ್ರ: ಎ. ಆರ್. ಕೋಳಿ. ಎಂ. ಎ. ತತ್ತ್ವಜ್ಞಾನ ವಿಭಾಗ, ಬಸವೇಶ್ವರ ಆರ್ಟ್ಸ್ ಕಾಲೇಜ್, ಬಾಗಲಕೋಟೆ, ಜಿಲ್ಲೆ–ಬಿಜಾಪುರ. ಪುಟ. 80, $\frac{1}{8}$ ಕ್ರೌನ್, ಬೆಲೆ ನಾಲ್ಕು ರೂಪಾಯಿಗಳು.

೨. **ಮುತ್ತಿಡುವ ಮುಳ್ಳಿನ ಹೂವುಗಳು**:— (ಕವನ ಸಂಕಲನ.) ಲೇ: ವಿರಹಿ ಪ್ರ: ದಾವಣಗೆರೆ ಪಾಕೆಟ್ ಬುಕ್ಸ್, ಚೌಕೀಪೇಟೆ, ದಾವಣಗೆರೆ. ಪುಟ–54, $\frac{1}{8}$ ಫುಲ್‌ಸ್ಕೇಪ್, ಬೆಲೆ. 2ರೂ.

೩. **Darsana Mala**: – (English) Translated by Swami Shaktidhara, Narayan Guru Ashrama Kaggalipura–562112; Published by: C. S. Gupta. Satsangha Seva Samiti, Gandhi Bazar, Bangalore–4, Pages 112. Fullscape $\frac{1}{8}$, Rs. 2–40.

೪. **ವಿಶ್ವಜ್ಞ ವಚನಗಳು**:— ಲೇ. ವಿ. ಅಶ್ವತ್ಥನಾರಾಯಣಾಚಾರ್, ಪ್ರ: ಶ್ರೀ ವೀರಬ್ರಹ್ಮೇಂದ್ರ ಪ್ರಕಾಶನ, ದೊಡ್ಡ ಬಳ್ಳಾಪುರ. ಪುಟ. ೨೩೨. $\frac{1}{8}$ ಫುಲ್‌ಸ್ಕೇಪ್ ಬೆಲೆ. 3–50

೫. **ಶರಣರು ಕಂಡ ಬಸವಣ್ಣ**:— ಸಂ: ಎಚ್. ಡಿ. ಚಂದನಗೌಡರು ಪ್ರ: ಸಾಹಿತ್ಯ ಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ. ಡೆಮ್ಮಿ ಅಷ್ಟಾಂಶ, ಪುಟ ೪೪೬. ಬೆಲೆ ೧೨-೦೦.

೬. **ಲಿಂಗಪೂಜೆಯ ವೈಜ್ಞಾನಿಕತೆ**:— ಲೇ: ಶ್ರೀ ಬಸವಾನಂದರು ಪ್ರ: ಶ್ರೀ ಬಸವಾನಂದ, ಬಸವತತ್ತ್ವ ಪ್ರಕಾಶನ ಕಿರಣ, ಉಣಕಲ್ಲು. ಪುಟ. 112, $\frac{1}{8}$ ಕ್ರೌನ್ ಬೆಲೆ. ೫ರೂ.

(ಸೂ:— ಸಾದರ ಸ್ವೀಕಾರಕ್ಕೆ ಒಂದು ಪ್ರತಿ; ವಿಮರ್ಶೆಗೆ ೨ ಪ್ರತಿ ಕಳಿಸಬೇಕು)

ಕಾರ್ಯಕ್ರಮಗಳ ವಿವರ

ಪರಮ ಪೂಜ್ಯರಾದ ಜಗದ್ಗುರು ಮಾತೆ ಮಹಾದೇವಿಯವರು ೨೦-೧೦-೭೭ ರಿಂದ ಅವ್ಯಾಹತವಾಗಿ ಒಂದೂವರೆ ತಿಂಗಳವರೆಗೆ ತುಮಕೂರು ಜಿಲ್ಲೆಯ ತಿಪಟೂರು ನಗರದಲ್ಲಿ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ನಡೆಯಿಸುತ್ತಲಿದ್ದಾರೆ. ನಗರದ ತಾಲ್ಲೋಕ ಆಫೀಸ್ ಮೈದಾನದಲ್ಲಿ ೩-೧೨-೭೭ ರ ವರೆಗೆ ಜರುಗಲಿದೆ. ಈ ಕಾರ್ಯಕ್ರಮ ತನ್ಮಧ್ಯೆ ನವೆಂಬರ್ ೧೨ ಮತ್ತು ೧೩ ರಂದು 'ತರಂಗಿಣಿ' (ಅಕ್ಕಮಹಾದೇವಿಯನ್ನು ಕುರಿತ) ಕಾದಂಬರಿಯ ಮತ್ತು ರಾಜ್ಯ ಸಾಹಿತ್ಯ ಅಕ್ಯಾಡಮಿ ಬಹುಮಾನ ವಿಜೇತ 'ಹೆಪ್ಪಿಟ್ಟ ಹಾಲು' ಕಾದಂಬರಿಯ ಬಿಡುಗಡೆ ವೈಭವದಿಂದ ಜರುಗಿತು. ಪ್ರವಚನದೊಡನೆ ಯೋಗಾಸನ ತರಬೇತಿ ಮತ್ತು ಧರ್ಮಶಾಸ್ತ್ರ ಪ್ರವೇಶ ಕೋರ್ಸಿನ ತರಬೇತಿ ನಡೆಯುತ್ತಿವೆ.

*   *   *   *

ಪರಮ ಪೂಜ್ಯರಾದ ಸದ್ಗುರು ಲಿಂಗಾನಂದ ಸ್ವಾಮಿಗಳವರು ೮-೧೧-೭೭ ರಂದು ಹಾಸನ ಜಿಲ್ಲೆಯ ಅರಸೀಕೆರೆಯಲ್ಲಿ ವಿಶ್ವಧರ್ಮ ಪ್ರವಚನವನ್ನು ಆರಂಭಿಸಿದ್ದಾರೆ. ಶ್ರೀ ಗಾಂಧೀ ಮೈದಾನದಲ್ಲಿ ನಡೆಯುತ್ತಿರುವ ಈ ಸಮಾರಂಭದಲ್ಲಿ ಅಸಂಖ್ಯಾತ ಮುಮುಕ್ಷುಗಳು ಮತ್ತು ಶ್ರೋತೃಗಳು ನೆರೆದು, ಜ್ಞಾನಾಮೃತವನ್ನು ಈಂಟುತ್ತಿದ್ದಾರೆ. ೮-೧೨-೭೭ ರವರೆಗೆ ಅವ್ಯಾಹತವಾಗಿ ಜರುಗಲಿರುವ ಈ ಕಾರ್ಯಕ್ರಮದ ಮಧ್ಯದಲ್ಲಿ ದಿ. ೧೨-೧೧-೭೭ ರಂದು ಕಲ್ಯಾಣ ಕಿರಣ ಮಾಸಪತ್ರಿಕೆಯ ನವೆಂಬರ್ ರಾಜ್ಯೋತ್ಸವ ಸಂಚಿಕೆ ವೈಭವದಿಂದ ಬಿಡುಗಡೆಯಾಯಿತು.

★ ವರದಿ: **ಶಿವರಾಯ ಚಂದ್ರಕಂಠಿ**

ಕಲ್ಯಾಣ ಕಿರಣದ ಆಜೀವ ಸದಸ್ಯರು.


೧. ಡಾ॥ ಲಲಿತಾ ಗುರುಬಸವಯ್ಯ, ಬೆಂಗಳೂರು. ೧೫೧-೦೦
೨. ಶರಣ. ಜೆ. ಎಲ್. ಮಂಜುನಾಥ, ಬೆಂಗಳೂರು. ೧೫೧-೦೦
೩. ಶರಣೆ. ಸುಶೀಲಾ ಲಿಂಗೇಗೌಡರು, ತಿಪಟೂರು. ೧೫೧-೦೦
೪. ಶರಣೆ. ಚಂದ್ರಮ್ಮ ರುದ್ರೇಗೌಡರು, ತಿಮ್ಲಾಪುರ. ೧೫೧-೦೦
೫. ಶ್ರೀ ವೀರಶೈವ ತತ್ತ್ವ ಪ್ರಚಾರ ಸಂಘ ಬಸವನಗುಡಿ, ಬೆಂಗಳೂರು. ೧೫೧-೦೦
೬. ಶರಣ ಮಲ್ಲಪ್ಪ ಡಿ. ಎಸ್. ಸಾಮನವಳ್ಳಿ ಶಿವಮೊಗ್ಗ ಜಿಲ್ಲೆ. ೧೫೧-೦೦
೭. ಶರಣ ರೇವಣಸಿದ್ದಪ್ಪ ಪಾಟೀಲ ಪೋಲಕಪಳ್ಳಿ ೧೫೧-೦೦
೮. ಜಿ. ಶರಣ ಬಸಪ್ಪ ರೇಂಜ್ ಫಾರೆಸ್ಟ್ ಆಫೀಸರ್, ಸಾಗರ ೧೫೧-೦೦
೯. ಗಂಗಮ್ಮ ಚಂದ್ರಶೇಖರ, ತಿಪಟೂರು ೧೫೧-೦೦

ವಿಶ್ವ ಕಲ್ಯಾಣ ಮಿಷನ್ನಿನ

ಸಂಯಿಧಾನ ಸಂಗ್ರಂಥ ಮಾಲೆಯ ಲಭ್ಯವಿರುವ ಗ್ರಂಥಗಳು

			ರೂ. ಪೈ.
೧.	ದೇವಪೂಜಾ ವಿಧಾನ	ಸ್ವಾಮಿ ಲಿಂಗಾನಂದ	೨-೦೦
೨.	ವಿರಹ ತರಂಗ	ಮಾತೆ ಮಹಾದೇವಿ	೩-೦೦
೩.	ಬಸವ ತತ್ತ್ವ ದರ್ಶನ	,,	೧೮-೦೦
೪.	ಚಿನ್ಮೂಲಾದ್ರಿಯ ಚಿತ್ಕಳೆ	ಸ್ವಾಮಿ ಲಿಂಗಾನಂದ	೬-೦೦
೫.	ಸಾಮೂಹಿಕ ಪ್ರಾರ್ಥನೆ	ಸಂ : ಮಾತೆ ಮಹಾದೇವಿ	೦-೫೦
೬.	ಹಿಂದೂ ಯಾರು ?	,,	೦-೫೦
೭.	ಬಸವ ವಚನ ಸುಧಾ	ಸಂ : ಮಾತೆ ಮಹಾದೇವಿ	೨-೦೦
೮.	ವಚನಾಮೃತ	ಸ್ವಾಮಿ ಲಿಂಗಾನಂದ	೨-೦೦
೯.	ಕಲ್ಯಾಣ ಕ್ರಾಂತಿ	ಮಾತೆ ಮಹಾದೇವಿ	೩-೫೦
೧೦.	ದೇವರ ಮಕ್ಕಳು	,,	೨-೫೦
೧೧.	ಪತಿತೋದ್ಧಾರಕ	,,	೧-೫೦
೧೨.	ಲಿಂಗಾಯತ ಧರ್ಮ ಕೈಪಿಡಿ	,,	೨-೫೦
೧೩.	ಲಿಂಗಾಯತ ಧರ್ಮ ಸಂಸ್ಥಾಪಕರಾರು ?	ಬಿ. ಸಿ. ಜವಳಿ	೪-೦೦
೧೪.	ಬಸವಣ್ಣನವರ ವಚನ ಪದ ಪ್ರಯೋಗ ಕೋಶ	ಎಸ್. ಆರ್. ಗುಂಜಾಳ	೫೦.೦೦
೧೫.	ದೇವನೆಡೆಗೆ	ಮಾತೆ ಮಹಾದೇವಿ	೧-೦೦
೧೬.	ಹೆಪ್ಪಿಟ್ಟ ಹಾಲು	,,	೧೬-೦೦
೧೭.	ಅನುಭವ ಮಂಟಪ	,,	೧-೦೦
೧೮.	Revolution in Kalyana	Mate Mahadevi	೫.೦೦
೧೯.	A Guide to Lingayatism	,,	೬-೦೦
೨೦.	Emblem of God	Swami Lingananda	೬-೦೦
೨೧.	ಆಧ್ಯಾತ್ಮ ಮತ್ತು ಮಹಿಳೆ	ಮಾತೆ ಮಹಾದೇವಿ	೧ ೦೦
೨೨.	ತರಂಗಿಣಿ (ಅಕ್ಕಮಹಾದೇವಿಯ ಕಾದಂಬರಿ)	,,	೩೩-೦೦
೨೩.	ವಿಶ್ವ ವಿಭೂತಿ ಬಸವಣ್ಣ	,,	೪-೦೦
೨೪.	Lingayatism	,,	೩-೦೦
೨೫.	ವಿಶ್ವ ಕಲ್ಯಾಣ ಗೀತೆ	ಸಂ : ,,	೩-೦೦
೨೬.	Mataji A Profile		೦-೫೦

ಬಸವಣ್ಣ, ಅಕ್ಕಮಹಾದೇವಿ. ಗುರೂಜಿ, ಮಾತಾಜಿಯವರ ಭಾವಚಿತ್ರಗಳು ಪ್ರತಿಯೊಂದಕ್ಕೆ ೧-೫೦
ಲಿಂಗಾಯತ ಯಾರು ? (೦-೨೫) ವಿಶ್ವ ವಿಭೂತಿ ಬಸವಣ್ಣ (ಚಾರ್ಟ್) ೦-೫೦



''ತರಂಗಿಣಿ'' ಅಕ್ಕಮಹಾದೇವಿಯನ್ನು ಕುರಿತು ಪೂಜ್ಯ ಮಾತಾಜಿಯವರು ರಚಿಸಿದ ಕಾದಂಬರಿಯ ಎರಡನೆ ಆವೃತ್ತಿಯ ಬಿಡುಗಡೆ ಕೆ. ಆರ್. ಲಿಂಗಪ್ಪನವರಿಂದ ದಿ. ೧೨-೧೧-೭೭ರಂದು, ತಿಪಟೂರಿನಲ್ಲಿ.

Correspond to :

BASAVA MANTAPA
No. 24, Chord Road, II Block, Rajajinagar